ಮಾನವಿಕ ಕರ್ನಾಟಕ

ಸಂಪುಟ ೯ ಸಂಚಿಕೆ ೧

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೧೨ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೧

೩೩

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೮

MANAVIKA KARNATAKA, Kannada Quarterly (Humanities) of the University of Mysore, Volume 9, Number 1, November 1978. Edited by Dr. B. R. Gopal and Dr. B. S. Srikantaradhya.

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ-570 012

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570 008

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ಅಂಬಳಿಕೆ ಹಿರಿಯಣ್ಣ	ಅಧ್ಯಾಪಕರು, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
೨. ಕೆ. ಬಿ. ರಾಮಕೃಷ್ಣರಾವ್	ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥರು ತತ್ತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ,
೩. ಎಂ. ಎಸ್. ಕೃಷ್ಣಮೂರ್ತಿ	ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ,
೪. ಎಂ. ಮಾದಯ್ಯ	ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ,
೫. ಸಿ. ಕೆ. ರೇಣುಕಾರ್ಯ	ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ
೬, ಮೋಹನ ಹೆಗ್ಗಡೆ	ಕನ್ನಡ ಪತ್ರಿಕಾ ಸಂಗ್ರಾಹಕರು (ಪಿ ಒ.) ಬಂದ ಗದ್ದೆ, ಶಿವಮೊಗ್ಗ ಜಿಲ್ಲೆ
೭. ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
೮. ವಿ. ಎನ್. ಶೇಷಗಿರಿರಾವ್	ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ,
೯. ಅನಂತರಾಮು	ಸಂಶೋಧಕರು, ತತ್ತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ,

ಅಂಬಳಿಕೆ ಹಿರಿಯಣ್ಣ

ಕಚ್ಚಾಗೌಳಿಗರು*

ಕಚ್ಚಾಗೌಳಿಗರು ಮೂಲ ಸಂಸ್ಕೃತಿಯನ್ನು ಸಾಕಷ್ಟು ದಟ್ಟವಾಗಿ ಉಳಿಸಿಕೊಂಡು ಬಂದಿರುವ ಒಂದು ವಿಶಿಷ್ಟ ಬುಡಕಟ್ಟು ಜನಾಂಗ. ಇವರ ಮನೆಮಾತು ಮರಾಠಿ. ಅವರೇ ಹೇಳಿಕೊಳ್ಳುವಂತೆ, ಕಳೆದ ಐದು ದಶಕಗಳಿಂದೀಚೆಗೆ ಎಮ್ಮೆ ಸಾಕಾಣಿಕೆಗಾಗಿ ಗೋವಾ ಮತ್ತು ಮಹಾರಾಷ್ಟ್ರ ಪ್ರಾಂತಗಳಿಂದ ಕರ್ನಾಟಕಕ್ಕೆ ವಲಸೆ ಬಂದವರು. ಇವರು ಕರ್ನಾಟಕಕ್ಕೆ ಹೇಗೆ ಏಕೆ ಎಲ್ಲಿಂದ ಬಂದರು ಎಂಬ ಪ್ರಶ್ನೆಗೆ ಸ್ಪಷ್ಟಲಿಖಿತ ದಾಖಲೆಗಳಿಲ್ಲದಿದ್ದರೂ ಅವರ ವೃತ್ತಿ ಕಸಬುಗಳೇ ಅವರು ಇಲ್ಲಿಗೆ ಬಂದ ನಿಜವಾದ ಕಾರಣಗಳನ್ನು ಹೇಳುತ್ತವೆ. ಸದ್ಯ ಇವರ ಮೂಲದ ಬಗೆಗೆ ಇನ್ನೂ ಹೆಚ್ಚು ಖಚಿತವಾದ ವಿವರಗಳು ತಿಳಿದುಬಂದಿಲ್ಲ.

ಸದ್ಯದ ಪರಿವೀಕ್ಷಣೆಯಂತೆ ಇವರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಚನ್ನಗಿರಿ, ಶಿಕಾರಿಪುರ, ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ತರೀಕೆರೆ ತಾಲ್ಲೂಕುಗಳಲ್ಲಿ ಕಂಡುಬಂದಿದ್ದಾರೆ.

ಎಮ್ಮೆ ಸಾಕಾಣಿಕೆಯನ್ನೇ ಪ್ರಧಾನವೃತ್ತಿಯಾಗಿ ಅವಲಂಬಿಸಿರುವ ಇವರನ್ನು ಅಲೆಮಾರಿಗಳೆಂದು ಭಾವಿಸಲಾಗಿದೆ. ಎಮ್ಮೆ ಹಿಂಡುಗಳೊಡನೆ ಅವಕ್ಕೆ ಮೇವು–ನೀರುಗಳನ್ನು ಅರಸುತ್ತ ಹುಲ್ಲುಗಾವಲಿನಿಂದ ಹುಲ್ಲುಗಾವಲಿಗೆ ಅಡವಿಯಿಂದ ಅಡವಿಗೆ ಕಣಿವೆಯಿಂದ ಕಣಿವೆಗೆ ಅಲೆಯುವ ಮಂದಿ ಇವರು. ಎಮ್ಮೆಗಳಿಗೆ ಎಲ್ಲಿ ಸಮೃದ್ಧವಾಗಿ ಹುಲ್ಲು ನೀರು ದೊರಕುತ್ತದೊ ಅಲ್ಲಿ ಇವರ ವಾಸ. ಮತ್ತೆ ಮೂರು ತಿಂಗಳಿಗೊ ಆರು ತಿಂಗಳಿಗೊ ಇನ್ನೊಂದು ಅಡವಿಗೆ ಪಯಣ. ತಮ್ಮ ಎಮ್ಮೆಗಳನ್ನು ರೋಗರುಜಿನಗಳಿಂದ ಪಾರುಮಾಡುವ ಸಲುವಾಗಿ, ಅವಕ್ಕೆ ಮೇವು ನೀರುಗಳನ್ನು ಒದಗಿಸುವ ಉದ್ದೇಶದಿಂದ ಇಂಥ ಅಲೆಮಾರಿ ಅಡವಿಯ ಬದುಕು ಇವರಿಗೆ ಅನಿವಾರ್ಯವೆನಿಸಿದೆ.

ಮಕ್ಕಳಿಂದ ತೊಡಗಿ ವೃದ್ಧರಾದಿಯಾಗಿ ಲಿಂಗಬೇಧವಿಲ್ಲದೆ ಸಾರ್ವತ್ರಿಕವಾಗಿ ಎಲ್ಲರೂ ಕಾಸೆ ಧರಿಸುವುದರಿಂದಲೂ ಮರಾಠಿ ಮಾತನಾಡುವ ಪ್ರಾಂತಗಳಿಂದ ಇಲ್ಲಿಗೆ ಬಂದಿರುವುದರಿಂದಲೂ ತಮಗೆ 'ಕಚ್ಚಾಮರಾಠರು' ಎಂದು ಹೆಸರು ಬಂದಿರುವುದಾಗಿ ಹೇಳಿಕೊಳ್ಳುತ್ತಾರೆ. ಕೆಲವೆಡೆಗಳಲ್ಲಿ 'ಕಚ್ಚಾಗೌಳಿಗರು' ಎಂದೂ ಕರೆಯುವುದುಂಟು. ಕಚ್ಚೆ ಧರಿಸುವುದರಿಂದಲೂ ಎಮ್ಮೆ ಸಾಕಾಣಿಕೆಯಿಂದ ಜೀವಿಸುವುದರಿಂದಲೂ ಇವರಿಗೆ 'ಕಚ್ಚಾಗೋವಳಿಗ' (<ಗೌಳಿಗ) ಎಂಬ ಹೆಸರು ಬಂದಿರುವುದು ಸಾರ್ಥಕವೆನಿಸಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಇವರು 'ಧಂಗರ್ ಮರಾಠರು' ಎಂದೂ ಹೆಸರಾಗಿದ್ದಾರೆ. (ಧಾಂಗರ ಪದ ಧೇನು ಧಾತುವಿನಿಂದ ಬಂದಿದೆ. ಧೇನು ಎಂದರೆ ಗೋವು ಎಂದರ್ಥ) ಮೊದಮೊದಲು ಇವರು ದನಗಳ ಪಾಲನ ಪೋಷಣ ಕಾರ್ಯ ನಿರ್ವಹಿಸುತ್ತಿದ್ದಿರಬೇಕು. ಆದ್ದರಿಂದಲೇ ಆ ಹೆಸರು. ಈಗೀಗ ಹಿಂದಿನಂತೆ ಎಮ್ಮೆಗಳ ಜೊತೆಗೆ ದನಗಳನ್ನೂ ಸಾಕಿಕೊಂಡು ಬರುತ್ತಿದ್ದುದಾಗಿ ತಿಳಿದುಬಂದಿದೆ.

ಪಶುಪಾಲನೆಯೊಂದಿಗೆ ಜೇನುತುಪ್ಪ, ನಸರಿತುಪ್ಪ ಸಂಗ್ರಹಿಸುವ, ಸಣ್ಣ ಸಣ್ಣ ಪ್ರಾಣಿಗಳನ್ನು ಬೇಟೆಯಾಡುವ ಹವ್ಯಾಸಗಳನ್ನೂ ರೂಢಿಸಿಕೊಂಡಿದ್ದಾರೆ. ಉಳಿದಂತೆ ಬೇರೆ ಯಾವ ದಂಧೆಯೂ ಹೆಚ್ಚು ಗೊತ್ತಿಲ್ಲ.

ತಮ್ಮದೇ ಆದ ಒಂದು ವಿಶಿಷ್ಟ ಸಾಂಸ್ಕೃತಿಕ ಆವರಣದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಬದುಕು ನಡೆಸುವ ಇವರು ನಾಗರಿಕ ಪ್ರಭಾವದಿಂದ ಮುಕ್ತರಾದವರಂತೆ ಕಾಣಿಸಿಕೊಳ್ಳುತ್ತಾರೆ. ಮುಖ್ಯವಾಗಿ ಕಾಡುಮೇಡುಗಳಲ್ಲೇ ವಾಸಿಸುವ ಬುಡಕಟ್ಟು ಜನಾಂಗವಾದ್ದರಿಂದ ಇವರ ಮೂಲಸಂಸ್ಕೃತಿ ತನ್ನ ಮೂಲ ಸ್ವರೂಪದಲ್ಲೇ ಉಳಿದುಕೊಂಡು ಬಂದಿದೆ.

ಗುಡಿಸಲು ಮಾದರಿ: ಮರದ ಕಂಬಗಳನ್ನಾಧರಿಸಿದ ಬಿದಿರಿನ ಬೊಂಬಿನ ಗುಡಿಸಲು, ಅದಕ್ಕೆ ಜೊಂಡುಹುಲ್ಲಿನ 'ಮಾಡು'[1]; ಗೋಡೆಗೆ ಬದಲಾಗಿ ಮಣ್ಣು ಬಳಿದ ಬಿದಿರಿನ ನೆರಿಕೆಯ 'ತಡಿಕೆಬೇಲಿ'. ಗುಡಿಸಲ ಬಾಗಿಲು ಪೂರ್ವ ಇಲ್ಲವೆ ಉತ್ತರ ದಿಕ್ಕಿಗಿರುತ್ತದೆ. ಗುಡಿಸಲಿನ ಮೇಲ್ಚಾವಣಿಯ ಎರಡೂ ಮಗ್ಗುಲುಗಳು ನೆಲಮಟ್ಟದಿಂದ ಎರಡು ಅಡಿಗಳಷ್ಟೇ ಅಂತರದ ಎತ್ತರದಲ್ಲಿರುತ್ತವೆ. ಗುಡಿಸಲೊಳಗೆ ಮಳೆ ನೀರು ಬರುವುದನ್ನು ತಡೆಗಟ್ಟಲು ಗುಡಿಸಲಿನ ಲಾಯದ ಸುತ್ತಲೂ ಕಾಲುವೆ ತೋಡಲಾಗಿರುತ್ತದೆ.

ವಾಸದ ಗುಡಿಸಲಿಗೆ ಚಾಚಿಕೊಂಡಂತೆ ಇಲ್ಲವೆ ಗುಡಿಸಲಿಗೆ ಅಭಿಮುಖವಾಗಿ ಎಮ್ಮೆ 'ಒಡ್ಡಿ'ಯೊಂದು ನಿರ್ಮಾಣಗೊಂಡಿರುತ್ತದೆ. ಅದರ ಪಕ್ಕದಲ್ಲಿ ಕರುಗಳ ಒಡ್ಡಿ[2] ಇರುತ್ತದೆ. ಆ ಎರಡೂ ಒಡ್ಡಿಗಳ ನಡುವೆ ಗುಡಿಸಲಿನ ಮುಂಭಾಗದಲ್ಲಿ ಒಂದು ಚಪ್ಪರ ಎದ್ದು ನಿಂತಿರುತ್ತದೆ. ಆ ಚಪ್ಪರದ ಮೇಲೆ ಎಮ್ಮೆಗಳು ತಿನ್ನುವ ಕಾಡಿನಲ್ಲಿ ದೊರಕುವ ಹುಲ್ಲನ್ನು ಬಣವೆ ಹಾಕಿರುತ್ತಾರೆ.[3]

ರಾತ್ರಿವೇಳೆಯಲ್ಲಿ, ದುಷ್ಟಪ್ರಾಣಿಗಳ ಹಾವಳಿ ತಪ್ಪಿಸಿಕೊಳ್ಳಲು, ಸೊಳ್ಳೆ ಕ್ರಿಮಿ ಕೀಟಾದಿಗಳನ್ನು ದೂರವಿರಿಸಲು ಗುಡಿಸಲ ನಾಲ್ಕೂ ಕಡೆ ಇಡೀ ರಾತ್ರಿ ಬೆಂಕಿ ಉರಿಸುತ್ತಾರೆ.

ವಾಸದ ಗುಡಿಸಲನ್ನು ಇಡಿಯಾಗಿ ಮೂರು ಭಾಗಗಳಾಗಿ ವಿಭಜಿಸಿಕೊಂಡು ಒಂದರಲ್ಲಿ ದೇವರನ್ನು ಕುಳ್ಳಿರಿಸಿರುತ್ತಾರೆ; ಇನ್ನೊಂದರಲ್ಲಿ ಅಡಿಗೆ ಮಾಡಿಕೊಳ್ಳುತ್ತಾರೆ-ಅದನ್ನೇ ಮಲಗಲೂ ಉಪಯೋಗಿಸಿಕೊಳ್ಳುತ್ತಾರೆ; ಮತ್ತೊಂದನ್ನು ಸಾರ್ವಜನಿಕರು ಕುಳಿತುಕೊಳ್ಳಬಹುದಾದ ಚಾವಡಿಯನ್ನಾಗಿ ರೂಪಿಸಿರಲಾಗುತ್ತದೆ. ಮನೆಯ ಒಳಭಾಗದಲ್ಲಿ ಬಿದಿರುದಬ್ಬೆಯ 'ಅಟ್ಟ'ಗಳನ್ನು ನಿರ್ಮಿಸಿ ಅದರ ಮೇಲೆ ಧಾನ್ಯ, ಕಾಳು, ಪದಾರ್ಥಗಳನ್ನಿಟ್ಟುಕೊಳ್ಳುತ್ತಾರೆ. ಪದಾರ್ಥಗಳು ತೇವಗೊಂಡು ಕೆಡದಂತೆ ಈ ಮುಂಜಾಗ್ರತೆ.

ಇವರು ಕಾಡಿನಲ್ಲಿ ತಮ್ಮ ಹಾಡಿ[4]ಗಳನ್ನು ಆಗಾಗ ಬದಲಿಸುತ್ತಿರುತ್ತಾರೆ. ತಮ್ಮ ವೃತ್ತಿಯ ಹಿನ್ನೆಲೆಯಲ್ಲಿ (ಮುಖ್ಯವಾಗಿ ಎಮ್ಮೆಗಳಿಗೆ ಮೇವು ನೀರುಗಳನ್ನು ಒದಗಿಸುವ ಉದ್ದೇಶದಿಂದ) ಇವರು ಒಂದು ತಪ್ಪಲಿನಿಂದ ಇನ್ನೊಂದು ತಪ್ಪಲಿಗೆ ತಮ್ಮ ನೆಲೆಗಳನ್ನು ಬದಲಿಸುವುದು ಸಹಜವಾಗಿದೆ. ಆದರೆ ಆ ಎಲ್ಲ ನೆಲೆಗಳೂ ಸಾಮಾನ್ಯವಾಗಿ ತಾತ್ಕಾಲಿಕವಾಗಿರುತ್ತವೆ. ಖಾಯಂ ನೆಲೆಗಳೂ ಇಲ್ಲದಿಲ್ಲ. ಕಡೇಪಕ್ಷ ನಾಲ್ಕಾರು ವರ್ಷಗಳವರೆಗಾದರೂ ಒಂದೆಡೆ ಖಾಯಂ ಆಗಿ ನೆಲೆಗೊಳ್ಳಲು ಸಾಧ್ಯವಾಗುವಂತೆ ಅನುಕೂಲವೆನಿಸಿದ ಒಂದು ಅಡವಿ ಪ್ರದೇಶದಲ್ಲಿ ಒಂದೊಂದು ಸುಭದ್ರ ಗುಡಿಸಲನ್ನು ನಿರ್ಮಿಸಿಕೊಂಡಿರುತ್ತಾರೆ. ಎಲ್ಲೇ ಯಾವ ಪ್ರದೇಶಕ್ಕೇ ವಲಸೆ ಹೋಗಿದ್ದರೂ ಕೆಲವು ನಿರ್ದಿಷ್ಟ ಮಾಸಗಳಲ್ಲಾದರೂ ಆ ಖಾಯಂ ನೆಲೆಗೆ ಹಿಂದಿರುಗಿ ಬಂದು ಸಾಂಪ್ರದಾಯಿಕ ಜೀವನ ನಡೆಸುವುದು ವಾಡಿಕೆ.

ಸಾಮಾನ್ಯವಾಗಿ, ಬೇಸಿಗೆ ದಿನಗಳಲ್ಲಿ, ನೀರಿನ ಅಭಾವ ಹೆಚ್ಚಾದಾಗ ಕಾವಲಿನಿಂದ ಕಾವಲಿಗೆ ಎಮ್ಮೆ ಹಿಂಡುಗಳೊಡನೆ ವಲಸೆ ಹೋದಾಗ ಎಲ್ಲಿ ತಂಗಬೇಕಾಗುತ್ತದೊ ಅಲ್ಲಿ ಹದಿನೈದು

ದಿನಗಳ ಮಟ್ಟಿಗೊ, ಒಂದು ತಿಂಗಳ ಮಾತ್ರಕ್ಕೊ ನದಿದಡದಲ್ಲೇ ಒಂದು ಹಸಿರು ಚಪ್ಪರ ನಿರ್ಮಿಸಿಕೊಂಡು ಎಮ್ಮೆಗಳ ರಕ್ಷಣೆ, ಪೋಷಣಕಾರ್ಯವನ್ನು ನಿರ್ವಹಿಸಲಾಗುವುದು.

ಕುಳಿಗಳು: ಕಚ್ಚಾಗೌಳಿಗರಲ್ಲಿ ಸುಮಾರು ಇಪ್ಪತ್ತಮೂರು ಕುಳಿಗಳಿವೆ. ಈ ಕುಳಿಗಳನ್ನು 'ಮನೆತನ'ಗಳೆಂದೂ ಕರೆಯಲಾಗುವುದು. ಇವರ ಕುಳಿಗಳನ್ನು ಹೀಗೆ ಪಟ್ಟಿಮಾಡಬಹುದು: 1. ವಾಗ್ಮಡೆ 2. ವಾನೇರಾಯಾ 3 ಮಾಂಗೋಚಿ 4. ಯಡಿಗ್ಯ 5, ಲಾಂಬೂರ್ 6. ಪಾಲ್ಯಾ 7. ವರುಕ್ 8. ತಾಂಬಿಯಾ 9. ಜಾನುಕೋರ್ 10. ಪಾವನ್ಯಾ 11. ಜಂಗುಲಿಯಾ 12 ಕಾಳ್ಗ್ಯಾ 13. ಕೊಕ್ಕರೀಯ 14. ಪಟಕಾರ 15. ತಾಟ್ಯ 16. ಯಮುಕೋರ್ 17. ಮಲುಗೊಂಡ 18. ಘುಖರ್ಾ್ಯ 19. ಕಾತ್ರೋಟ್ 20. ಜೋರಿಯಾ 21. ಪಿಂಗ್ರಿಯಾ 22. ಕೊಳಾಪ್ಪ 23. ಕುಟ್ಟುಕೋರ್

–ಈ ಒಂದೊಂದು ಕುಳಿಯೂ ಒಂದೊಂದು ದೈವವನ್ನು ಆರಾಧಿಸುವುದು ಒಂದು ವೈಶಿಷ್ಟ್ಯ. ಅಲ್ಲದೆ ತಮ್ಮ ಮನೆದೈವವನ್ನು 'ಮನೆದೇವರು' ಎಂಬ ಹೆಸರಿನಲ್ಲಿ ಗುರುತಿಸಿ ಸಾರ್ವಜನಿಕ ಹಾಗೂ ಬುಡಕಟ್ಟಿನ ದೈವದಿಂದ ಪ್ರತ್ಯೇಕಿಸುತ್ತಾರೆ.

ಮೇಲೆ ಹೇಳಿದ ಕುಳಿಗಳು ಕೆಲವು ಪ್ರಾಣಿಗಳ ಹೆಸರಾಗಿದ್ದು ವಂಶಮೂಲ ಸೂಚಕಗಳೂ ಹೌದು. ಉದಾಹರಣೆಗೆ 1. ವಾಗ್ಮಡೆ–ಹುಲಿ 2. ವಾನೇರಾಯ–ಹಾವು 3. ಮಾಂಗೋಚಿ-ಮಂಗ (ಆಂಜನೇಯನ ಆರಾಧಕರು)–ಹೀಗೆ ಕೆಲವು ಪ್ರಾಣಿ, ಸಸ್ಯ ಮತ್ತು ವಸ್ತುಗಳು ಇವರ ಆರಾಧನ ವಸ್ತುಗಳಾಗಿ ಪರಿಣಮಿಸಿವೆ. ಇವರು ತಮ್ಮ ಕುಲಸಂಕೇತಗಳಾದ ಪ್ರಾಣಿ, ಸಸ್ಯ ಮತ್ತು ವಸ್ತುವಿಶೇಷಗಳನ್ನು ಭಕ್ತಿಯಿಂದ ಆರಾಧಿಸುವುದಷ್ಟೇ ಅಲ್ಲ; ಆ ಪ್ರಾಣಿಗಳನ್ನು ಕೊಲ್ಲುವುದಾಗಲೀ ತಿನ್ನುವುದಾಗಲೀ ಇವರಲ್ಲಿ ನಿಷಿದ್ಧ.

ಈ ಮೊದಲು ಹೇಳಿದ ಇಪ್ಪತ್ತಮೂರು ಕುಳಿಗಳಲ್ಲದೆ 'ಜೋಗಿಕುಳಿ' ಎಂದು ಇವರಲ್ಲೇ ಇನ್ನೊಂದು ವಿಶಿಷ್ಟ ಗುಂಪು ಕಂಡುಬಂದಿದೆ. ಈ ಜೋಗಿಕುಳಿಯವರು ಎಲ್ಲಾಪುರ ಮತ್ತು ಹುಲಿಕಲ್ ಕಾಡುಪ್ರದೇಶಗಳಲ್ಲೂ ಗೋವಾ ಅರಣ್ಯಗಳಲ್ಲೂ ವಾಸಿಸುತ್ತಿರುವುದಾಗಿ ತಿಳಿದುಬಂದಿದೆ. ಕಚ್ಚಾಗೌಳಿಗರು ಇವರನ್ನು ತಮ್ಮ ಬುಡಕಟ್ಟಿನ ಹಿರಿಯ ಕುಳಿಯೆಂದೂ ಗುರುಸ್ಥಾನದಲ್ಲಿರುವ ಶ್ರೇಷ್ಠ ಕುಳಿ ಎಂದೂ ಬಣ್ಣಿಸುತ್ತಾರೆ.

ಜೋಗಿಕುಳಿಯವರು ಈ ಬುಡಕಟ್ಟು ಜನಾಂಗದ ಗುರುಪೀಳಿಗೆಯವರಾದ್ದರಿಂದ ಅವರು ನೂರು ವರ್ಷಗಳಿಗೊಮ್ಮೆ ಬುಡಕಟ್ಟಿನ ತಾಣಗಳಿಗೆ ಭೇಟಿ ನೀಡಿ ಭಕ್ತಾದಿಗಳಿಂದ ಕಾಣಿಕೆ ಪಡೆಯುವ ಹಕ್ಕನ್ನು ಸಂಪಾದಿಸಿದ್ದಾರೆ. ಪ್ರತಿಯೊಂದು ಹಾಡಿಯೂ ಜೋಗಿಯ ಭೇಟಿ ಸಂದರ್ಭದಲ್ಲಿ ಯಥಾನುಶಕ್ತಿ ದಾನದರೂಪದಲ್ಲಿ ಕಾಣಿಕೆ ಸಲ್ಲಿಸುತ್ತದೆ. ಏನೂ ಇಲ್ಲದ ಸಂದರ್ಭಗಳಲ್ಲಿ ಸಾಕಿದ ಕೋಣಗಳನ್ನೇ ನೀಡುವುದುಂಟು.

ಜೋಗಿಗಳು ತಮ್ಮ ಭೇಟಿಯ ಕಾಲದಲ್ಲಿ ಪ್ರತಿಯೊಂದು ಹಾಡಿಯಲ್ಲೂ ಕನಿಷ್ಠ ಒಂದೊಂದು ವಾರ ತಂಗಿದ್ದು ಬುಡಕಟ್ಟಿನವರ ಪ್ರೀತ್ಯಾದರಗಳನ್ನು ಗಳಿಸುತ್ತಾ ಜನಾಂಗದ ವಿಚಾರ, ಕಾಲಜ್ಞಾನ, ಸ್ವಾರಸ್ಯಕರ ಪುರಾಣ ಘಟನೆಗಳನ್ನು ಅವರಿಗೆ ಬಣ್ಣಿಸಿ ಹೇಳುತ್ತಾ ಬುಡಕಟ್ಟಿನ ಸಂಘಟನಕಾರ್ಯವನ್ನು ನಿರ್ವಹಿಸುತ್ತಾರೆ.

ಜೋಗಿ ಕುಳಿಯ ಜನರನ್ನು ಬಿಟ್ಟರೆ 'ಯಡಿಗ್ಯ' ಕುಳಿಯವರು ಶ್ರೇಷ್ಠರು. ಹಾಡಿಯ ಧಾರ್ಮಿಕವಿಧಿ ಉಪಾಸನೆ ಆಚರಣೆಗಳನ್ನು ನಡೆಸಿಕೊಡುವವರು ಅವರೇ. ಈ ಯಡಿಗ್ಯ ಮನೆತನದವರು ಹಾಡಿಯಲ್ಲಿ ವಾಸವಾಗಿಲ್ಲದಿದ್ದರೆ ಎರಡನೆಯ ಶ್ರೇಷ್ಠಕುಳಿಯಾದ 'ಲಾಂಬೂರ್' ವಂಶದ ವ್ಯಕ್ತಿ ಯಡಿಗ್ಯನಾದವನು ನಿರ್ವಹಿಸಬೇಕಾಗಿದ್ದ ಎಲ್ಲ ಧಾರ್ಮಿಕ ಸಮಾರಂಭಗಳನ್ನು ನಡೆಸಿಕೊಡುತ್ತಾನೆ.

ಕೆಲವು ಕುಳಿಗಳನ್ನು ಆ ಹೆಸರುಗಳಿಂದ ಕರೆಯಲು ಇದ್ದಿರಬಹುದಾದ ಕಾರಣವನ್ನು ವಿವರಿಸುವ ಕೆಲವು ಕಟ್ಟುಕಥೆಗಳು ಇಂದಿಗೂ ಇವರಲ್ಲಿ ಪ್ರಚಲಿತವಿವೆ.

ತಾಂಬಿಯಾ : ಈ ಕುಳಿಯ ಸಂಬಂಧವಾಗಿ ವಾಕ್ಸಂಪ್ರದಾಯದಲ್ಲಿ ರೂಢಿಯಲ್ಲಿರುವ ಒಂದು ಕಥೆ ಹೀಗಿದೆ : ಒಬ್ಬ ತಾಯಿಗೆ ನಾಲ್ಕು ಮಂದಿ ಮಕ್ಕಳು. ಆಕೆಯ ಮನೆಯಲ್ಲಿ ತಾಮ್ರದ ಪಾತ್ರೆಗಳು ಹೇರಳ ಇದ್ದವಂತೆ. ಅದನ್ನು ತಿಳಿದ 'ನಿವಾಜ ವಿಠೋಬಾ' (ಬುಡಕಟ್ಟಿನ ದೇವರು) ಆಕೆಯ ಮನೆಯನ್ನು 'ತಾಂಬಿಯಾ ಮನೆ' ಎಂದು ಕರೆದನಂತೆ. ಆಗ ಆ ತಾಯಿ ತನ್ನ ಹಿರಿಮಗನನ್ನು ಆ ಹೆಸರಿನಿಂದ ಕರೆದಳಂತೆ. ಮುಂದೆ ಆತನಿಂದ ತಾಂಬಿಯಾ ಸಂತತಿ ವೃದ್ಧಿ ಹೊಂದಿತು.

ವರುಕ್ : ದೊಡ್ಡ ಸಂಖ್ಯೆಯಲ್ಲಿ ರಾಸುಗಳ ಪಾಲನೆ ಮಾಡಿಕೊಂಡು ಜೀವಿಸುತ್ತಿದ್ದ ಒಬ್ಬ ಕಚ್ಚಾಗೌಳಿಗನು ಹಂಡೆಯಲ್ಲಿ ಹಾಲು ಕಾಯಿಸಿ ತೆಂಗಿನ ಚಿಪ್ಪಿನಲ್ಲಿ ಹಾಲು ಕುಡಿಯುವುದನ್ನು ರೂಢಿಸಿಕೊಂಡಿದ್ದನಂತೆ. ಆದ್ದರಿಂದ ಅವನಿಗೆ 'ವರುಕ್' ಎಂಬ ಹೆಸರು ನಿಂತಿತಂತೆ. ಅವನ ಪೀಳಿಗೆಯವರು ವರುಕ್ ವಂಶದವರು ಎಂದೇ ಪ್ರಸಿದ್ಧರಾಗಿದ್ದಾರೆ.

ಕಾತ್ರೋಟ್ : ಸಂದರ್ಭ ಬಿದ್ದಾಗಲೆಲ್ಲಾ ಕಡ್ಡಿತುಂಡುಮಾಡಿದಂತೆ ತುಸು ನಿಷ್ಠುರತೆಯಿಂದ ಮಾತನಾಡುತ್ತಿದ್ದುದರಿಂದ ಒಬ್ಬ ಕಚ್ಚಾಗೌಳಿಗನಿಗೆ ಈ ಹೆಸರು ಬಂದಿತು. ಅವನ ಗುಂಪಿನವರನ್ನು ಕಾತ್ರೋಟ್ ಎಂದು ಕರೆದರು. ಮರಾಠಿಯಲ್ಲಿ ಕಾತ್ರೋಟ್ ಎಂದರೆ ಕತ್ತರಿಯಲ್ಲಿ ಕತ್ತರಿಸುವುದು ಎಂದು ಅರ್ಥ.

ಕುಟ್ಟುಕೋರ್ : ಒಬ್ಬ ಕಚ್ಚಾಗೌಳಿಗನು ಆಹಾರ ಶೋಧನೆಗಾಗಿ ಹೊರಟು ಅರಣ್ಯದ ವೃಕ್ಷದ ಸಣ್ಣ ಗೂಟವೊಂದನ್ನು ನೆಲಕ್ಕೆ ಹೊಡೆಯುತ್ತಾ ಮುಂದೆ ಸಾಗುತ್ತಿದ್ದುದರಿಂದ ಅವನು ಕುಟ್ಟುಕೋರ್ ಎಂದು ಹೆಸರಾದನು. ಅವನ ವಂಶಸ್ಥರನ್ನು ಕುಟ್ಟುಕೋರ್ ಎಂದೇ ಗುರುತಿಸಲಾಗುತ್ತಿದೆ.

ಹೀಗೆ ಒಂದೊಂದು ಕುಳಿಯ ಹೆಸರಿನ ಹಿಂದೆಯೂ ಒಂದೊಂದು ಕಥೆ ಪ್ರಚಲಿತವಿದೆ. ಇವೆಲ್ಲವೂ ಬಹುಮಟ್ಟಿಗೆ ಕಾಲ್ಪನಿಕ ಕಥೆಗಳಂತಿವೆ.

ಹೆಸರಿನ ಮುಂದೆ ಹೆಸರು : ಕಚ್ಚಾಗೌಳಿಗರು ತಮ್ಮ ಹೆಸರುಗಳ ಮುಂದೆ ಮನೆತನದ ಹೆಸರುಗಳನ್ನು ಉಪನಾಮಗಳಾಗಿ ಇಟ್ಟುಕೊಳ್ಳುವುದು ಒಂದು ವಿಶೇಷ. ಇದರಿಂದ ವ್ಯಕ್ತಿ ಯಾವ ಕುಳಿ ಅಥವಾ ಮನೆತನಕ್ಕೆ ಸೇರಿದವನೆಂಬುದನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಉದಾಹರಣೆಗಾಗಿ ಶಂಕ್ರಪ್ಪ ಲಾಂಬೂರ್, ಜಾನು ಪಟುಕಾರ್, ಲಕ್ಕ್ಯ ವಾನೇರಾಯಾ ಇತ್ಯಾದಿಯಾಗಿ. ಹೆಸರುಗಳು ಗಂಡಸರು, ಹೆಂಗಸರು ಮತ್ತು ಮಕ್ಕಳು—ವಯೋಧರ್ಮಕ್ಕನುಗುಣವಾಗಿ ಮೂರು ತೆರನಾಗಿದ್ದು ಮೇಲುನೋಟಕ್ಕೇ ಲಿಂಗ, ವಯಸ್ಸುಗಳನ್ನು ಗುರುತಿಸುವಂತಿದ್ದು ಸ್ವಾರಸ್ಯಕರವಾಗಿವೆ.

ಗಂಡಸರ ಹೆಸರುಗಳು : ರಾಮಣ್ಣ, ಜಾನು (ಹಿರಿಯನ ಹೆಸರು), ಲಕ್ಕ್ಯ, ಮಾಕ್ಯ, ಬೈರಪ್ಪ, ವಿಠೋಬಾರಾವ್, ಮಲ್ಲೆಪ್ಪ, ಅಂಬ್ರು (ದೈವದ ಹೆಸರು), ದೊಂಡು (ದೈವದ ಹೆಸರು) ಮುಂತಾಗಿ. ಹೀಗೆ ಹಿರಿಯರ, ಹಾಡಿಗಳ ಮತ್ತು ದೈವಗಳ ಹೆಸರುಗಳನ್ನು ಇಟ್ಟುಕೊಳ್ಳುವುದು ರೂಢಿಯಲ್ಲಿದೆ.

ಹೆಂಗಸರ ಹೆಸರುಗಳು : ಜನ್ನೂಬಾಯಿ, ನಕ್ಲೂಬಾಯಿ, ಬಾಗೂಬಾಯಿ, ಬೇಬಲಿಬಾಯಿ, ಬೊಮ್ಮೂಬಾಯಿ, ಗೋದೂಬಾಯಿ, ಸಾವೂಬಾಯಿ, ಸೋನೂಬಾಯಿ ಇತ್ಯಾದಿ.

ಮಕ್ಕಳ ಹೆಸರುಗಳು : ಗಂಡು—ಮಾಂಬ್ಯಾ, ವಿಟ್ಟು, ಬಾಗ್ಯಾ, ವಾಗೂ, ಭಾಪ್ಯಾ ಬೋತ್ಯಾ ಮುಂತಾಗಿ. ಹೆಣ್ಣು – ಟಕ್ಕಿ, ಸಾಕ್ರಿ, ಸೋನಿ, ಸಾವಿ, ಬಜ್ಜಿ, ನಾಗಿ, ಸಗ್ಗಿ.

ಅಜ್ಜ ಅಜ್ಜಿಯರು ಬದುಕಿದ್ದ ದಿನಗಳಲ್ಲಿ ಅವರ ಹೆಸರುಗಳನ್ನು ಮೊಮ್ಮಕ್ಕಳಿಗಿಡುವುದಿಲ್ಲ. ಅವರ ಸಾವಿನ ನಂತರ ಜನಿಸಿದ ಮಕ್ಕಳಿಗೆ (ಮೃತರ) ಹೆಸರನ್ನು ಇಡಲಾಗುವುದು.

ಚಹರೆ: ಇವರು ಗೋಧಿ ವರ್ಣದವರು. ಕಪ್ಪು ಬಣ್ಣದ ಜನರೂ ಇಲ್ಲದಿಲ್ಲ. ದೃಢಕಾಯರೂ ಆರೋಗ್ಯಶಾಲಿಗಳಾಗಿಯೂ ಕಂಡುಬಂದಿದ್ದಾರೆ. ಕಾಡುಮೃಗಗಳೊಂದಿಗೆ ಸೆಣೆಸುವ ಧೈರ್ಯಶಾಲಿಗಳು; ಕಪಟವರಿಯದ ಮುಗ್ಧರು. ಸ್ತ್ರೀಯರ ಹೊರತು ಬಾಲಕರಿಂದ ಹಿಡಿದು ವೃದ್ಧರವರೆಗೂ ಜುಟ್ಟು ಬಿಟ್ಟುಕೊಳ್ಳುವುದು ಪದ್ಧತಿ. ಜುಟ್ಟು ಮೀಸೆಗಳನ್ನುಳಿಸಿಕೊಂಡು ಮಿಕ್ಕ ಕೂದಲನ್ನು ಸಂಪೂರ್ಣವಾಗಿ ಬೋಳಿಸಿಕೊಳ್ಳುವುದು ಸಂಪ್ರದಾಯ. ಗಡ್ಡ ತಲೆಗೂದಲು ಎರಡನ್ನೂ ಏಕಕಾಲದಲ್ಲಿ ಬೋಳಿಸಿಕೊಳ್ಳುವುದು ಇವರ ಅಭ್ಯಾಸ[5]. ಹೆಂಗಸರು ಮುಂಡೆ ಕಟ್ಟಿಕೊಳ್ಳುತ್ತಾರೆ.

ಉಡುಗೆ ತೊಡುಗೆಗಳು: ಕರ್ನಾಟಕಕ್ಕೆ ವಲಸೆ ಬಂದ ಆರಂಭದ ದಿನಗಳಲ್ಲಿ ಈ ಬುಡಕಟ್ಟಿನ ಸ್ತ್ರೀಪುರುಷರು ಕಾಡಿನಲ್ಲಿ ಸಿಗುತ್ತಿದ್ದ ಬಾಳೆ ಹುಲ್ಲಿನ ಜೊಂಡನ್ನು ನಡುವಿನ ಸುತ್ತಲೂ ಕಟ್ಟಿಕೊಳ್ಳುತ್ತಿದ್ದರಂತೆ. ಮುಂದೆ ನಾಗರಿಕ ಸಂಪರ್ಕ ಹೊಂದುವವರೆಗೂ ಅದೇ ಹುಲ್ಲಿನ ಜೊಂಡು, ಮರದ ತೊಗಟೆಗಳನ್ನು ಧರಿಸುತ್ತಿದ್ದುದಾಗಿ ಹೇಳುತ್ತಾರೆ. ಇತ್ತೀಚೆಗೆ ಬಟ್ಟೆ ಕಾಣುತ್ತಿದ್ದರೂ ಕೆಲವು ಅಡವಿಗಳಲ್ಲಿ ವಾಸಿಸುವ ಗೌಳಿಗರು ಚಳಿಗಾಲದ ದಿನಗಳಲ್ಲಿ ಧರಿಸಲು ಸಾಕಷ್ಟು ಉಡುಪುಗಳನ್ನು ಹೊಂದಿರದ ಕಾರಣ ಉರಿಯುವ ಬೆಂಕಿಯ ಸುತ್ತಲೂ ಒಟ್ಟಾಗಿ ಮಲಗಿ ರಾತ್ರಿ ಕಳೆಯುತ್ತಾರೆ.

ಈ ಬುಡಕಟ್ಟಿನ ಗಂಡಸರು ಇಂದಿಗೂ ಕೌಪೀನಧಾರಿಗಳೇ. ಹೊರಗಡೆ ಪ್ರದೇಶಗಳಿಗೆ ಹೋಗುವಾಗ ಮಾತ್ರ ನಡುವಿಗೆ ತುಂಡು ದಟ್ಟಿಸುತ್ತುತ್ತಾರೆ. ಹೆಂಗಸರು ತೊಡೆ ಭಾಗಗಳು ಎದ್ದು ಕಾಣುವಂತೆ ಅದ್ವಾನಿ ಸೀರೆ[6]ಯ ಕಚ್ಚೆ ಹಾಕುತ್ತಾರೆ.[7] ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕೈಮಗ್ಗದ ಪಟ್ಟೆಸೀರೆಗಳನ್ನು ಬಳಸಲಾಗುತ್ತಿದೆ.

ಗಂಡಸರ ಉಡುಗೆ ತೊಡುಗೆಗಳು: ಮೈಗೆ ತುಂಡುದಟ್ಟಿ ತಲೆಗೆ ಉತ್ತರೀಯವನ್ನು[8] ಸುತ್ತಿಕೊಂಡಿರುತ್ತಾರೆ. ವಿಶೇಷವಾಗಿ ತಮ್ಮ ಬುಡಕಟ್ಟಿನ ಜನರ ಆಭರಣಗಳನ್ನು ಮಾತ್ರ ರಚಿಸಿಕೊಡುವ ಅಕ್ಕಸಾಲಿಗನಿಂದ ಮಾಡಿಸಿದ ನಡುಪಟ್ಟಿಯನ್ನು ಸೊಂಟದಲ್ಲಿ ಧರಿಸುತ್ತಾರೆ. ಸುಣ್ಣ, ಅಡಕೆ, ವೀಳ್ಯದೆಲೆ, ತಂಬಾಕುಗಳನ್ನೊಳಗೊಂಡ ಹಸುಬೆಯೊಂದನ್ನು ಹೆಗಲಿಗೆ ನೇತು ಹಾಕಿಕೊಂಡಿರುತ್ತಾರೆ. ಹೆಗಲಮೇಲೆ ಕಂಬಳಿ ಇದ್ದೇ ಇರುತ್ತದೆ.

ಶಿವಾಜಿಯ ವಂಶದವರೆಂದು ಹೇಳಿಕೊಳ್ಳುವ ಇವರು ಶಿವಾಜಿಯ ಎಲ್ಲ ಬಿರುದುಗಳನ್ನೂ ಧರಿಸುತ್ತಾರೆ. ಗಂಡಸರಿಗೇ ವಿಶೇಷವೆನಿಸಿದ 'ಸಲಾ' ಅತ್ಯಂತ ಪ್ರಮುಖವಾದ ಆಭರಣ. ಸಲಾದ ಜೊತೆಗೆ ಬೆಳ್ಳಿ ಕಡಗವನ್ನೂ ತೊಡುವವರಿದ್ದಾರೆ. ಕಿವಿಗೆ 'ಬೀಕುಬಳಿ' (ತಾಮ್ರ ಅಥವಾ ಬೆಳ್ಳಿಯ ಹುಟ್ಟುಮುರ) ಎಂಬ ಮುರ; ವಿಶೇಷವಾಗಿ ಬಲಗಿವಿಗೆ ಮಾತ್ರ 'ಬಲಗಿವಿ ಮುರ'[9] ಕೊರಳಿಗೆ ರೂಪಾಯಿ ಸರ ಮಣಿಸರಗಳನ್ನು ಧರಿಸುತ್ತಾರೆ.

ಕೈ ಬೆರಳಿಗೆ ತಾಮ್ರದ 'ಸಲಾ' ಧರಿಸುವುದರ ನಿಜವಾದ ಉದ್ದೇಶ–ಹಿನ್ನೆಲೆಯನ್ನು ಮರೆತಿದ್ದರೂ ಆ ಉಂಗುರ ಎಮ್ಮೆಯ ಮೊಲೆ ಒಡೆಯುವುದನ್ನು ತಡೆಗಟ್ಟುತ್ತದೆಂದು ತಿಳಿದಿದ್ದಾರೆ. ದೃಢಕಾಯರಾದ ತಮಗೆ 'ದುಷ್ಟ ದೃಷ್ಟಿ'ಯಾಗುವುದನ್ನು ತಪ್ಪಿಸಿಕೊಳ್ಳಲೂ ಸಲಾ ಧರಿಸುವುದರ ಅಗತ್ಯವಿದೆ ಎಂದು ನಂಬಿದ್ದಾರೆ.

ಹೆಂಗಸರ ಉಡುಗೆ ತೊಡುಗೆಗಳು: ಹದಿನೆಂಟು ಮೊಳದುದ್ದದ ಸೀರೆಯನ್ನು ಕಾಸೆ ಹಾಕಿ ಸೊಂಟಕ್ಕೆ ಸುತ್ತಿಕೊಳ್ಳುತ್ತಾರೆ. ಎದೆ, ತೋಳು ಮುಚ್ಚುವಂತೆ 'ಚೋಳಿ'[10] ಧರಿಸುತ್ತಾರೆ. ಮೂಗಿಗೆ 'ಮೂತಿ' (ಮೂಗುತಿ) ತೋಳುಗಳಿಗೆ ತೋಳುಮಣಿ ಕಾಲಿಗೆ ಬೆಳ್ಳಿ ಉಂಗುರ,

ಕೊರಳಿಗೆ ಮಣಿಸರ, ಬಿಲ್ಲೆಸರ, ರೂಪಾಯಿ ಸರ, ತಾಳಿ (ವಿವಾಹಿತರು ಮಾತ್ರ) ಕೈಗೆ ಬೆಳ್ಳಿ 'ಪಾಟ್ಲ'[11] (ಕೈಕಡಗ); ಕಿವಿಗಳಿಗೆ ಬುಗಡಿ, ಕಾಪು, ಕೆನ್ನೆಸರಪಣಿ[12] ವಿಶೇಷವಾಗಿ ಬಲಗಿವಿಯ ಮೇಲಿನ ತೊಟ್ಟಿಗೆ 'ಬೀಗ ಬಳೆ'–ಇನ್ನು ಮುಂತಾದ ಆಭರಣಗಳನ್ನು ತೊಡುವುದು ಸಂಪ್ರದಾಯ.

ಮಕ್ಕಳ ಉಡುಗೆ ತೊಡುಗೆಗಳು: ಗಂಡು ಮಕ್ಕಳಿಗೆ ಕೌಪೀನವೇ ಸರ್ವವೂ. ಸೊಂಟಕ್ಕೆ ಉಡಿದಾರ (ಸಾಮಾನ್ಯವಾಗಿ ಬೆಳ್ಳಿಯದಾಗಿರುತ್ತದೆ), ಕಿವಿಗೆಮುರ. ಇಷ್ಟೆ. ಹೆಣ್ಣು ಮಕ್ಕಳಿಗೆ ಕೈಗೆ ಬಳೆ, ಕಿವಿಗೆ ಕಾಪು, ಕೊರಳಿಗೆ ಮಣಿಸರ ತೊಡಿಸುವುದು ಸಾಮಾನ್ಯ. ಐದು ವರ್ಷಕ್ಕಿಂತ ಮೇಲ್ಪಟ್ಟ ಹೆಣ್ಣು ಮಕ್ಕಳಿಗೆ ತುಂಡು ಸೀರೆಯು ಕಟ್ಟಿ ಹಾಕುವುದು ವಾಡಿಕೆ. ಈಗೀಗ ನಾಗರಿಕರ ಸಂಪರ್ಕದಿಂದಾಗಿ ಮಕ್ಕಳ ಕಾಲಿಗೆ ಬೆಳ್ಳಿಯ ಸರಪಳಿ ಮಾಡಿಸಿ ಹಾಕುವುದು ರೂಢಿಗೆ ಬಂದಿದೆ.

ಕೆಲಸದ ವಿಭಜನೆ: ಎಮ್ಮೆ ಸಾಕಾಣಿಕೆಯೇ ಕಟ್ಟಾಗೌಳಿಗರ ಪ್ರಧಾನ ಏಕಮಾತ್ರ ವೃತ್ತಿಯಾಗಿದೆ. ಅದನ್ನೇ ಗಂಡಸರು ಹೆಂಗಸರು ಹಂಚಿಕೊಂಡು ಕೆಲಸ ಮಾಡುವುದು ಅವರ ಹೊಂದಾಣಿಕೆಯ ಸ್ವಭಾವವನ್ನು ಹೇಳುತ್ತದೆ. ಗಂಡಸರು ಎಮ್ಮೆಗಾವಲು ಮಾಡುವುದು, ಎಮ್ಮೆಗಳಿಗೆ ಸ್ನಾನ ಮಾಡಿಸುವುದು, ಹಾಲು ಕರೆಸುವುದು, ಹಾಲು ಮಾರಾಟ ಮಾಡುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಾರೆ. ಹೆಂಗಸರು ಸಗಣಿ ತೆಗೆಯುವುದು, ಒಡ್ಡಿಗಳನ್ನು ಸ್ವಚ್ಛಗೊಳಿಸುವುದು, ಕರುಗಳ ಹಿತರಕ್ಷಣೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಈಗೀಗ ಮನೆಗೆಲಸದ ಜೊತೆಗೆ ಹಿತ್ತಲುಗಿಡಗಳನ್ನು ಬೆಳೆಸುವ ಹವ್ಯಾಸವನ್ನೂ ಅವರು ರೂಢಿಸಿಕೊಂಡಿರುವುದಾಗಿ ತಿಳಿದುಬಂದಿದೆ.

ಎಮ್ಮೆಗಾವಲು: ಇದು ಗಂಡಸರು ಮಾತ್ರ ನಿರ್ವಹಿಸುವ ಕೆಲಸ.

ಕಾವಲಿಗೆ ಹೋಗುವಾಗ ಕಂಬಳಿ ದೊಣ್ಣೆ ಕೊಡ್ಲಿ ಮತ್ತು ಕುಡಿಯುವ ನೀರನ್ನು ಇಟ್ಟುಕೊಳ್ಳಲು (ಇನ್ನು ಕೆಲವು ಸಂದರ್ಭಗಳಲ್ಲಿ ಎಮ್ಮೆಗಳ ಬೆನ್ನು ಮೇಲೆ ನೀರು ಚೆಲ್ಲಲು) ಒಂದು ಗಡಿಗೆಯನ್ನು ಒಯ್ಯುವುದು ಪದ್ಧತಿ. ಅವು ಅಗತ್ಯ ಸಾಧನಗಳೂ ಹೌದು.

ಹಳ್ಳ ದಿಣ್ಣೆ ಹತ್ತಿ ಇಳಿಯುವಾಗ ಎಮ್ಮೆಗಳ ಕಾಲಿಗೆ ತೊಡರಾಗಿ ಸಿಕ್ಕ ಬೇರು ಬಳ್ಳಿಗಳನ್ನು ಕತ್ತರಿಸಲು, ಅವುಗಳಿಗೆ ತಿನ್ನಲು ಚಿಟ್ಟೆ. ಹೊನ್ನೆ, ದಡಸಲ, ಬೆಂಡೆ, ಮತ್ತಿ, ಬಿದಿರು ಮುಂತಾದ ಜಾತಿಯ ಸೊಪ್ಪುಗಳನ್ನು ಕಡಿದು ಹಾಕಲು ಸಾಧನವಾಗಿ ಕತ್ತಿಕೊಡಲಿಗಳನ್ನು ಬಳಸುತ್ತಾರೆ.

ರಾತ್ರಿಗಾವಲು ಮಾಡುವವರು ಬೆಳಕಿಗಾಗಿ ಬೀಟೆಮರದ ಚಕ್ಕೆಯ 'ಪಂಜು' ಉಪಯೋಗಿಸುತ್ತಾರೆ.[13]

ಪಶುಪಾಲನೆ: ಕಾಡಿನಲ್ಲಿ ಎಮ್ಮೆಗಳನ್ನು ಸಾಕಿಕೊಂಡಿರುವುದೇ ಇವರ ಪ್ರಧಾನ ಕಸಬು. ಇವರಿಗೆ ಕೃಷಿ ಮಾಡಲು ಗದ್ದೆ ತೋಟಗಳಿಲ್ಲ. ಆದರೆ ಹೆಂಗಸರು ಗಂಡಸರು ಕೂಡಿ ಹೋಗಿ ಕಾಡಿನಲ್ಲಿಯ ಕೆಲವು ಉತ್ಪನ್ನಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ. ದನ, ಕೋಳಿ, ಕುರಿ ಸಾಕಣೆ ಇವರ ಉಪಕಸಬು.

ದೊಡ್ಡ ಸಂಖ್ಯೆಯಲ್ಲಿ ಎಮ್ಮೆ ರಾಸುಗಳ ಪಾಲನೆ ಮಾಡುವ ಇವರು ಹೆಚ್ಚು ಪ್ರಮಾಣದ ಹಾಲನ್ನು ಕರುಗಳಿಗೇ ಕುಡಿದುಕೊಳ್ಳಲು ಬಿಡುವ ಧಾರಾಳಿಗಳು. ಕರು ತನಗೆ ಬೇಕೆನಿಸುವಷ್ಟು ಕುಡಿದು ಮಿಗಿಸಿದ್ದ ಹಾಲಿನಿಂದ ಬೆಣ್ಣೆ ತಯಾರಿಸಿ ವಾಸದ ಗುಡಿಸಲಿನ ಆವರಣದಲ್ಲೇ ಒಂದು ಕಡೆ ನೆಲದಲ್ಲಿ ಗುಂಡಿ ತೆಗೆದು ಅದನ್ನು ಶೇಖರಿಸಿಟ್ಟಿರುತ್ತಾರೆ.[14] ಬೆಣ್ಣೆ ಕೊಳ್ಳುವವರು ಬಂದಾಗ ಮಾತ್ರ ಆ ಗುಂಡಿಯ ಬಾಗಿಲನ್ನು ತೆರೆಯಲಾಗುವುದು.

ಎಮ್ಮೆ ಕರು ಹಾಕಿದ ಮೇಲೆ ಕರು ಹಾಕಿದ ಎಮ್ಮೆಗೂ ಅದರ ಕರುವಿಗೂ ಬೇರೆ ಬೇರೆ ಹೆಸರುಗಳನ್ನಿಡಲಾಗುವುದು (ಉದಾ. ಕ್ಯಾಳೊ, ತಾಳಿ ಮುಂತಾಗಿ). ರಾಸುಗಳ ಸಂಖ್ಯೆ ಜಾಸ್ತಿಯಿರುವುದರಿಂದಲೇ ಅವಕ್ಕೆ ನಾಮಕರಣ ಮಾಡುವ ಸಂಪ್ರದಾಯ ಬೆಳೆದುಬಂದಿದೆ.

ಕಚ್ಚಾಗೌಳಿಗರಂತೆಯೇ ಅವರು ಸಾಕುವ ಕೋಣಗಳೂ ದಷ್ಟಪುಷ್ಟವಾಗಿರುತ್ತವೆ. ಅಂತೆಯೇ ಅವರು ಬೀಡು ಬಿಟ್ಟ ಗ್ರಾಮದ ಆಸುಪಾಸಿನ ಜನರಿಂದ ಅವರ ಕೋಣಗಳಿಗೆ ಭಾರೀ ಬೇಡಿಕೆಯಿರುತ್ತದೆ. ಕೋಣಗಳನ್ನು ಬೇರೆಯವರಿಗೆ ಮಾರಿದರೆ ತಮ್ಮ ಮನೆದೇವರಿಗೆ ತಪ್ಪು ಕಾಣಿಕೆ ಅರ್ಪಿಸಿ ಪೂಜೆ ಸಲ್ಲಿಸಿ ಮಾರಿದ ಹಣದಿಂದ ಗಂಟೆ ಮುಂತಾದ ಪೂಜಾ ಸಾಧನಗಳನ್ನು ಕೊಂಡು ತರುವುದು ಸಂಪ್ರದಾಯ.

ಈ ಬುಡಕಟ್ಟು ಜನಾಂಗದವರಿಗೆ ತಮ್ಮ ಎಮ್ಮೆ ಕೋಣಗಳು ತಾವೆಲ್ಲಿ ಬೀಡು ಬಿಡುತ್ತಾರೊ ಆ ಗ್ರಾಮದ 'ದೊಡ್ಡಿ'ಗಳನ್ನು ಸೇರುವುದು ಸಹ್ಯ ವಿಚಾರವಲ್ಲ. ಎಷ್ಟೇ ಪ್ರಯಾಸವಾದರೂ ಯಾವ ಕಾರಣದಿಂದಲೂ ತಮ್ಮ ಸಾಕು ಪ್ರಾಣಿಗಳನ್ನು ದೊಡ್ಡಿಗೆ ಹೋಗಗೊಡುವುದಿಲ್ಲ. ಅತ್ಯಂತ ಜಾಗರೂಕರಾಗಿದ್ದೂ ಆಕಸ್ಮಿಕವಾಗಿ ರಾಸುಗಳು ದೊಡ್ಡಿ ಸೇರಿದರೆ 'ತಪ್ಪಿತಸ್ಥರು' ಹಾಡಿಯ ಯಜಮಾನನ ಕ್ಷಮೆಕೋರಿ ಆತನಿಗೆ ದಂಡ ತೆರಬೇಕೆಂಬ ವಿಶೇಷ ಕಟ್ಟಳೆಯಿದೆ. ದೊಡ್ಡಿಗೆ ಹೋಗಿ ಬಂದ ಎಮ್ಮೆಗಳನ್ನು ಮೊದಲಿನಂತೆ ಅಥವಾ ಉಳಿದ ಎಮ್ಮೆಗಳನ್ನು ನೋಡಿಕೊಳ್ಳುವಂತೆ ಪ್ರೀತಿಯಿಂದ ಪೂಜ್ಯಭಾವದಿಂದ ನೋಡದಿರುವುದು ದೊಡ್ಡಿಗೆ ಹೋಗಿ ಬಂದ ಎಮ್ಮೆಯ ಮೇಲೆ ತಳೆಯುವ ಅವರ ನಿಕೃಷ್ಟ ಭಾವವನ್ನು ಸೂಚಿಸುತ್ತದೆ.

ಕಚ್ಚಾಗೌಳಿಗರು ಕರ್ನಾಟಕಕ್ಕೆ ಬಂದ ದಿನಗಳಲ್ಲಿ ಇದ್ದುದಕ್ಕಿಂತ ಈಗ ಹೆಚ್ಚು ಚುರುಕಾಗಿ ಕಾಣುತ್ತಾರೆ. ಲಾಭ ಸಂಪಾದನ ದೃಷ್ಟಿ-ಆಲೋಚನೆ ಅವರಲ್ಲೂ ಚಿಗುರುತ್ತಿದೆ. ಈಗೀಗ ತಾವು ನೆಲೆಸುವ ಪ್ರದೇಶದ ಆಜುಬಾಜಿನಲ್ಲಿ ಜಾನುವಾರು ಜಾತ್ರೆಯ ಸುಳಿವು ತಿಳಿದರೆ ಅಲ್ಲಿಗೆ ತಮ್ಮ ರಾಸುಗಳನ್ನು ಅಟ್ಟಿಸಿಕೊಂಡು ಹೋಗಿ ತಾತ್ಕಾಲಿಕವಾಗಿ ಅಲ್ಲೇ ಕೆಲದಿವಸಗಳವರೆಗೆ ನೆಲೆಸಿದ್ದು ರೈತರಿಗೆ ಗೊಬ್ಬರ ಒದಗಿಸಿ ಅವರಿಂದ ಪ್ರತಿಯಾಗಿ ದವಸ ಧಾನ್ಯಗಳನ್ನು ಪಡೆಯುವ ನಿಸ್ಸೀಮತನ ಬಂದಿದೆ.

ಆಹಾರ ಪದ್ಧತಿ: ಇವರ ಆಹಾರ ಸೇವನೆಯಲ್ಲಿ ರಾಗಿ ಮತ್ತು ಅಕ್ಕಿಗೆ ಹೆಚ್ಚು ಪ್ರಾಧಾನ್ಯತೆ ಇದೆ. ಜೋಳ, ಗೋಧಿಗಳನ್ನು ಉಪಯೋಗಿಸುವುದಿಲ್ಲ. ಅವು ತಮಗೆ ಸುಲಭ ಬೆಲೆಗೆ ಎಟುಕುವುದಿಲ್ಲವಾದ್ದರಿಂದ ಕೈಬಿಟ್ಟಿರುವುದಾಗಿ ಹೇಳುತ್ತಾರೆ.

ಇವರಲ್ಲಿ ವಿಶೇಷದ ಊಟ ಎಂದರೆ ಅನ್ನ, ರೊಟ್ಟಿ, ಸಾರು, ಸಿಹಿಯಂಬಲಿಯ ಅಡಿಗೆ·

ಕಷ್ಟ ಜೀವಿಗಳಾಗಿರುವ ಈ ಬುಡಕಟ್ಟಿನ ಗಂಡಸರು ಹೆಂಗಸರು ಒಟ್ಟಿಗೇ ನಸುಕಿನಲ್ಲೆದ್ದು ಎಮ್ಮೆಗಳ ಹಾಲು ಕರೆದು ಒಡ್ಡಿ ಕೊಟ್ಟಿಗೆಗಳನ್ನು ಸ್ವಚ್ಛಗೊಳಿಸಿದ ಮೇಲೆ ಬೆಳಗಿನ ಮೊದಲೂಟ-ರಾಗಿ ಅಂಬಲಿ ಮತ್ತು ಮೊಸರು—ಸೇವಿಸುತ್ತಾರೆ. ಅನಂತರ ಹಯಿನುಗಾರಿಕೆ ಕೆಲಸ ಮುಗಿದ ಮೇಲೆ ಮಧ್ಯಾಹ್ನದ ಊಟ—ಅನ್ನ, ರೊಟ್ಟಿ, ಕಾಡು ಮೆಣಸಿನ ಚಟ್ನಿ ಮತ್ತು ಬೆಣ್ಣೆ—ತಿನ್ನುತ್ತಾರೆ. ಎಮ್ಮೆಗಾವಲು ಮುಗಿಸಿ ಬಂದ ಮೇಲೆ ರಾತ್ರಿಯೂಟ—ಅನ್ನ, ರೊಟ್ಟಿ, ಬೆಣ್ಣೆ, ರಾಗಿಯಂಬಲಿ—ನಡೆಯುತ್ತದೆ.

ಸಾಮಾನ್ಯವಾಗಿ ಎಲ್ಲ ಹಬ್ಬ ಹುಣ್ಣಿಮೆಗಳಲ್ಲೂ ಹಾಗೂ ಕೆಲವು ವಿಶೇಷ ದಿನಗಳಲ್ಲಿ ಹಾಲಂಬಲಿ ಮಾಡಿಕೊಳ್ಳುತ್ತಾರೆ. ಅಕ್ಕಿಯನ್ನು ಹಾಲಿನಲ್ಲಿ ಪಾಕಗೊಳಿಸಿ ತಯಾರಿಸುವ ಒಂದು ವಿಧದ ಪಾಯಸ ಅದು. ತುಪ್ಪ—ಬೆಲ್ಲದೊಂದಿಗೆ ಅದನ್ನು ಸೇವನೆ ಮಾಡಲಾಗುವುದು.

ಕಾಡು ಮೆಣಸು, ಮೂಲಂಗಿ, ಬದನೆ, ಬಾಸಗಾರೆ ಹರುವೆಸೊಪ್ಪು, ಸಬ್ಬಕ್ಕಿಸೊಪ್ಪು,

ಹೀಗೆಸೊಪ್ಪು, ಬಾಂದಾರೆ ಕಾಯಿ ಸೊಪ್ಪು, ಅಣಬೆ, ಕಾಡುಗೆಣಸು—ಇವೇ ಇವರ ತರಕಾರಿ ಪದಾರ್ಥಗಳು.

ಇವರು ಮಾಂಸಾಹಾರಿಗಳೂ ಹೌದು ಸಾರಗ, ಕಡ, ಕುರಿ, ಕೋಳಿ, ಬರ್ಕ, ಮೊಲ, ಉಡ, ಅಳಿಲು ಮುಂತಾದ ಪ್ರಾಣಿಗಳ ಮಾಂಸ ತಿನ್ನುತ್ತಾರೆ. ಕಾಡುಬೆಕ್ಕು, ಹಂದಿ, ಮುಷಿಯ (ಗೊರಿಲ್ಲಾ) ಮುಂತಾದ ಪ್ರಾಣಿಗಳ ಮಾಂಸ ತಿನ್ನುವುದಿಲ್ಲ. ಮೂಲತಃ ಇವರಿಗೆ ಬೇಟೆ ಕಸಬು ವಿಶೇಷವಾಗಿ ಗೊತ್ತಿಲ್ಲದ ಕಾರಣ ಸಾಕುನಾಯಿ ಕೊಂದು ತಂದರೆ ಮಾತ್ರ (ಕಾಡು ಪ್ರಾಣಿಗಳ) ಮಾಂಸ ತಿನ್ನುತ್ತಾರೆ.

ಕೆಲವು ಮನೆತನಗಳಲ್ಲಿ ತಮ್ಮ ಕುಲದೈವ ಅಥವಾ ವಂಶಚಿಹ್ನೆ ಕುರಿಯಾಗಿದ್ದರೆ ಕುರಿ ಮಾಂಸ ತಿನ್ನುವುದಿಲ್ಲ. ಸಾರ್ವತ್ರಿಕವಾಗಿ ಈ ಬುಡಕಟ್ಟಿನ ಜನ ಹೆಣ್ಣು ಕುರಿ ಮಾಂಸ ತಿನ್ನಲು ಇಷ್ಟಪಡುವುದಿಲ್ಲ. ಹೆಣ್ಣು ಕುರಿಯ ಮಾಂಸ ತಿನ್ನುವವರು ಕುರಿ ಹಾಲನ್ನು ಕುಡಿಯಬಾರದು; ಮಾಂಸ ತಿನ್ನದವರು ಹಾಲು ಸೇವಿಸಬಹುದು ಎಂಬ ಕಟ್ಟಳೆಯನ್ನು ರೂಢಿಸಿಕೊಂಡಿದ್ದಾರೆ.

ಇವರಲ್ಲಿ ಕುಡಿತ ಮುಖ್ಯ. ಕಳ್ಳಭಟ್ಟಿಯನ್ನು ದೈವ ಸಮಾನ ವಸ್ತುವಾಗಿ ಕಾಣುತ್ತಾರೆ. ಮಕ್ಕಳು ಸ್ತ್ರೀಯರಾದಿಯಾಗಿ ಎಲ್ಲರೂ ಕಳ್ಳು, ಸೇಂದಿ, ಕಳ್ಳಭಟ್ಟಿ ಸೇವಿಸುವುದು ಸಾಮಾನ್ಯ.

ಇವರಲ್ಲಿ ತಾಂಬೂಲ ಮೆಲ್ಲುವುದು ಕುಡಿತಕ್ಕಿಂತಲೂ ಅಗತ್ಯವಾದ ಮತ್ತು ಹೆಚ್ಚು ರೂಢಿಸಿಕೊಂಡ ಚಟ. ಮಕ್ಕಳು ಕೂಡ ತಂಬಾಕು ಜಗಿಯುತ್ತವೆ. ಅದಕ್ಕೆ ಕಾಲದ ಪರಿವೆಯಂತೂ ಇಲ್ಲವೇ ಇಲ್ಲ. ಅರೆನಿದ್ದೆಯಲ್ಲೂ ಎದ್ದು ಕುಳಿತು ವೀಳೆಯ ಜಗಿಯುತ್ತಾರೆಂದರೆ ಆ ಚಟ ಎಷ್ಟು ತೀವ್ರವಾದುದೆಂಬುದು ತಿಳಿಯುತ್ತದೆ. ಇದರಿಂದ ಮಕ್ಕಳೂ ಹೊರತಾಗಿಲ್ಲ.

ಇನ್ನು ಇವರ ಜೀವನ ಚಕ್ರದ ಬಹುಮುಖ್ಯ ಘಟ್ಟಗಳಾದ ಹುಟ್ಟು, ಪ್ರೌಢಾವಸ್ಥೆ ಮದುವೆ, ಮತ್ತು ಮರಣಗಳಲ್ಲಿ ಬದುಕು ನಡೆಸುವ ರೀತಿ ಅನುಸರಿಸುವ ಸಂಪ್ರದಾಯಗಳನ್ನು ಪರಿಶೀಲಿಸಬಹುದು.

ಹುಟ್ಟು : ಕಚ್ಚಾಗೌಳಿಗರಲ್ಲಿ ಗರ್ಭ ನಿಂತ ಐದು ಅಥವಾ ಏಳು ತಿಂಗಳಿಗೆ ಗರ್ಭಿಣಿಯನ್ನು ತವರಿಗೆ ಕರೆದು ತರುವ ಪದ್ಧತಿಯುಂಟು. ಹತ್ತು ದಿವಸವೊ ಒಂದು ತಿಂಗಳೊ ತಮ್ಮ ಹಾಡಿಯಲ್ಲಿರಿಸಿಕೊಂಡು ಆಕೆಯ ನಾಲಿಗೆ ಬಯಸುವ ಪದಾರ್ಥಗಳನ್ನು ಅಣಿಗೊಳಿಸಿ ತಿನ್ನಿಸಲು ಯತ್ನಿಸುತ್ತಾರೆ.

ತವರಿನಲ್ಲಿ ಬಾಣಂತನ ನಡೆಸಲು ಅನಾನುಕೂಲವಿದ್ದರೆ ಆಕೆಯ ಗಂಡನ ಮನೆಗೇ ಕಳುಹಿಸಲಾಗುವುದು. ಗಂಡನ ಮನೆಗೆ ಕಳುಹಿಸಿಕೊಡುವಾಗ ಆಕೆಗೆ ಉಡುಗೊರೆ ರೂಪದಲ್ಲಿ ವಸ್ತ್ರಾಭರಣಗಳನ್ನು ಕೊಡುವುದುಂಟು.[15]

ಈ ಬುಡಕಟ್ಟಿನವರ ಒಂದು ವಿಚಿತ್ರ ನಡೆವಳಿ ಎಂದರೆ ಮದುವೆಯಾದ ಮೇಲೆ ಒಂದು ಮಗು ಜನಿಸುವವರೆಗೂ ಗಂಡ ಹೆಂಡಿರು ಪರಸ್ಪರ ಮಾತನಾಡಿಕೊಳ್ಳದಿರುವುದು. ರಾತ್ರಿ ವೇಳೆಯಲ್ಲಿ ಒಟ್ಟಿಗೆ ಮಲಗಿದರೂ ಮಾತನಾಡುವುದಿಲ್ಲ. ಇನ್ನು ಹಗಲು ಹೊತ್ತಿನಲ್ಲಿ ಮಾತನಾಡುವುದಿರಲಿ ಒಬ್ಬರ ಮುಖವನ್ನು ಮತ್ತೊಬ್ಬರು ನೋಡುವುದಕ್ಕೂ ಆಸ್ಪದವಿಲ್ಲ. ಇದರಿಂದ, ವಾಸ್ತವವಾಗಿ, ಚೊಚ್ಚಲು ಗರ್ಭಿಣಿಯಾದವಳಿಗೆ ಅನಾನುಕೂಲವೇ ಹೆಚ್ಚು; ತನ್ನ ದೈಹಿಕ ಅಸ್ವಸ್ಥತೆಯನ್ನು ಗಂಡನೊಡನೆ ತೋಡಿಕೊಳ್ಳಲೂ ಆಕೆಗೆ ಅವಕಾಶವಿಲ್ಲ. ಇದನ್ನರಿತ ತಂದೆ ತಾಯಿಗಳು ಹೆರಿಗೆ ದಿನಗಳು ಸಮೀಪಿಸಿದ ಸಂದರ್ಭದಲ್ಲಿ ಸಂಭವಿಸಬಹುದಾದ ಅನಾಹುತಗಳನ್ನು ತಡೆಗಟ್ಟುವ ಪರಮೋದ್ದೇಶದಿಂದ ಮಗಳನ್ನು ತವರಿಗೆ ಕರೆದು ತರಲು ಯೋಚಿಸುತ್ತಾರೆ. ಸಾಕಷ್ಟು ಸುಧಾರಿತ ಕುಟುಂಬಗಳು ಇದೇ ರೀತಿಯಾಗಿ ಮಗಳ ಎರಡು ಮತ್ತು ಮೂರನೆಯ

ಬಾಣಂತನದ ಖರ್ಚು ವೆಚ್ಚಗಳನ್ನೂ ಭರಿಸುವುದುಂಟು. ಮೊದಲ ಬಾಣಂತನಕ್ಕಂತೂ ಮೋಸವಿಲ್ಲ–ಸಾಮಾನ್ಯವಾಗಿ ತವರಿನಲ್ಲೇ ನಡೆಯುವುದು ರೂಢಿಯಲ್ಲಿದೆ.

ಹೆರಿಗೆ: ವಾಸದ ಗುಡಿಸಲ ಚಾವಡಿಯಲ್ಲೇ ಒಂದು ಪಕ್ಕದಲ್ಲಿ ಬಿದಿರಿನ 'ನೆರಿಕೆ' ಕಟ್ಟಿ ಹೆರಿಗೆ ಕೋಣೆಯನ್ನು ಸಿದ್ಧಗೊಳಿಸಿರಲಾಗುತ್ತದೆ. ಗರ್ಭಿಣಿಯು ಪ್ರಸವ ವೇದನೆಗೊಳಗಾದಾಗ ಅವಳನ್ನು ಆ ಪ್ರತ್ಯೇಕ ಕೋಣೆಗೆ ಸಾಗಿಸಲಾಗುವುದು. ಹಾಡಿಯ ಅನುಭವಿ ಅಜ್ಜಿ ಹೆರಿಗೆ ಮಾಡಿಸುವ ಜವಾಬ್ದಾರಿ ಹೊರುತ್ತಾಳೆ.[16] ಹೆರಿಗೆಯಾದ ಮೇಲೆ ಮಗುವಿನ ಹೊಕ್ಕುಳು ಕತ್ತರಿಸುವವರೆಗೂ ಮಗುವನ್ನು ಬೂದಿಯ ಮೇಲೆ ಮಲಗಿಸುವುದು ಪದ್ಧತಿ[17] ಹೊಕ್ಕಳು ಕೊಯ್ದ ನಂತರ ಮೊರದಲ್ಲಿ ಮಲಗಿಸಲಾಗುವುದು. ಅನಂತರ ಸುಮಾರು ಅರ್ಧ ತಾಸು ಕಳೆದ ಮೇಲೆ ಬಾಣಂತಿ ಮಗುವಿಗೆ ಬಿಸಿ ನೀರು ಸ್ನಾನ ಮಾಡಿಸುತ್ತಾರೆ. ಅಲ್ಲದೆ ಬಾಣಂತಿಗೆ ನಂಜು ಏರುವುದನ್ನು ತಡೆಗಟ್ಟಲು ಬಿಸಿ ಬಿಸಿ ಅನ್ನ, ಮೆಣಸಿನ ಕಾಳು ಸಾರು, ಕಾಳು ಜೀರಿಗೆ, ನಂಜಿನಪುಡಿ, ಬೇವು ಮುಂತಾದ ಪದಾರ್ಥಗಳನ್ನು ತಿನ್ನಿಸಲಾಗುವುದು. ಹೀಗೆಯೇ ಸುಮಾರು ಐದು ದಿನಗಳವರೆಗೆ ಬೆಳ್ಳುಳ್ಳಿ ತುಪ್ಪ ಮುಂತಾದವುಗಳನ್ನೂ ತಿನ್ನಿಸುವುದುಂಟು.

ಸತತವಾಗಿ ಹನ್ನೊಂದು ದಿನಗಳವರೆಗೆ ಬಾಣಂತಿ-ಮಗು ಇಬ್ಬರಿಗೂ ದಿನಕ್ಕೆ ಎರಡೆರಡು ಸಲ ಸ್ನಾನ ಮಾಡಿಸುವುದು ವಿಶೇಷ. ಆ ಅವಧಿಯಲ್ಲಿ ಗುಡಿಸಲ ಆವರಣವನ್ನು ಸಾಧ್ಯವಾದಷ್ಟೂ ಅಚ್ಚುಕಟ್ಟಾಗಿಡಲು ಯತ್ನಿಸುವರು.

ಸೂತಕ: ಹೆರಿಗೆಯಾದ ದಿನದಿಂದ ತೊಡಗಿ ಮುಂದಿನ ಹತ್ತು ರಾತ್ರಿಗಳನ್ನು ಸೂತಕವೆಂದು ಪರಿಗಣಿಸಲಾಗುವುದು. ಗುಡಿಸಲುಗಳೊಳಗೇ ತಮ್ಮ ದೈವಗಳನ್ನು ಸ್ಥಾಪಿಸಿಕೊಳ್ಳುವುದರಿಂದ ಸೂತಕದ ಅವಧಿಯಲ್ಲಿ ದೈವಕ್ಕೆ ಮುಟ್ಟುತಟ್ಟಾಗದಂತೆ ಬಹಳ ಜಾಗ್ರತೆವಹಿಸುತ್ತಾರೆ. ಆ ಅವಧಿಯಲ್ಲಿ ಯಾರೂ ಬಾಣಂತಿಯನ್ನು ಮುಟ್ಟುವುದಿಲ್ಲ; ಅವಳು ಉಪಯೋಗಿಸಿದ ವಸ್ತು, ಪದಾರ್ಥಗಳನ್ನು ಬೇರೆಯವರು ಉಪಯೋಗಿಸುವುದಿಲ್ಲ.

ಬಾಣಂತಿಗೆ ಸಂಬಂಧಿಸುವ ವಿಧಿ ನಿಷೇಧಗಳು ಕಟ್ಟುಕಟ್ಟಳೆಗಳೆಲ್ಲವೂ ಆಕೆಯ ಸೇವೆಗೆ ನಿಂತ ವ್ಯಕ್ತಿಗೂ ಅನ್ವಯಗೊಳ್ಳುತ್ತವೆ.

ಸೂತಕದ ಐದು ಮತ್ತು ಹನ್ನೊಂದನೆಯ ದಿನಗಳಂದು ಸೂತಕ ಪರಿಹರಿಸಿಕೊಳ್ಳುವ ವಿಧಿಯನ್ನು ಆಚರಿಸಲಾಗುತ್ತದೆ. ಹಾಡಿಯ 'ಯಡಿಗ್ಯ' ಅಥವಾ ಲಾಂಬೂರ್ ಸೂತಕದ ಮನೆಗೆ ಬಂದು ಮಾವಿನ ಎಲೆಯೊಂದರಿಂದ ಗೋಮೂತ್ರ ಸಿಂಪಡಿಸಿದರೆ ಸೂತಕ ನಿವಾರಣೆಯಾದಂತೆಯೆ. ಅಂದು ಕುಟುಂಬದ ಸದಸ್ಯರ ಬಟ್ಟೆ, ಪಾತ್ರೆ ಇತ್ಯಾದಿ ಸಾಮಾಗ್ರಿಗಳನ್ನು ಶುಚಿಗೊಳಿಸಲಾಗುವುದು.

ಸಾಮಾನ್ಯವಾಗಿ, ಐದನೆಯ ದಿನದಂದು ತಾತ್ಕಾಲಿಕವಾಗಿ ಸೂತಕ ಪರಿಹರಿಸಿಕೊಂಡಮೇಲೆ ಅದೇ ದಿನ ಯಡಿಗ್ಯನನ್ನು ಬರಮಾಡಿಕೊಂಡು ಮಗುವಿಗೆ ನಾಮಕರಣ ಮಾಡಿಸಲಾಗುತ್ತದೆ.

ಇವರಲ್ಲಿ, ತಂದೆ ತಾಯಿಗಳು ಮಗುವಿಗೆ ಹೆಸರಿಡುವಂತಿಲ್ಲ. ಮೊದಲೇ ತೀರಿಕೊಂಡ ಕುಟುಂಬದ ಹಿರಿಯರ ಹೆಸರನ್ನು ಇಡುವುದು ಸಾಮಾನ್ಯ. ಬಾಣಂತಿಯ ಅತ್ತೆಮಾವಂದಿರು ಅಂದಿನ ಸಮಾರಂಭಕ್ಕೆ ಕಡ್ಡಾಯವಾಗಿ ಬಂದಿರಬೇಕು. ಆ ಸಮಾರಂಭದ ಗೌರವಾರ್ಥ ಪಾಯಸದಡಿಗೆ ಅಣಿಯಾಗಿರುತ್ತದೆ.

ತೊಟ್ಟಿಲುಶಾಸ್ತ್ರ: ಹನ್ನೆರಡನೆಯ ದಿನದಂದು ಮಗುವನ್ನು ವಿಧ್ಯುಕ್ತವಾಗಿ ತೊಟ್ಟಿಲೊಳಗೆ ಮಲಗಿಸುವ ಶಾಸ್ತ್ರವಿರುತ್ತದೆ. ಬಾಣಂತಿ ಗಂಗಾಪೂಜೆಯನ್ನು ನಿರ್ವಹಿಸಬೇಕು. ಗಂಗಾಪೂಜೆ ಮುಗಿದ ಮೇಲೆ ಬಾಣಂತಿಯ ಅಣ್ಣ ಅಥವಾ ತಮ್ಮ ತೊಟ್ಟಿಲುಹಗ್ಗ ಕಟ್ಟಿ ತೊಟ್ಟಿಲಿಗೆ ಹಗ್ಗ

ವನ್ನು ಸೇರಿಸಿಕೊಡುವ ವಿಧಿ ಇರುತ್ತದೆ. ತೊಟ್ಟಿಲು ಹಗ್ಗ ತಂದು ಕಟ್ಟಿಕೊಟ್ಟದ್ದರ ಗೌರವಾರ್ಥ ಬಾಣಂತಿಯ ಗಂಡ ಆ ವ್ಯಕ್ತಿಗೆ ಪೇಟ ಕಟ್ಟುತ್ತಾನೆ.

ಹಾಡಿಯ ಮುತ್ತೈದೆಯೊಬ್ಬಳು ಹೊಸ ತೊಟ್ಟಿಲಿಗೆ ಅರಿಸಿನ ಕುಂಕುಮ ಇಡಿಸಿ ತೊಟ್ಟಿಲನ್ನು ಪೂಜಿಸುತ್ತಾಳೆ.[18] ಅನಂತರ ಬಳಗಸ್ಥರು ತೊಟ್ಟಿಲ ಎರಡೂ ಮಗ್ಗುಲಲ್ಲಿ ನಿಂತು ಮಗುವನ್ನು ಮೊರದಿಂದ ಎತ್ತಿ ತೊಟ್ಟಿಲ ಕೆಳಗಿನಿಂದ ಮೇಲಕ್ಕೆ ಕೊಡುತ್ತಾ 'ಸಾದೇವ್ ಮಾದೇವ್' ಎಂದು ಉಚ್ಚರಿಸುತ್ತಾ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡುತ್ತಾರೆ.

ಅದೇ ಸಂದರ್ಭದಲ್ಲಿ ಬಳಗಸ್ಥರ ಸಮ್ಮುಖದಲ್ಲಿ ಬಾಣಂತಿ ಮತ್ತು ಅವಳ ಗಂಡ ಪರಸ್ಪರರ ಹೆಸರನ್ನು ಉಚ್ಚರಿಸುವ ಕಾರ್ಯಕ್ರಮವಿರುತ್ತದೆ.[19]

ಅಂತಿಮ ಕಾರ್ಯಕ್ರಮದ ಅಂಗವಾಗಿ ಸಿಹಿಯೂಟ ಅಣಿಯಾಗಿರುತ್ತದೆ. ಸಹಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುವುದು.

ನಿಷೇಧ : ಮೂರುತಿಂಗಳು ತುಂಬುವವರೆಗೂ ಬಾಣಂತಿ ಹೂಮುಡಿಯಕೂಡದು. ಒಂದು ವೇಳೆ ಮುಡಿದರೆ ಹೂ ಬಾಡಿದಂತೆ ಬಾಣಂತಿಯೂ ಸೊರಗಿ ರಕ್ತಹೀನಳಾಗುತ್ತಾಳೆಂದು ನಂಬಲಾಗುವುದು. ಇದೇ ಕಾರಣಕ್ಕಾಗಿ ತೊಟ್ಟಿಲಿಗೂ ಹೂಮುಡಿಸುವುದಿಲ್ಲ.

ಪಥ್ಯ : ಬಾಣಂತಿ ಕೆಲವು ದಿನಗಳ ಮಟ್ಟಿಗಾದರೂ ನಿರ್ದಿಷ್ಟ ಆಹಾರ ಸೇವನೆ ಮಾಡಬೇಕು. ಯಾವಾಗಲೂ ಬಿಸಿಬಿಸಿ ಅನ್ನ ಸಪ್ಪೆಸಾರು ಊಟ ಮಾಡಬೇಕು. ಮೂರು ತಿಂಗಳು ತುಂಬುವವರೆಗೆ ತಣ್ಣೀರು ಮುಟ್ಟಕೂಡದು. ಗಾಳಿಗೆ ಮುಖ ಒಡ್ಡಬಾರದು. ತಲೆಗೆ ವಸ್ತ್ರ ಕಟ್ಟಿಕೊಳ್ಳಬೇಕು.

ಮೆಣಸು, ನಂಜಿನಪುಡಿ, ಓಮಿನಕಾಳು ಮುಂತಾದುವನ್ನು ಪಥ್ಯವಾಗಿ ಸೇವಿಸಬೇಕು. ಹೆರಿಗೆಯಾಗಿ ಆರುದಿನಗಳಾದ ಮೇಲೆ ದೇಹದ ಉಷ್ಣತೆಯನ್ನು ಸರಿದೂಗಿಸಿಕೊಳ್ಳಲು ವಿಶೇಷವಾಗಿ 'ಕೋಳಿ ಸೇರುವಾ' ಉಪಯೋಗಿಸಬೇಕು.

ಮಗುವನ್ನು ತಂದೆಯಮನೆಗೆ ಕಳುಹಿಸಿಕೊಡುವಾಗ ಹೊಸ ತೊಟ್ಟಿಲಲ್ಲಿ ಮಲಗಿಸಿ ಕಳುಹಿಸುವ ಸಂಪ್ರದಾಯವಿದೆ.

ಚೌಲ : ಮಗುವಿಗೆ ಮೂರು ವರ್ಷ ತುಂಬಿದ ಮೇಲೆ ಒಂದು ಪ್ರಶಸ್ತ ದಿನದಂದು 'ಚೌಲ'ವಿಧಿಯನ್ನು ಆಚರಿಸಲಾಗುವುದು. ಅದು ತಲೆಕೂದಲು ಬೋಳಿಸುವ ವಿಧಿ. ಆ ವಿಧಿಯ ಅಂಗವಾಗಿ ರಕ್ತಸಂಬಂಧಿಗಳಿಗೆ ಮಾಂಸದೂಟದ ವಿಶೇಷ ಔತಣಕೂಟವೊಂದನ್ನು ಏರ್ಪಡಿಸಿರಲಾಗುತ್ತದೆ.

ಚೌಲವಿಧಿ ಆಚರಿಸಿ ಹದಿನೈದು ದಿನಗಳಾದ ಮೇಲೆ ಹೆಣ್ಣುಮಗಳಾಗಿದ್ದರೆ ಮಗುವಿಗೆ ಕಿವಿ, ಮೂಗು ಚುಚ್ಚುವ ಶಾಸ್ತ್ರ ನೆರವೇರುತ್ತದೆ.

ಪ್ರೌಢಸಂಸ್ಕಾರ: ಈ ಬುಡಕಟ್ಟಿನ ಹೆಣ್ಣುಮಕ್ಕಳು ಹನ್ನೆರಡು–ಹದಿನಾಲ್ಕು ವಯಸ್ಸಿನಲ್ಲಿ 'ಋತ್ಮಂತಿ' ಹೊಂದುತ್ತಾರೆ.

ಹೆಣ್ಣುಮಗಳು ತಾನು 'ಋತ್ಮಂತಿ' ಹೊಂದಿದ ಸಂಗತಿಯನ್ನು ತಂದೆ ತಾಯಿಗಳಿಗೆ ಅರುಹಿದಾಗ ಆಕೆಯನ್ನು ಗುಡಿಸಲಿನ ಚಾವಡಿಯಲ್ಲಾಗಲೀ ಇಲ್ಲವೆ ಪ್ರತ್ಯೇಕವಾದ ಒಂದು ಹಸಿರು ಗುಡಿಸಲಲ್ಲಾಗಲೀ ಕುಳ್ಳಿರಿಸುವುದು ಪದ್ಧತಿ. ಅಂದಿನಿಂದ ಹೊರತಾಗಿ ಐದು ಅಥವಾ ಹನ್ನೊಂದು ರಾತ್ರಿಗಳು ಕಳೆಯುವ ತನಕ ಅವಳು ಗುಡಿಸಲ ಹೊರಗೇ ಕುಳಿತುಕೊಳ್ಳಬೇಕು. ಅಲ್ಲೇ ಮಲಗಬೇಕು. ಆ ಅವಧಿಯಲ್ಲಿ ಅವಳು ಏಕಾಂಗಿಯಾಗಿ ಕಾಲಹರಣಗೈಯಬೇಕೆಂಬುದು ಒಂದು ವಿಚಿತ್ರ ಕಟ್ಟಳೆ. ಹನ್ನೆರಡು ದಿನಗಳವರೆಗೂ ಕನ್ಯೆ ತಾನೇ ನೀರು ಕಾಯಿಸಿಕೊಂಡು ಸ್ನಾನ

ಮಾಡಬೇಕು ; ಬಟ್ಟೆಬರೆಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು[20]. ವಿಶೇಷವಾಗಿ ಬಿಸಿ ಬಿಸಿ ಅನ್ನ ರುಚಿಕಟ್ಟಾದ ಸಾರು, ಉತ್ತುತ್ತೆ, ದ್ರಾಕ್ಷಿ, ತುಪ್ಪ ಇನ್ನಿತರ ಪೌಷ್ಠಿಕ ಆಹಾರ ಪದಾರ್ಥಗಳನ್ನು ಸೇವಿಸಬೇಕು.

ನೀರುಹೊಯ್ಯುವುದು : ಹನ್ನೆರಡನೆಯ ದಿನ ಹಾಡಿಯ ಹಿರಿಯ ಮುತ್ತೈದೆಯೊಬ್ಬಳು ತನ್ನ ಎಡಗೈಯ ಐದು ಬೆರಳುಗಳ ಮೇಲೆ ಐದು ಬಿಲ್ಲೆಯಾಕಾರದ ಚಿಕ್ಕ ರಾಗಿರೊಟ್ಟಿಗಳನ್ನಿಟ್ಟು ಕೊಂಡು ಕನ್ಯೆಯ ತಲೆಯ ಮೇಲೆ ಆ ಕೈಯನ್ನಿಟ್ಟು ಅದೇ ಹಾಡಿಯ ಮುತ್ತೈದೆಯರಿಂದ ಅವಳ ಮೇಲೆ ನೀರು ಹೊಯ್ಯಿಸುವುದು ಸಂಪ್ರದಾಯ. ಮುತ್ತೈದೆಯ ಕೈಮೇಲೆ ಸುರಿದ ನೀರು ಕನ್ಯೆಯ ತಲೆಮೇಲೆ ಬೀಳುವುದು. ಹಾಡಿಯ ಸ್ತ್ರೀಯರು ನೀರು ಹೊಯ್ಯುವ ಸಂದರ್ಭದಲ್ಲಿ ತನ್ನ ಬೆರಳ ಮೇಲಿನ ರೊಟ್ಟಿಗಳು ಕನ್ಯೆಯ ತಲೆಯಮೇಲೆ ಬೀಳದಂತೆ ಅವಳು ಎಚ್ಚರವಹಿಸು ತ್ತಾಳೆ. ಹೀಗೆ ವಿಧ್ಯುಕ್ತರೀತಿಯಲ್ಲಿ ನೀರು ಹೊಯ್ದಾದ ಮೇಲೆ ಕನ್ಯೆಯನ್ನು ಹೊಸ ಉಡುಗೆ ತೊಡುಗೆಗಳಿಂದ ಸಿಂಗರಿಸಿ ವಿಶೇಷವಾಗಿ ಮಡಿಲುದುಂಬಿ ಹಸೆಮೇಲೆ ಕುಳ್ಳಿರಿಸಿ ಹಣ್ಣುಕಾಯಿ ಗಳಿಂದ ಪೂಜೆಮಾಡಿ 'ದೃಷ್ಟಿ' ತೆಗೆಯುತ್ತಾರೆ. ಆಹ್ವಾನಿತ ರಕ್ತಸಂಬಂಧಿಗಳು ಆಕೆಯ ಉಡಿಗೆ. ಕೊಬ್ಬರಿ, ಉತ್ತುತ್ತೆ, ಹಣ್ಣುಹಂಪಲು, ತೆಂಗಿನಕಾಯಿ, ದುಡ್ಡು ಮುಂತಾದುವನ್ನು ಹಾಕುತ್ತಾರೆ. ಕೆಲವರು ಮುಯ್ಯಿ ಒಪ್ಪಿಸುವುದು ರಿವಾಜು.

ಅಂದಿನ ಕಾರ್ಯಕ್ರಮದ ಅಂಗವಾಗಿ ರಕ್ತಸಂಬಂಧಿಗಳಿಗೆ ಭೋಜನ ನೀಡಲಾಗುವುದು. ಅನಂತರ ಎಲ್ಲರಿಗೂ ತಾಂಬೂಲ ಕೊಟ್ಟು ತೃಪ್ತಿಪಡಿಸಬೇಕೆಂಬ ನಿಯಮವುಂಟು.

ಕನ್ಯೆ ಮುಂದೆ ತಿಂಗಳಿಗೊಮ್ಮೆ ಬಹಿಷ್ಠೆಯಾದಾಗ ಐದು ರಾತ್ರಿ ಗುಡಿಸಲ ಚಾವಡಿ ಯಲ್ಲೇ ಮಲಗಬೇಕು. ನಿತ್ಯವೂ ಬಟ್ಟೆ ಸೆಳೆದುಕೊಂಡು ತಣ್ಣೀರು ಸ್ನಾನ ಮಾಡುತ್ತಾಳೆ. ಆರನೆಯದಿನ ಬಿಸಿನೀರು ಸ್ನಾನಮಾಡಿ ಗುಡಿಸಲೊಳಗೆ ಪ್ರವೇಶಿಸುತ್ತಾಳೆ.

ಮದುವೆ : ಅಡವಿಯಲ್ಲಿ ವಾಸಿಸುವ ಬೇರೆಲ್ಲಾ ಆದಿವಾಸಿ ಬುಡಕಟ್ಟುಗಳಲ್ಲಿ ಪ್ರಚಲಿತ ವಿರುವಂತೆ ಇವರಲ್ಲೂ ಸಾಂಪ್ರದಾಯಿಕ ವಿಧಾನದ ಮದುವೆ ಪದ್ಧತಿ ಮಾತ್ರವಲ್ಲದೆ ಕನ್ಯಾಪ ಹರಣ ವಿವಾಹಪದ್ಧತಿಯೂ ಚಾಲ್ತಿಯಲ್ಲಿದೆ.

ಯುವಕ ತಾನು ಇಚ್ಛಿಸಿದ ಕನ್ಯೆಯೊಂದಿಗೆ ಹಾಡಿಯಿಂದ ದೂರದ ಕಾಡಿಗೆ ಓಡಿಹೋಗಿ ಸುಮಾರು ಐದು ದಿನಗಳ ಕಾಲ ಅಲ್ಲಿ ತಂಗುತ್ತಾನೆ. ಅದಕ್ಕೆ ಮೊದಲು ತಾನು ಅವಳನ್ನು ಅಪಹರಿಸಿಕೊಂಡು ಹೋಗುವ ಸುಳಿವನ್ನು ತನ್ನ ಅಪ್ತರಿಗೆ ಸೂಕ್ಷ್ಮವಾಗಿ ತಿಳಿಸಿರುತ್ತಾನೆ. ಆರನೆಯ ದಿನ ಹಾಡಿಯವರು ಓಲಗ ಸಮೇತರಾಗಿ ಇಬ್ಬರನ್ನೂ ಹುಡುಕಿಕೊಂಡು ಕಾಡಿಗೆ ಹೋಗಿ ಅವರನ್ನು ಪತ್ತೆಹಚ್ಚಿ ಹಾಡಿಗೆ ಕರೆತರುತ್ತಾರೆ. ಕಟ್ಟೆಗೌಡ ಮತ್ತು ಹಾಡಿಯ ಯಜಮಾನನ ಸಮ್ಮುಖದಲ್ಲಿ ಹಾಡಿಯ ಯಡಿಗ್ಯ ಅಥವಾ ಲಾಂಬೂರ್ ವಿಧ್ಯುಕ್ತವಾಗಿ ಅವರ ಮದುವೆ ಕಾರ್ಯ ನಡೆಸಿ ಕೊಡುತ್ತಾನೆ. ಹುಡುಗನು ಹುಡುಗಿಯ ಕೊರಳಿಗೆ ತಾಳಿ ಕಟ್ಟುತ್ತಾನೆ. ತನ್ನ ಮದುವೆಯ ಪ್ರಯುಕ್ತ ಹುಡುಗ ರಕ್ತಸಂಬಂಧಿಗಳಿಗೆ ಭೋಜನ ನೀಡಬೇಕು. ಮರುದಿನದಿಂದ ಹೊಸ ದಂಪತಿಗಳು ಪ್ರತ್ಯೇಕ ಗುಡಿಸಲಲ್ಲಿ ವಾಸಿಸಬಹುದು.

ಶಾಸ್ತ್ರೋಕ್ತ ವಿವಾಹ : ಇವರ ಸಾಂಪ್ರದಾಯಿಕ ವಿವಾಹ ವಿಧಿಗಳು ಮತ್ತು ಸಂಪ್ರದಾಯ ಗಳು ಅತ್ಯಂತ ಸರಳವಾದವು, ಅಷ್ಟೇ ಮಹತ್ವಪೂರ್ಣವಾದವು.

ಇವರಲ್ಲಿ ಒಂದೇ ಕುಲದೇವತಾರಾಧಕರ ನಡುವೆ ರಕ್ತಸಂಬಂಧ ಏರ್ಪಡುವುದಿಲ್ಲ. ಸೋದರಮಾವನ ಮಗಳನ್ನು ಮದುವೆಯಾಗಬಹುದು. ಅಕ್ಕನ ಮಗಳನ್ನು ಕಟ್ಟಿಕೊಂಡ ನಿದರ್ಶನಗಳೂ ಇವೆ. ಆದರೆ ಹೊಸ ಸಂಬಂಧಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ. ಒಂದೇ

ತಾಯಿಯ ಇಬ್ಬರು ಹೆಣ್ಣುಮಕ್ಕಳನ್ನು ಒಬ್ಬನೇ ವಿವಾಹಮಾಡಿಕೊಳ್ಳುವುದರ ವಿರುದ್ಧ ಯಾವುದೇ ರೀತಿಯ ನಿರ್ಬಂಧವಿಲ್ಲ. ಅಲ್ಲದೆ ಒಂದೇ ತಾಯಿಯ ಹೆಣ್ಣುಮಕ್ಕಳು ಒಂದೇ ತಾಯಿಯ ಗಂಡುಮಕ್ಕಳನ್ನು ವಿವಾಹವಾಗಿ ಜೀವನ ನಡೆಸುವುದಕ್ಕೂ ಅವಕಾಶವಿದೆ.

'ಋತುಮತಿ' ಹೊಂದುವುದಕ್ಕಿಂತ ಮೊದಲೇ ಹುಡುಗಿಯನ್ನು ಹುಡುಗನಿಗೆ ವಿಧ್ಯುಕ್ತ ರೀತಿಯಲ್ಲಿ ವಿವಾಹ ಮಾಡಿ ಒಪ್ಪಿಸುವ ಸಂಪ್ರದಾಯ ರೂಢಿಯಲ್ಲಿದೆ.

ಮಾತು ನಡೆಸುವುದು : ಈ ಕಾರ್ಯದಲ್ಲಿ ಹುಡುಗನ ತಂದೆಯ ಹೊಣೆಯೇ ಹೆಚ್ಚು. ಆತ ದೂರದ ಹಾಡಿಗಳಿಗೆ ಕನ್ಯಾರ್ಥಿಯಾಗಿ ಹೋಗುವಾಗ ತನ್ನ ಸಂಗಡ ಹಾಡಿಯ ಇಬ್ಬರು ಗಂಡಸರು ಇಬ್ಬರು ಹೆಂಗಸರನ್ನು ಕರೆದುಕೊಂಡು ಹೋಗುತ್ತಾನೆ.[21] ಹೊರಡುವಾಗ ಶಕುನ ನೋಡುವುದು ವಾಡಿಕೆ.[22]

ಕನ್ಯೆಯ ಕಡೆಯವರು ಮನೆಗೆ ಬಂದ ಅತಿಥಿಗಳನ್ನು ಔಪಚಾರಿಕವಾಗಿ ಬರಮಾಡಿ ಕೊಳ್ಳುವರು. ಗಂಡಿನ ಕಡೆಯವರು ಹೊಸ್ತಿಲು ತುಳಿಯುತ್ತಿದ್ದಂತೆಯೆ ತಾವು ಹೆಣ್ಣಿನ ಮಾತಿಗೆ ಬಂದಿರುವುದಾಗಿ ಪ್ರಕಟಿಸುವುದು ಪದ್ಧತಿ. ಕನ್ಯೆಯ ಮನೆಯವರು ಅಷ್ಟೇ ಸಂಯಮದಿಂದ 'ಕೊಡೋ ಕುಸಿ ಇದ್ರೆ ನೋಡಾನ ಮೊದ್ಲು ಊಟ ಮಾಡಿ' ಎಂದು ಊಟ ನೀಡುತ್ತಾರೆ. ಊಟಕ್ಕೆ ಕುಳಿತಾಗ ಗಂಡಿನ ಕಡೆಯವರಲ್ಲೊಬ್ಬರು ಉದ್ದೇಶಪೂರ್ವಕವಾಗಿ 'ಏನು ನಮಗೆ ಖಾಲಿ ಊಟಾನೊ ಇಲ್ಲೊ ಹೆಣ್ಣು ಕೊಡೊ ಊಟಾನೊ?' ಎಂದು ನೇರವಾಗಿಯೇ ಪ್ರಶ್ನಿಸುವುದು ಸಂಪ್ರದಾಯ. ಆಗ ಹೆಣ್ಣಿನ ಕಡೆಯವರು ತಮ್ಮ ಅಭಿಪ್ರಾಯವನ್ನು ಕಾದಿರಿಸಿ ಲೋಕಾಭಿರಾಮವಾಗಿ ಮಾತಿಗಾರಂಭಿಸಿ ಅನಂತರ ಸಂಬಂಧ ಇಷ್ಟವಾಗುವುದಾದರೆ ಮಾತ್ರ ಮೊದಲು ತೆರ ಕೊಡುವುದರ ಬಗ್ಗೆ ಪ್ರಸ್ತಾಪ ನಡೆಸಿ ಒಪ್ಪಂದ ಮಾಡಿಕೊಳ್ಳಲಾಗುವುದು.[23] ಎಲ್ಲ ವಿಷಯಗಳನ್ನೂ ಗಂಡು ಹೆಣ್ಣಿನ ತಂದೆಗಳು ಮುಕ್ತಮನಸ್ಸಿನಿಂದ ಚರ್ಚಿಸಿ ಒಂದು ನಿರ್ಣಯಕ್ಕೆ ಬಂದ ಮೇಲೆ ವೀಳ್ಯಶಾಸ್ತ್ರಕ್ಕೆ ಅನುಕೂಲವಾದ ದಿನವೊಂದನ್ನು ನಿಷ್ಕರ್ಷೆ ಮಾಡಿಕೊಳ್ಳಲಾಗುತ್ತದೆ.

ಮಾತುಕತೆ ಫಲಕಾರಿಯಾಗಿದ್ದಲ್ಲಿ ಗಂಡಿನ ಕಡೆಯವರು ಹೆಣ್ಣಿನ ಕಡೆಯ ಐದು ಜನ ಮುತ್ತೈದೆಯರು ಮತ್ತು ಐವರು ಪುರುಷರಿಗೆ ಯಥಾನುಶಕ್ತಿ ಉಡುಗೊರೆ ಕೊಡುವ ವಿಶೇಷ ಸಂಪ್ರದಾಯವಿದೆ.

ವೀಳ್ಯಶಾಸ್ತ್ರ : ಒಂದು ಗೊತ್ತಾದ ದಿನ ಗಂಡಿನ ಕಡೆಯಿಂದ ಐದು ಮಂದಿ ಒಂದು ತೆಂಗಿನಕಾಯಿ, ಐದು ವೀಳ್ಯದೆಲೆ, ಅಡಕೆ, ಕಲ್ಲುಸಕ್ಕರೆ, ಕುಂಕುಮ, ಹೂ ಹಣ್ಣು ಮುಂತಾದುವನ್ನು ಒಂದು ಕೈ ಚೀಲದಲ್ಲಿ ತುಂಬಿಸಿಕೊಂಡು ಕನ್ಯೆಯ ಗುಡಿಸಲಿಗೆ ಬರುತ್ತಾರೆ. ಹೆಣ್ಣಿನ ಮನೆಯವರು ಬಂದವರಿಗೆ ಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಕಂಬಳಿಯ ಮೇಲೆ ಕುಳ್ಳಿರಿಸಿ ಕ್ಷೇಮಸಮಾಚಾರ ವಿಚಾರಿಸುತ್ತಾರೆ. ಅಂದಿನ ಶಾಸ್ತ್ರದ ಅಂಗವಾಗಿ ಸಿಹಿಯಡಿಗೆ ಅಣಿಗೊಂಡಿರುತ್ತದೆ. ಹಾಡಿಯ ಮುಖ್ಯರು ಆ ಭೋಜನದಲ್ಲಿ ಪಾಲ್ಗೊಳ್ಳುತ್ತಾರೆ. ಊಟ ಬಡಿಸುವ ನೆಪದಲ್ಲಿ ಕನ್ಯೆ ಮೊದಲಬಾರಿಗೆ ಅಂದು ಕಾಣಿಸಿಕೊಳ್ಳುತ್ತಾಳೆ. ಎರಡೂ ಬಣದವರು ಒಂದೇ ಪಂಕ್ತಿಯಲ್ಲಿ ಕುಳಿತು ಸಹಭೋಜನ ನಡೆಸಿದ ನಂತರ ಅಂದಿನ ಶಾಸ್ತ್ರದ ಮುಖ್ಯ ಸಮಾರಂಭ ಆರಂಭವಾಗುವುದು. ಕನ್ಯೆಗೆ ಒಳ್ಳೆಯ ಸೀರೆಯೊಂದನ್ನು ಉಡಿಸಿ ಮುದಿಲುಮುಂಬಿ ಗಂಡಿನ ಕಡೆಯವರ ಎದುರಿನಲ್ಲಿ ಹಸೆಯ ಮೇಲೆ ಕುಳ್ಳಿರಿಸುತ್ತಾರೆ. ಅವಳ ಒಂದು ಪಕ್ಕದಲ್ಲಿ ಅವಳ ತಂದೆ ಕುಳಿತಿರುತ್ತಾನೆ. ಗಂಡಿನ ಬಣದವರು ಅವರ ಎದುರಿನಲ್ಲಿ ಹೂ ಹಣ್ಣು ಫಲಗಳನ್ನಿರಿಸುತ್ತಾರೆ. ಅದಕ್ಕೆ ಸಮ್ಮತಿಸೂಚಕವಾಗಿ ಹೆಣ್ಣಿನ ಮನೆಯವರು ಗಂಡಿನ ಕಡೆಯವರಿಗೆ

ತಾಂಬೂಲ ನೀಡುತ್ತಾರೆ. ಅಂತಿಮವಾಗಿ ಎರಡೂ ಬಣದವರು ಪರಸ್ಪರ ವೀಳ್ಯ ಸ್ವೀಕರಿಸುವರು. ಆ ಹಂತದಲ್ಲಿ ಮದುವೆ ನಿಶ್ಚಿತಗೊಂಡಂತೆಯೆ.

ಇಷ್ಟಾದ ಮೇಲೆ, ಇನ್ನಷ್ಟು ತೆಂಗಿನಕಾಯಿ, ವೀಳ್ಯದೆಲೆ, ಅಡಕೆ ಫಲಪುಷ್ಪಗಳೊಂದಿಗೆ 'ತೆರ'ದ ಮೊಬಲಗನ್ನು ಒಂದು ವಸ್ತ್ರದಲ್ಲಿಟ್ಟು ಆ ಹಣವನ್ನು ಪೂಜಿಸಿದ ನಂತರ ನಾಲ್ವರು (ಅವರಲ್ಲಿ ಇಬ್ಬರು ಮುತ್ತೈದೆಯರು) ಕೂಡಿ ಕನ್ಯೆಯ ತಂದೆಯ ಕೈಗೆ ಅದನ್ನು ಒಪ್ಪಿಸಲಾಗುವುದು–ಅಲ್ಲಿ ನೆರೆದವರ ಸಮ್ಮುಖದಲ್ಲಿ. ತೆರ ಸ್ವೀಕರಿಸಿದ ಕನ್ಯೆಯ ತಂದೆ ಗುಂಪಿನ ಕಡೆಗೆ ಕೈ ಎತ್ತಿ ತೋರಿಸಿ 'ತೆರಬಂದಿದೆ' ಎಂದು ಘೋಷಿಸುತ್ತಾನೆ. ಅನಂತರ ಅದನ್ನು ಕಂಬಳಿಯ ಮೇಲಿಟ್ಟು ಪೂಜಿಸಿ ಎಣಿಸಿಕೊಳ್ಳುತ್ತಾನೆ. ಕೊನೆಯಲ್ಲಿ ಅಲ್ಲಿ ನೆರೆದವರಿಗೆ ಎಲೆ ಅಡಕೆ ಹಣ್ಣು ಕಾಯಿಗಳನ್ನು 'ವೀಳ್ಯಪ್ರಸಾದ' ಎಂದು ಹಂಚುತ್ತಾನೆ.

ತೆರಸ್ವೀಕಾರದ ನಂತರ ಹೆಣ್ಣಿನ ಕಡೆಯ ಯಡಿಗ್ಯ ಅಥವಾ ಲಾಂಬೂರ್ ಮದುವೆ ಜರುಗುವ ದಿನವನ್ನು ಪ್ರಕಟಿಸುತ್ತಾನೆ[24]

ಅದೇ ದಿನ, ಜವಳಿಕೊಳ್ಳಲು ಪಟ್ಟಣಕ್ಕೆ ಹೋಗುವ ದಿನವನ್ನೂ ಗೊತ್ತುಪಡಿಸಿಕೊಳ್ಳಲಾಗುತ್ತದೆ.[25] ಎರಡೂ ಬಣದವರಿಗೆ ಅನುಕೂಲವೆನಿಸಿದ ದಿನದಂದು ಒಟ್ಟಿಗೇ ಪಟ್ಟಣಕ್ಕೆ ಹೋಗಿ ಜವಳಿ ಖರೀದಿಸಿ ಜೊತೆಗೆ ತಾಳಿ, ಬಾಸಿಂಗ ಮುಂತಾದವನ್ನು ಕೊಂಡು ತರುತ್ತಾರೆ.

ಅರಿಸಿಣೆಣ್ಣೆ : ಮದುವೆಯ ಹಿಂದಿನ ದಿನ ರಾತ್ರಿ ನಡೆಯುವ ಶಾಸ್ತ್ರ ಇದು. ಗಂಡು ಹೆಣ್ಣುಗಳಿಗೆ ಅವರವರ ಗುಡಿಸಲಲ್ಲೇ ಈ ಶಾಸ್ತ್ರವನ್ನು ಆಚರಿಸಲಾಗುವುದು. ಆಹ್ವಾನಿತ ರಕ್ತ ಸಂಬಂಧಿಗಳಿಗೆಲ್ಲಾ ಭೋಜನ ಮುಗಿದ ಮೇಲೆ ಮದುಮಗ/ಮದುಮಗಳ ಮನೆದೈವದ ಪೂಜೆ ಆರಂಭಗೊಳ್ಳುತ್ತದೆ. ದೇವರಿಗೆ ಪಂಚಾರತಿ ಬೆಳಗಿ ಹಣ್ಣುಕಾಯಿಗಳನ್ನು ಅರ್ಪಿಸಲಾಗುವುದು. ಆಮೇಲೆ ಮದುಮಗ/ಮದುಮಗಳನ್ನು ದೇವರ ಪೀಠದ ಎದುರಿನಲ್ಲಿ ಕುಳ್ಳಿರಿಸಿ ಮುತ್ತೈದೆಯರು ಎಣ್ಣೆ ಅರಿಸಿನ ಮಾಡುತ್ತಾರೆ. ಬೆಳಕು ಹರಿಯುವವರೆಗೂ ಎಣ್ಣೆ ಅರಿಸಿನ ತೀಡಿ ಮದುಮಗ/ಮದುಮಗಳನ್ನು ಗೋಳು ಹೊಯ್ದುಕೊಳ್ಳುವುದು ಈ ಬುಡಕಟ್ಟಿನ ಒಂದು ವಿನೋದ ಸಂಪ್ರದಾಯ.

ಚಪ್ಪರ : ವಧುವಿನ ಮನೆಯಿಂದ ಒಂದು ಕಲ್ಲೆಸೆಯುವ ದೂರದ ಅಂತರದಲ್ಲಿ ಒಂದು ಹಸಿರು ಚಪ್ಪರ ಅಥವಾ ಮಂಟಪವನ್ನು ನಿರ್ಮಿಸಲಾಗುವುದು. ನಾಲ್ಕು ಕಂಬಗಳ ಆ ಚಪ್ಪರ ಮಾವಿನ ತೋರಣದಿಂದ ಅಲಂಕೃತವಾಗಿರುತ್ತದೆ.

ತಾಳಿಕಟ್ಟುವುದು : ಮದುವೆ ವಧು ಹಾಡಿಯಲ್ಲೇ ಜರುಗುವುದಾದ್ದರಿಂದ ವರನು ದಿಬ್ಬಣ ಸಮೇತನಾಗಿ ವಧು ಹಾಡಿಗೆ ಬಂದು ಒಂದು 'ಬಿಡದಿ' ಮನೆಯಲ್ಲಿ ತಂಗಿರುತ್ತಾನೆ.[26]

ಮದುವೆಯ ವಿಧಿಗಳನ್ನು ನಡೆಸಿಕೊಡುವ ಪುರೋಹಿತ[27] ಚಪ್ಪರಕ್ಕೆ ಬರುವುದಕ್ಕೆ ಮುಂಚೆ ಮುತ್ತೈದೆಯರು ಗಂಡು ಹೆಣ್ಣುಗಳಿಗೆ ಚಪ್ಪರದ ಸನಿಹದಲ್ಲಿ ಕುಳ್ಳಿರಿಸಿ ಶಾಸ್ತ್ರೋಕ್ತ ರೀತಿಯಲ್ಲಿ ಬಿಸಿನೀರು ಸ್ನಾನಮಾಡಿಸುತ್ತಾರೆ. ಅನಂತರ ಇಬ್ಬರಿಗೂ ಹೊಸ ಉಡುಗೆ ತೊಡುಗೆಗಳಿಂದ ಅಲಂಕರಿಸಿ ಹಣೆಗೆ ಚಿಂದಿನ ಬಾಸಿಂಗ ಕಟ್ಟಿ ಹೆಗಲ ಮೇಲೆ 'ಮುಸುಕು' ಹಾಕುತ್ತಾರೆ. ಎಡಗೈಗಳಿಗೆ ಕಂಕಣ ಕಟ್ಟಿ 'ಹೊಸವಲ್ಲಿ' ಹಾಕಲಾಗುವುದು–ಇಷ್ಟೆಲ್ಲಾ ಹಸಿರು ಚಪ್ಪರದ ಹೊರಗಡೆಯೇ ನಡೆಯುತ್ತದೆ.

ಅಷ್ಟುಹೊತ್ತಿಗೆ, ಪುರೋಹಿತ ಚಪ್ಪರಕ್ಕೆ ಬಂದು ಗಂಡುಹೆಣ್ಣುಗಳಿಗೆ ಪ್ರಪ್ರಥಮವಾಗಿ ಸೇಸೆ ಇಕ್ಕಿ ಹರಸುತ್ತಾನೆ. ರಕ್ತ ಸಂಬಂಧಿಗಳು ಪುರೋಹಿತನನ್ನು ಅನುಕರಿಸುತ್ತಾರೆ. ಆಮೇಲೆ ಪುರೋಹಿತನು ತಾಳಿ[28] ಪೂಜೆ ಮಾಡಿ ಅದನ್ನು ಮದುಮಗನ ಕೈಗೆ ನೀಡುತ್ತಾನೆ. ಮದುಮಗ ಅದನ್ನು ಉಲ್ಟಾಮಾಡಿ ಮದುಗಿಯ ಕೊರಳಿಗೆ ಕಟ್ಟುತ್ತಾನೆ. ಹಾಗೆ ತಾಳಿ ಕಟ್ಟುವಾಗ ಪುರೋಹಿ

ತನು ತನ್ನದೇ ಆದ ಒಂದು ಆರ್ಷೇಯ ಭಾಷೆಯಲ್ಲಿ ಒಂದೆರಡು ನುಡಿಗಳನ್ನು ಪಠಿಸುತ್ತಾನೆ. ಅಲ್ಲಿಗೆ ಮದುವೆ ವಿಧ್ಯುಕ್ತವಾಗಿ ನೆರವೇರಿದಂತೆ ಎಂದು ತಿಳಿದುಕೊಳ್ಳಲಾಗುವುದು.[30]

ಪ್ರಮಾಣ ಮಾಡುವುದು : ಅಷ್ಟಾದ ಮೇಲೆ, ಹೊಸ ದಂಪತಿಗಳು ಅದೇ ಚಪ್ಪರದಡಿಯಲ್ಲಿ ರಕ್ತಸಂಬಂಧಿಗಳ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಬೇಕು. ಗಂಡು ತನ್ನ ಸಂಗಾತಿಯನ್ನು ತಾನು ಬದುಕಿರುವವರೆಗೂ ಸರಿಯಾದ ರೀತಿಯಲ್ಲಿ ಕಾಪಾಡಿಕೊಂಡು ಹೋಗುವುದಾಗಿ ಭರವಸೆ ನೀಡಿದರೆ ಹೆಣ್ಣು ತನ್ನ ಕೊನೆಯುಸಿರಿನವರೆಗೂ ಗಂಡನಿಗೆ ವಿಧೇಯಳಾಗಿಯೂ, ಪತಿನಿಷ್ಠಳಾಗಿಯೂ ವರ್ತಿಸುವುದಾಗಿ ಪ್ರಮಾಣ ಮಾಡುವಳು. ಇದು ಅಂದಿನ ಪ್ರಧಾನ ವಿಧಿ.

ಪ್ರಮಾಣವಚನ ಸ್ವೀಕಾರವಾದ ಮೇಲೆ, ದಂಪತಿಗಳು ಮಂಟಪದಲ್ಲಿ ಕಂಬಳಿಯೊಂದರ ಮೇಲೆ ಕುಳಿತುಕೊಳ್ಳುತ್ತಾರೆ.[31] ಮದುವೆಯ ವಿಧಿಗಳನ್ನು ನಡೆಸಿಕೊಟ್ಟ ಪುರೋಹಿತ ಮೊದಲಿನಂತೆ ಪ್ರಥಮನಾಗಿ ದಂಪತಿಗಳಿಗೆ ಅಕ್ಷತೆ ಚೆಲ್ಲಿ ಆಶೀರ್ವದಿಸುತ್ತಾನೆ. ಅನಂತರ ವಧುವರರ ತಂದೆ ತಾಯಿಗಳು ಮತ್ತು ರಕ್ತಸಂಬಂಧಿಗಳು ಅಕ್ಷತೆ ಎರಚಿ ಹೊಸದಂಪತಿಗಳಿಗೆ ಶುಭ ಕೋರುತ್ತಾರೆ. ಈ ಅಕ್ಷತೆ ಎರಚುವ ವಿಧಿ ಎರಡು ಸಲ ನಡೆಯುತ್ತದೆ.

ಬಿಸಿಲೇರುವವರೊಳಗೆ ಮದುವೆಯ ವಿಧಿವಿಹಿತ ಕಾರ್ಯಗಳು ಮುಗಿಯಬೇಕೆಂಬ ಬುಡಕಟ್ಟಿನ ನಿಯಮದಂತೆ ಸಾಧ್ಯವಾದಷ್ಟೂ ಜಾಗ್ರತೆಯಾಗಿ ಎಲ್ಲಾ ವಿಧಿಗಳನ್ನೂ ಮುಗಿಸಲಾಗುವುದು.

ದೇವರ ಕದಿಯುವುದು : ಮಂಟಪಶಾಸ್ತ್ರ ಮುಗಿದ ಮೇಲೆ ದಂಪತಿಗಳನ್ನು ವಧುಗೃಹಕ್ಕೆ ಕರೆತರಲಾಗುವುದು. ಅಲ್ಲಿ ವಿನೋದಕ್ಕಾಗಿ ಗಂಡು ಹೆಣ್ಣಿನ ಮನೆದೇವರ ಪ್ರತಿಮೆಯೊಂದನ್ನು ಕದ್ದು ಬಚ್ಚಿಡುತ್ತಾನೆ. ಆಗ ಹೆಣ್ಣು ಗಂಡನಿಗೆ ಬೆಲ್ಲ ಕೊಬ್ಬರಿ ತಿನ್ನಿಸಬೇಕು. ಆತ ಪ್ರತಿಮೆಯನ್ನು ಹಿಂತಿರುಗಿಸುತ್ತಾನೆ.

ಕೂಡಿ ಉಣ್ಣುವುದು : ಹುಡುಗಿಯ ತಾಯಿ ಗಂಗಳವೊಂದರಲ್ಲಿ ಅನ್ನ ಬೆಲ್ಲ ಹಾಲು ಹಾಕಿ ತಂದು ಇಬ್ಬರಿಗೂ ಕೂಡಿ ಊಟ ಮಾಡಲು ಹೇಳುತ್ತಾಳೆ. ಗಂಡು ಹೆಣ್ಣುಗಳು ಅತ್ಯಂತ ನಿರ್ವಿಕಾರ ಭಾವದಿಂದ ಅಷ್ಟೇ ನಿಸ್ಸಂಕೋಚದಿಂದ ಒಂದೇ ಗಂಗಳದಲ್ಲಿ ಊಟ ಮಾಡಬೇಕು.

ಇವರಲ್ಲಿ ಹೆಣ್ಣು ಊಟಮಾಡಿಬಿಟ್ಟದ್ದನ್ನು ಗಂಡು ತಿನ್ನುವುದಿಲ್ಲವಾದ್ದರಿಂದ ಗಂಡು ತಿಂದು ಬಿಟ್ಟಿದ್ದನ್ನು ಹೆಣ್ಣು ತಿನ್ನಬೇಕೆಂಬ ನಿಯಮವಿದೆ. ಆದ್ದರಿಂದ ಸಾಮಾನ್ಯವಾಗಿ ಹೆಣ್ಣು ಒಂದೇ ಒಂದು ಗುಕ್ಕು ತಿನ್ನುವುದು ಸಂಪ್ರದಾಯ.

ಓಕಳಿಯಾಟ : ಹಾಡಿಯ ಮಡಿಗ್ಯ ಅಥವಾ ಲಾಂಬೂರ್ ಮದುಮಕ್ಕಳ ಬಾಸಿಂಗಗಳನ್ನು ಬಿಚ್ಚಿದ ಮೇಲೆ ಅವರನ್ನು ಅರಿಶಿನ ಉಡುಗೆಯಲ್ಲಿ ಹಸಿರು ಚಪ್ಪರದ ಸನಿಹಕ್ಕೆ ಕರೆತರಲಾಗುವುದು. ಚಪ್ಪರದ ನಾಲ್ಕು ಮೂಲೆಗಳಲ್ಲಿ ನಾಲ್ಕು ಸಣ್ಣ ಗಡಿಗೆಗಳನ್ನಿಟ್ಟು ಆ ಗಡಿಗೆಗಳ ಕುತ್ತಿಗೆಗೆ ಐದು ಸುತ್ತು ನೂಲು ಎಳೆದು ಕಟ್ಟಿರುತ್ತಾರೆ. ಗಂಡು ತನ್ನ ಎಡಗಾಲನ್ನು ಮುಂದಿಟ್ಟು ಆ ನೂಲಿನ ದಾರವನ್ನು ದಾಟಿ ಚಪ್ಪರದೊಳಕ್ಕೆ ಪ್ರವೇಶಿಸಿ ಹೆಣ್ಣನ್ನು ತನ್ನ ಎಡಗೈಯಿಂದ ಎತ್ತಿ ಕರೆದುಕೊಳ್ಳಬೇಕು. ಅನಂತರ ಇಬ್ಬರೂ ಇದಿರುಬದಿರಾಗಿ ಕುಳಿತು ವಿನೋದ ಶಾಸ್ತ್ರಗಳಲ್ಲಿ ತೊಡಗಬೇಕು. ಮೊದಲು ಒಡವೆ ಗೆಲ್ಲುವ ಆಟ. ಪಾತ್ರೆಯೊಂದರಲ್ಲಿ ಓಕಳಿ ನೀರಿಟ್ಟು ಅದರೊಳಕ್ಕೆ ಒಡವೆಗಳನ್ನು ಹಾಕಿ ಪಂದ್ಯವೇರ್ಪಡಿಸುತ್ತಾರೆ. ಇಬ್ಬರಲ್ಲಿ ಯಾರು ಮೊದಲು ಆ ಒಡವೆಗಳನ್ನು 'ಗಪ್' ಎಂದು ಹಿಡಿಯುತ್ತಾರೊ ಅವರು ಜಯಶಾಲಿಗಳು. ಸೋತವರಿಗೆ 'ತ್ರಾಣ'ವಿಲ್ಲವೆಂದು ಭಾವಿಸಲಾಗುವುದು. ಇದಾದಮೇಲೆ ಉಂಗುರ ಗೆಲ್ಲುವ ಶಾಸ್ತ್ರ. ಗಂಡಿನ ಬಲಗೈ ಮುಷ್ಟಿಯಲ್ಲಿದ್ದ ಉಂಗುರವನ್ನು ಹೆಣ್ಣು ಗೆಲ್ಲಬೇಕು. ಒಂದು ವೇಳೆ ಹೆಣ್ಣು ಆ ಉಂಗುರ ಗೆದ್ದರೆ ಗಂಡು ತನ್ನ ಎಡಗೈಯಿಂದ ಹೆಣ್ಣಿನ 'ಚಿಪ್ಪುಳುಗ್ಯ'[32]ಯನ್ನು ಸಡಿಲಿಸಬೇಕು.

ಕೊನೆಯದಾಗಿ ಓಕಳಿಯಾಟ. ಗಂಡುಹೆಣ್ಣುಗಳು ಒಬ್ಬರ ಮೇಲೊಬ್ಬರು ಓಕಳಿನೀರು ಎರಚಿಕೊಳ್ಳುವ ಶಾಸ್ತ್ರ. ಆಟವಲ್ಲಿ ಸೋತವರು ಚಪ್ಪರದಿಂದ ಮೊದಲು ಕಾಲ್ತೆಗೆಯುವುದು ವಿಧಾನ.

ಅನಂತರ ಗಂಡಿನ ಅಕ್ಕತಂಗಿಯರು ಚಪ್ಪರದ ಸನಿಹದಲ್ಲೇ ಹೊಸಜಾಗದಲ್ಲಿ ನೀರು ಕಾಯಿಸಿ ಮದುಮಕ್ಕಳಿಗೆ ಬಿಸಿನೀರು ಸ್ನಾನ ಮಾಡಿಸುತ್ತಾರೆ.

ಮೆರವಣಿಗೆ: ಸ್ನಾನವಾದ ಮೇಲೆ ಮದುಮಕ್ಕಳು ಹೊಸ ಉಡುಗೆತೊಡುಗೆಗಳನ್ನು ಧರಿಸಿ ಮೆರವಣಿಗೆ ಹೊರಡಲು ಸಿದ್ಧರಾಗುತ್ತಾರೆ. ಗಂಡಿನ ಸೋದರಮಾವ ಗಂಡನ್ನೂ ಹೆಣ್ಣಿನ ಸೋದರಮಾವ ಹೆಣ್ಣನ್ನೂ ಹೆಗಲ ಮೇಲೆ ಹೊತ್ತು ಹಾಡಿಯ ಗುಡಿಸಲುಗಳ ಮುಂದೆ ಪ್ರದರ್ಶನ ಕುಣಿತದೊಂದಿಗೆ ಮೆರವಣಿಗೆ ನಡೆಸುವುದು ಸಂಪ್ರದಾಯ. ಅವರು ಎಷ್ಟೆಷ್ಟು ಆವೇಶಭರಿತರಾಗಿ ಪ್ರದರ್ಶನ ಕುಣಿತ ಹಾಕುತ್ತಾರೊ ಅಷ್ಟಷ್ಟು ಬೇಗ ಹಾಡಿಯ ಗುಡಿಸಲುಗಳಿಂದ ಬೆಲ್ಲ ಕೊಬ್ಬರಿಗಳು ಬಂದು ಜಮಾಯಿಸುತ್ತವೆ. ಮೆರವಣಿಗೆ ಮುಗಿದಮೇಲೆ ಎಲ್ಲರೂ ಬೆಲ್ಲ ಕೊಬ್ಬರಿ ಹಂಚಿ ತಿನ್ನುತ್ತಾರೆ.

ಅಂದು ಮದುವೆ ಸಮಾರಂಭದ ಅಂಗವಾಗಿ ಮಾಂಸದಡಿಗೆ ಅಣಿಗೊಂಡಿರುತ್ತದೆ.

ಹೆಣ್ಣಿನ ಹಾಡಿಯಿಂದ ಗಂಡಿನ ಹಾಡಿಗೆ: ಮರುದಿನ ಮುಂಜಾನೆ ರಕ್ತಸಂಬಂಧಿಗಳ ಸಮೇತ ಗಂಡು ತನ್ನ ಹೊಸ ಸಂಗಾತಿಯೊಡನೆ ಹೆಣ್ಣಿನ ಹಾಡಿಯಿಂದ ಹೊರಡುತ್ತಾನೆ. ಹೆಣ್ಣಿನ ತಾಯಿ ಮಗಳ ಉಡಿಗೆ ಮಡಿಲಕ್ಕಿ, ಉತ್ತುತ್ತೆ, ವೀಳ್ಯದೆಲೆ, ಅಡಕೆ, ತೆಂಗಿನಕಾಯಿ, ದುಡ್ಡು ಮುಂತಾದ ಪದಾರ್ಥಗಳನ್ನು ತುಂಬುತ್ತಾಳೆ. ಅಳಿಯನಿಗೆ ತುಂಡುಪಟ್ಟಿ, ಒಂದು ಪೇಟ, ಹಿತ್ತಾಳೆಯ ಊಟದ ತಟ್ಟೆ, ಲೋಟಗಳನ್ನು ಮುಯ್ಯಿನೀಡಿ ಬೀಳ್ಕೊಡುವುದುಂಟು. ಮಗಳ ಸಂಗಡ ನಾಲ್ಕು ಮಂದಿ ಅಪ್ತರನ್ನು ಕಳುಹಿಸಿಕೊಡುವುದು—ಮಗಳ ಧೈರ್ಯಕ್ಕಾಗಿ.

ದಿಬ್ಬಣ ಕಾಲು ನಡಿಗೆಯಲ್ಲೇ ಹೆಣ್ಣಿನ ಹಾಡಿಯಿಂದ ಗಂಡಿನ ಹಾಡಿಗೆ ಸಾಗಿಬರುತ್ತದೆ. ಹಾಡಿ ಸಮೀಪಿಸುತ್ತಿದ್ದಂತೆ ಗಂಡು ಹೆಣ್ಣುಗಳ ಸೋದರ ಮಾವಂದಿರು ಮದುಮಕ್ಕಳನ್ನು ಹಿಂದಿನಂತೆ ಮತ್ತೆ ಹೆಗಲ ಮೇಲೆ ಹೊತ್ತು ಕುಣಿಯುತ್ತಾ ಸಾಗುವುದು ಪದ್ಧತಿ.

ದಿಬ್ಬಣ ಹಾಡಿಯನ್ನು ಪ್ರವೇಶಿಸಿದ ಮೇಲೆ ನವದಂಪತಿಗಳನ್ನು ಗುಡಿದುಂಬಿಸಿಕೊಳ್ಳುವುದಕ್ಕೆ ಮುನ್ನ ಮನೆದೇವರ ಪೂಜೆ ನೆರವೇರಬೇಕು. ಪೂಜೆಯ ನಂತರ ದಂಪತಿಗಳನ್ನು ದೇವರ ಎದುರಿನಲ್ಲಿ ಹಸೆ[33] ಮೇಲೆ ಕುಳ್ಳಿರಿಸುವರು. ಯಡಿಗ್ಯನೂ ಸೇರಿಕೊಂಡಂತೆ ರಕ್ತಸಂಬಂಧಿಗಳೆಲ್ಲಾ ದಂಪತಿಗಳಿಗೆ ಸೇಸೆಯಿಕ್ಕಿ ಹರಸುತ್ತಾರೆ.

ಅಷ್ಟಾದ ಮೇಲೆ, ಗಂಡಿನ ತಾಯಿ ಮಗ ಮತ್ತು ಸೊಸೆಯನ್ನು ತನ್ನ ಎರಡೂ ತೊಡೆಗಳ ಮೇಲೆ ಜೇರೆ ಜೇರೆಯಾಗಿ ಕುಳ್ಳಿರಿಸಿಕೊಂಡು ಇಬ್ಬರನ್ನೂ ತೂಗಿ ನೋಡುತ್ತಾಳೆ. ಸೊಸೆಯೇ ಭಾರವಿದ್ದರೂ ಬಂಗಾರ (ಮಗ)ವೇ ಭಾರ ಬೆಳ್ಳಿ (ಸೊಸೆ) ತೂಕವಿಲ್ಲ ಎಂದು ಸಾರುವುದು ವಾಡಿಕೆ.

ಅನಂತರ, ಸೊಸೆಯ ಹೊಣೆಗಾರಿಕೆ, ಸ್ವಭಾವಗಳನ್ನು ಪರಿಶೀಲಿಸುವ ದೃಷ್ಟಿಯಿಂದ ಒಂದು ನೀರಿನ ಚಂಬಿಗೆಯಲ್ಲಿ ಒಂದಷ್ಟು ಉಂಗುರಗಳನ್ನು ಹಾಕಿ ಅತ್ತೆ ಮಾವರ ಉಂಗುರಗಳನ್ನು ಹುಡುಕಿಕೊಡಬೇಕೆಂದು ಹೆಣ್ಣನ್ನು ಪರೀಕ್ಷೆಗೆ ಒಡ್ಡುತ್ತಾರೆ. ಅವಳು ಸಾಧ್ಯವಾದಷ್ಟೂ ಕಡಿಮೆ ವೇಳೆಯಲ್ಲಿ ಆ ಉಂಗುರಗಳನ್ನು ಶೋಧಿಸಿಕೊಟ್ಟರೆ ಸೊಸೆಯೆನಿಸಿದವಳು ಭವಿಷ್ಯದಲ್ಲಿ ತನ್ನ ಅತ್ತೆ–ಮಾವಂದಿರ ಆಸ್ತಿಪಾಸ್ತಿಗಳನ್ನು ಬಹು ಎಚ್ಚರಿಕೆಯಿಂದ ರಕ್ಷಿಸಿಕೊಂಡು ಹೋಗುತ್ತಾಳೆಂದು ನಂಬಲಾಗುವುದು.

ವಧುವರರ ಸೆರಗು ಗಂಟು ಸಡಿಲಿಸಿ ಹೆಸರು ಹೇಳಿಸುವುದು ಕೊನೆಯ ಶಾಸ್ತ್ರ. ಸಂಕೋಚದಿಂದ ಹೆಸರು ಹೇಳಲು ನಿರಾಕರಿಸಿದವರು ಹಾಡಿಯ ಯಜಮಾನನಿಗೆ ದಂಡ ತೆರಬೇಕು.

ದೇವರು ಕಳುಹಿಸುವುದು : ಮದುವೆಯ ಹಿಂದಿನ ದಿನ ಅತ್ತಿಮರದಿಂದ[34] ತಂದ ದೇವರನ್ನು ಭಯ ಭಕ್ತಿಯಿಂದ ಕಳುಹಿಸಿ ಬರುವ ವಿಧಿ. ದೇವರು ಕಳುಹಿಸಿ ಬರಲು ಕಾರಣಾಂತರದಿಂದ ಹಾಡಿಯ ಯಡಿಗ್ಯನು ಬಂದಿರದಿದ್ದರೆ ಮದುಮಗನೇ ದೇವರನ್ನು ಶಾಸ್ತ್ರೋಕ್ತವಾಗಿ ಪೂಜಿಸಿ ಎಡೆ ಅರ್ಪಿಸಿ ಉತ್ಸವದಲ್ಲಿ ಕೊಂಡೊಯ್ದು ಮೂಲಸ್ಥಾನದಲ್ಲಿ ಬಿಟ್ಟುಬರಬೇಕು.

ಹೆಣ್ಣನ್ನು ಗುಡಿಸಲುದುಂಬಿಸಿಕೊಂಡದ್ದರ ಅಂಗವಾಗಿ ಹಾಡಿಯ ಸಮಸ್ತರಿಗೂ ಅಂದು ವಿಶೇಷವಾಗಿ ಸಿಹಿಭೋಜನ ನೀಡಲಾಗುವುದು. ಹೆಣ್ಣಿನ ಹಾಡಿಯಿಂದ ತಂದ ಬುತ್ತಿಯನ್ನು ಪಂಕ್ತಿಯಲ್ಲಿ ಕುಳಿತವರಿಗೆ ಪ್ರಸಾದವೆಂದು ಬಡಿಸುವುದು ಸಂಪ್ರದಾಯ.

ಇನ್ನೊಂದು ಸ್ವಾರಸ್ಯದ ಅಂಶ–ಮದುವೆಯ ದಿನಗಳಲ್ಲಿ ಗಂಡಸರಂತೆ ಹೆಂಗಸರೂ ಕಳ್ಳಭಟ್ಟಿ, ಸೇಂದಿ, ಕಳ್ಳುಗಳ ತೀರ್ಥಸೇವನೆ ಮಾಡಿ ಗದ್ದಲ ಆಚರಿಸುವುದು ಇವರಲ್ಲಿ ಹೆಚ್ಚು ಕಟ್ಟಳೆ.

ಮರುದಿನ ಮುಂಜಾನೆ ಹೊಸ ದಂಪತಿಗಳು ಅಡಿಗೆಯ ಒಲೆಗೆ ಮೊದಲು ಶರಣು ಮಾಡಿ ಅನಂತರ ತಂದೆ ತಾಯಿ ಬಳಗಸ್ಥರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾರೆ.

ಗಂಡು ಅಂದು ತನಗಿಂತ ಹಿರಿಯರೆನಿಸಿದವರಿಗೆ ಶಕ್ತ್ಯಾನುಸಾರ ಉಡುಗೊರೆ ನೀಡಬೇಕು. ಅಣ್ಣ ತಮ್ಮಂದಿರಿಗೆ ತಾನು ಗೃಹಸ್ಥಾಶ್ರಮವನ್ನು ಪ್ರವೇಶಿಸಿದುದರ ಪ್ರಯುಕ್ತ ಪೇಟ ಕೊಡಬೇಕು.

ಗಂಗಾಪೂಜೆ : ಮದುವೆಯಾದಂದಿನಿಂದ ತೊಡಗಿ ಮುಂದಿನ ಐದು ದಿನಗಳವರೆಗೆ ಹೆಣ್ಣು ಗಂಡನ ಗುಡಿಸಲಿನಿಂದ ಹೊರಗೆ ಕಾಲಿಡುವಂತಿಲ್ಲ. ಆರನೆಯ ದಿನ ಹಾಡಿಯ ಮುತ್ತೈದೆಯ ರೊಂದಿಗೆ ತಾಮ್ರದ ಚರಿಗೆ ಹಿಡಿದು ನೀರಿಗೆ ಹೋಗುತ್ತಾಳೆ. ನದಿಯಲ್ಲಿ ಅವಳು ಗಂಗಾಪೂಜೆ ನಿರ್ವಹಿಸುತ್ತಾಳೆ. ನದಿಯಿಂದ ನೀರಿನ ಚರಿಗೆ ಹೊತ್ತುತಂದು ಗುಡಿಸಲೊಳಗೆ ಕೆಳಗಿರಿಸುವುದಕ್ಕೆ ಮುನ್ನ ಆಕೆ ತನ್ನ ಗಂಡನ ಹೆಸರು ಹೇಳಬೇಕೆಂಬ ನಿಯಮವಿದೆ.

ಹೆಣ್ಣು 'ಋತುಮತಿ'ಯಾಗಿದ್ದರೆ[35] ಗಂಗಾಪೂಜೆಯನ್ನು ನೆರವೇರಿಸಿದ ರಾತ್ರಿಯೇ ಗಂಡನ ಮಗ್ಗುಲಲ್ಲಿ ಮಲಗಬಹುದು. ಇಬ್ಬರೂ ಹಾಸಿಗೆಯ ಮೇಲೆ ಕುಳಿತು ತಾಂಬೂಲ ಮೆದ್ದರೆ ಒಟ್ಟಾದರೆಂದು ತಿಳಿದುಕೊಳ್ಳಲಾಗುವುದು.[36]

ಹಾಗೆ ಗಂಡ ಹೆಂಡಿರನ್ನು ಒಟ್ಟುಮಾಡುವ ದಿವಸ ಕುಟುಂಬದ ಇತರರು ಅದೇ ಗುಡಿಸಲಲ್ಲಿ ಮಲಗುವುದು ಸಭ್ಯವಲ್ಲವೆಂದು ತಿಳಿದಿದ್ದಾರೆ. ಕೆಲವು ಪ್ರದೇಶಗಳಲ್ಲಿ ಗಂಡು ಹೆಣ್ಣುಗಳನ್ನು ಒಟ್ಟುಗೂಡಿಸುವುದಕ್ಕಾಗಿಯೇ ಅಂದಿನ ಮಟ್ಟಿಗೆ ಒಂದು ತಾತ್ಕಾಲಿಕ ಗುಡಿಸಲನ್ನು ಪ್ರತ್ಯೇಕವಾಗಿ ನಿರ್ಮಿಸುವುದುಂಟು.

ಮದುವೆಯಾಗಿ ಎರಡು ತಿಂಗಳಾದಮೇಲೆ ತವರಿನವರು ಹೆಣ್ಣನ್ನು ಕರೆದುಕೊಂಡು ಹೋಗಲು ಬರುತ್ತಾರೆ. ಅವಳ ಸಂಗಡ ಗಂಡೂ ಹೋಗುತ್ತಾನೆ. ಆದರೆ ಸಾಮಾನ್ಯವಾಗಿ ಗಂಡ ಹೆಂಡಿರು ಒಂದು ಸಂತಾನ ಹುಟ್ಟುವವರೆಗೂ ನಾಚಿಕೆ ಅಂಜಿಕೆಗಳಿಂದ ಕೂಡಿರುತ್ತಾರಾದ್ದರಿಂದ ದಂಪತಿಗಳಿಬ್ಬರೇ ಎಲ್ಲಿಗೂ ಒಟ್ಟಿಗೆ ಹೋಗುವುದಿಲ್ಲ. ಗಂಡನಾದವನು ಹೆಂಡತಿಯನ್ನು ಕರೆತರಲೂ ಹೋಗುವುದಿಲ್ಲ: ಕಳುಹಿಸಿ ಬರಲೂ ಆಸಕ್ತನಿರುವುದಿಲ್ಲ. ಅವನು ನಿರ್ವಹಿಸಬೇಕಾದ ಈ ಕೆಲಸವನ್ನು ಹೆಣ್ಣಿನ ಅತ್ತೆ ಮಾವಂದಿರು ಮಾಡುವ ಜವಾಬ್ದಾರಿ ಹೊತ್ತಿರುತಾರೆ.

ಸೀರುಡಿಕೆ : ಇವರಲ್ಲಿ 'ಸೀರುಡಿಕೆ' ಎಂದರೆ ವಿಧವಾ ವಿವಾಹವೆ. ವಿಧವೆ ಸಮಾಜದ ಒಪ್ಪಿಗೆ ಪಡೆದು ಮರುಮದುವೆಯಾಗಬಹುದಾದರೂ ಅವಿವಾಹಿತನನ್ನು ಮದುವೆಯಾಗುವಂತಿಲ್ಲ. ತನಗೆ ಇಷ್ಟವಾಗುವ ವಿವಾಹಿತ ಪುರುಷನೊಬ್ಬನನ್ನು ಕೂಡಿಕೊಳ್ಳಬಹುದು.

ವಿಧವೆ ತನ್ನ ಸತ್ತ ಗಂಡನ ಸಂತತಿಯವರನ್ನಾಗಲೀ ತನ್ನ ತಂದೆಯ ಅನ್ದ ಹೆಸರನ್ನು

ಹೊಂದಿರುವವರನ್ನಾಗಲೀ, ತಂದೆ ತಾಯಿಯ ಕಡೆಯ ರಕ್ತ ಸಂಬಂಧಿಗಳನ್ನಾಗಲೀ 'ಸೀರುಡಿಕೆ' ಮಾಡಿಕೊಳ್ಳುವಂತಿಲ್ಲ. ಸೀರುಡಿಕೆ ಮಾಡಿಕೊಳ್ಳ ಬಯಸುವ ವಿಧವೆ ಸತ್ತ ಗಂಡನ ಸಂಬಂಧಿಕರ ಅನುಮತಿ ಪಡೆಯಬೇಕು. ಅನುಮತಿ ಕೋರುವಾಗ ಬುಡಕಟ್ಟಿನ ಕಟ್ಟಳೆಗನುಗುಣವಾಗಿ ಕೆಲವು ಷರತ್ತುಗಳಿಗೆ ಒಪ್ಪಿ ಸತ್ತ ಗಂಡನ ರಕ್ತಸಂಬಂಧಿಗಳಿಗೆ ಪರಿಹಾರ ಶುಲ್ಕ ನೀಡಬೇಕು. ಆಷಾಢ, ಪುಷ್ಯ ಮತ್ತು ಭಾದ್ರಪದ ಮಾಸಗಳಲ್ಲಿ ಈ ಮದುವೆ ನಡೆಯದಂತೆ ನಿರ್ಬಂಧವಿದೆ.

ಸೀರುಡಿಕೆ ವಿವಾಹ ಪದ್ಧತಿಯಲ್ಲಿ, ಶಾಸ್ತ್ರೋಕ್ತ ವಿವಾಹ ಪದ್ಧತಿಯಲ್ಲಿ ಅನುಸರಿಸುವ ಔಪಚಾರಿಕವಾದ ಯಾವ ಶಾಸ್ತ್ರ ಸಂಪ್ರದಾಯಗಳಿಲ್ಲ; ಕಟ್ಟುಪಾಡುಗಳಿಲ್ಲ. ವೀಳ್ಯೆ ಶಾಸ್ತ್ರ ನಡೆಸುವುದರ ಅಗತ್ಯವಿಲ್ಲ; ಬಾಸಿಂಗ ಸೂಡಬೇಕಾಗಿಲ್ಲ. ಆದರೆ ವಿಧವೆಯನ್ನು ಕೂಡಿಕೊಳ್ಳುವ ಪುರುಷ ಆಕೆಗೆ ಹೊಸ ಉಡುಗೆ ತೊಡುಗೆಗಳನ್ನು ತಂದುಕೊಡಬೇಕು. ಅವಳೂ ತಾನು ಕೂಡ ಬಯಸುವ ಪುರುಷನಿಗೆ ಸೀರುಡಿಕೆ ಮಾಡಿಕೊಳ್ಳುವುದರ ಪ್ರೀತ್ಯರ್ಥವಾಗಿ ಹೊಸ ಉಡುಗೆ ತೊಡುಗೆಗಳನ್ನು ಒದಗಿಸಬೇಕು.

ಇಬ್ಬರಿಗೂ ಅನುಕೂಲವೆನಿಸಿದ ಒಂದು ದಿನ, ತಮ್ಮಂತೆಯೇ ವಿವಾಹವಾದ ಸಂಪ್ರದಾಯ ಬಾಂಧವರಿಗೆ ಆಮಂತ್ರಣ ಕಳುಹಿಸಿ ಸಮಾರಂಭಕ್ಕೆ ಬರಮಾಡಿಕೊಳ್ಳುತ್ತಾರೆ. ಇಬ್ಬರೂ ಹೊಸ ಉಡುಗೆ ತೊಡುಗೆಗಳಿಂದ ಅಲಂಕೃತರಾಗಿರುತ್ತಾರೆ. ಅಲ್ಲಿ ನೆರೆದ 'ಸೀರುಡಿಕೆ ಬಾಂಧವ'ರ ಸಮ್ಮುಖದಲ್ಲಿ ಗಂಡು ಹೆಣ್ಣಿನ ಕೊರಳಿಗೆ ತಾಳಿ ಕಟ್ಟುತ್ತಾನೆ.

ಆ ಕಾರ್ಯಕ್ರಮದ ಅಂಗವಾಗಿ ಸೀರುಡಿಕೆ ಮಾಡಿಕೊಂಡ ಪುರುಷ ಆಹ್ವಾನಿತರಿಗೆ ಮಾಂಸಭೋಜನ ಏರ್ಪಡಿಸಬೇಕು.

ಹಾಡಿಯ ಮುತ್ತೈದೆಯರು, ಮಕ್ಕಳು ಈ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ; ಮರೆತು ಕೂಡ ಕಣ್ಣಲ್ಲಿ ನೋಡುವುದಿಲ್ಲ—ಒಂದು ನಿರ್ಬಂಧ.

ಸೀರುಡಿಕೆ ಮಾಡಿಕೊಂಡ ಸ್ತ್ರೀ, ಐದು ರಾತ್ರಿ ಕಳೆದ ಮೇಲೆ, ನದಿಗೆ ಹೋಗಿ ಗಂಗಾ ಪೂಜೆ ನೆರವೇರಿಸಿ ಗಂಡನ ಹೆಸರನ್ನುಚ್ಚರಿಸಿ ಅಂದಿನಿಂದಲೇ ಅಡಿಗೆ ಮಾಡಲಾರಂಭಿಸುತ್ತಾಳೆ. ಆದರೆ ಆಕೆ ಸಿದ್ಧಗೊಳಿಸಿದ ಅಡಿಗೆ ಪದಾರ್ಥಗಳು ದೇವರಿಗೆ ಅಸ್ವೀಕೃತ. ಅವಳು ಕೂಡಿದ ಪುರುಷನಿಂದ ಪ್ರಥಮವಾಗಿ ಗಂಡು ಮಗನನ್ನು ಹೆತ್ತರೆ ಮುಂದೆ ಆಕೆ ಅಣಿಗೊಳಿಸುವ ಪದಾರ್ಥಗಳು ದೇವರಿಗೆ ನೈವೇದ್ಯವಾಗಿ ಅರ್ಪಿಸಲು ಯೋಗ್ಯವೆನಿಸುತ್ತವೆ.

ಒಂದು ವೈಶಿಷ್ಟ್ಯವೆಂದರೆ—ಸೀರುಡಿಕೆ ಮಾಡಿಕೊಂಡ ಪುರುಷ ವಿಧವೆಯನ್ನೂ, ಆಕೆಯ ಮೊದಲಗಂಡನಿಂದಾದ ಮಕ್ಕಳನ್ನೂ ತನ್ನ ನಿಜವಾದ ಹೆಂಡತಿ ಮಕ್ಕಳಂತೆಯೇ ಪ್ರೀತಿಯಿಂದ ನೋಡಿಕೊಳ್ಳುವುದು.

• ಬಹುಪತ್ನಿತ್ವ : ಇವರಲ್ಲಿ ಬಹುಪತ್ನಿತ್ವ ಸಾಮಾನ್ಯ. ಒಬ್ಬ ಪುರುಷ ಒಂದೇ ಕಾಲದಲ್ಲಿ ಮೂವರಿಗಿಂತಲೂ ಹೆಚ್ಚು ಸ್ತ್ರೀಯರನ್ನು ಮದುವೆ ಮಾಡಿಕೊಳ್ಳಬಹುದು. ಗೃಹಕೃತ್ಯಗಳನ್ನು ಒಬ್ಬೊಬ್ಬ ಸ್ತ್ರೀಯರಿಂದ ನಿರ್ವಹಿಸುವುದು ಕಷ್ಟಸಾಧ್ಯದ ವಿಷಯವಾದ್ದರಿಂದ ಏಕಕಾಲದಲ್ಲಿ ಮೂವರಿಗಿಂತಲೂ ಹೆಚ್ಚು ಸ್ತ್ರೀಯರನ್ನು ಹೊಂದಿರುವುದಾಗಿ ಹೇಳುತ್ತಾರೆ.

ವಿಚ್ಛೇದನ : ಗಂಡ ಹೆಂಡಿರಲ್ಲಿ ಶಾಶ್ವತ ಸ್ವರೂಪದ ಭಿನ್ನಾಭಿಪ್ರಾಯಗಳು ತಲೆದೋರಿದಲ್ಲಿ ಇಬ್ಬರೂ ಬೇರೆ ಬೇರೆಯಾಗಿ ಸ್ವತಂತ್ರ ಜೀವನ ನಡೆಸಬಹುದು. ವಿಚ್ಛೇದನ ಕೊಡುವ ಹಕ್ಕು ಕಟ್ಟೆಗೌಡನಿಗಿರುತ್ತದೆ. ವಿಚ್ಛೇದನ ಪಡೆದ ಸ್ತ್ರೀ ತನ್ನ ಸ್ವಂತ ಖರ್ಚು ವೆಚ್ಚದಲ್ಲಿ ಮರುಮದುವೆಯಾಗಬಹುದು. ಆದರೆ ವಿವಾಹ ಮಾಡಿಕೊಳ್ಳುವ ಮುನ್ನ ಮಾಜಿ ಗಂಡನಿಗೆ ಹಿಂದೆ ಮದುವೆ ಕಾರ್ಯಕ್ಕಾಗಿ ತಗುಲಿದ ಖರ್ಚು ವೆಚ್ಚಗಳನ್ನು ಭರಿಸಿಕೊಡಬೇಕು.

ವ್ಯಭಿಚಾರ ಕೃತ್ಯಗಳಿಗಾಗಿ ವಿಚ್ಛೇದನ ಪಡೆದ ಸ್ತ್ರೀಯರು ತಮ್ಮ ಪ್ರೇಮಿಗಳನ್ನು

ಕಟ್ಟೆಗೌಡ ಮತ್ತು ಹಾಡಿಯ ಯಜಮಾನರ ಗಮನಕ್ಕೆ ತಂದು ಅವರು ವಿಧಿಸಿದ ದಂಡ ಸಲ್ಲಿಸಿ ಹಾಡಿಯ ಸಮಸ್ತರಿಗೂ ಮಾಂಸಭೋಜನ ನೀಡಿ ಪಾಪ ಪರಿಹಾರ ವಿಧಿಗಳನ್ನನುಸರಿಸಿದ ಬಳಿಕ ಮರುವಿವಾಹಮಾಡಿಕೊಳ್ಳಬಹುದು.

ಮರಣ : ಸಾವನ್ನು ಇವರು 'ಕ್ರಿಯಾಸಮಾಧಿ' ಎಂದು ಗುರುತಿಸುತ್ತಾರೆ.

ಸತ್ತವರನ್ನು ಹೂಳುವ ಮತ್ತು ಸುಡುವ ಎರಡೂ ಕ್ರಿಯೆಗಳು ಇವರಲ್ಲಿ ಜಾರಿಯಲ್ಲಿವೆ

ಸತ್ತ ತಕ್ಷಣ ಮೃತನ ಮಕ್ಕಳು ಅನಂತರ ನಿಕಟವರ್ತಿಗಳು ಸಾವನ್ನಪ್ಪುತ್ತಿದ್ದ ವ್ಯಕ್ತಿಯ ಬಾಯಿಗೆ ನೀರು, ಹಾಲು, ಮೊಸರು ಬಿಡುತ್ತಾರೆ.[37] ಅಕ್ಕಿ ಕಾಳು ನೆನೆಸಿ ಅರಿಸಿನದ ಜೊತೆಯಲ್ಲಿ ಹಣೆಗೆ ಅಂಟಿಸಲಾಗುವುದು.

ಗುಡಿಸಲ ಮುಂದೆ ನೀರು ಕಾಯಿಸಿ ಹೆಣದ ತಲೆ ಮೇಲೆ ಎಣ್ಣೆ ಬೆಣ್ಣೆ ಹಾಕಿ ಬಿಸಿನೀರಿನ ಸ್ನಾನ ಮಾಡಿಸಲಾಗುವುದು. 'ತಲೆ ಕೊಡಲಿರುವ' ಮಗನೇ ಮೊದಲು ಹೆಣಕ್ಕೆ ನೀರು ಹಾಕಿ ಬೆಣ್ಣೆಲೇಪಿಸಿ ಸ್ನಾನ ಮಾಡಿಸುವ ಪದ್ಧತಿಯಿದೆ. ಸರದಿಯಂತೆ ಕಟ್ಟಕಡೆಯವರಾಗಿ ನೀರು ಹಾಕಿ ಸ್ನಾನ ಮಾಡಿಸುವವರು ನೀರು ಕಾಯಿಸಿದ ಗಡಿಗೆಯನ್ನು ಹೆಣದ ಎದುರಿನಲ್ಲಿ ನೆಲದ ಮೇಲೆ ದೊಪ್ಪನೆ ಹಾಕಿ ಬಾಯಿ ಬಡಿದುಕೊಳ್ಳುವುದು ವಿಧಿ. ಸ್ನಾನ ಮಾಡಿಸಿಯಾದ ಮೇಲೆ ಶವದ ಮೈಗೆ ಬಟ್ಟೆ ತೊಡಿಸಿ, ಗಂಡಸಾಗಿದ್ದರೆ ತಲೆಗೆ ಪೇಟಕಟ್ಟಿ ಆಭರಣಾದಿಗಳಿಂದ ಅಲಂಕರಿಸುತ್ತಾರೆ.[38]

ಚಾವಡಿಯಲ್ಲಿ ತಡಿಕೆಯಿದ್ದರೆ ತಡಿಕೆಗೆ, ಇಲ್ಲದಿದ್ದರೆ ಒಂದು ಗೂಟನೆಟ್ಟು ಆ ಗೂಟಕ್ಕೆ ಹೆಣವನ್ನು ಒರಗಿಸಿ ಕೈಕಾಲುಗಳನ್ನು ಮಡಿಸಿ ಕುಳ್ಳಿರಿಸಿ ಉರುಳಿ ಹೋಗದಂತೆ ಕಟ್ಟುತ್ತಾರೆ. ಆಮೇಲೆ ರಕ್ತಸಂಬಂಧಿಗಳಿಗೆ ಸಾವಿನ ಸುದ್ದಿ ಕಳುಹಿಸಲಾಗುವುದು. ಸ್ತ್ರೀಯರು ಹೆಣದ ಮುಂದೆ ಕುಳಿತು ಸತ್ತವನಿಗಾಗಿ ಶೋಕಿಸುತ್ತಾರೆ.

ಜಳಗಸ್ತರೆಲ್ಲಾ ಬಂದು ಸೇರಿದ ಮೇಲೆ ಹೆಣಕ್ಕೆ ಅರಿಸಿನ ಕುಂಕುಮ ಇಡಿಸಿ ಪೂಜೆ ಮಾಡಲಾಗುವುದು. ಬಿದಿರು ಗಳುವಿನ ಶಿದಿಗೆಯ ಮೇಲೆ ಹೊಸಬಟ್ಟೆ ಹೊದಿಕೆಯ ಮೆತ್ತನೆಯ ಹಾಸಿಗೆ ಹಾಸಿ ಹೆಣವನ್ನು ಮಲಗಿಸುತ್ತಾರೆ. (ಕಾಲುಗಳನ್ನು ಮಡಿಸಿ ಮಲಗಿಸಲಾಗುವುದು.) ಶವದ ತಲೆ ಹಾಡಿಯ ದಿಕ್ಕಿಗೂ ಕಾಲು ಕಾಡಿನ ಕಡೆಗೂ ಇರುತ್ತದೆ.

ಶಿದಿಗೆಯ ನಾಲ್ಕು ಮೂಲೆಯಲ್ಲಿ ನಾಲ್ಕು ಮಂದಿ ಹೆಗಲು ಕೊಟ್ಟು ಓಲಗದೊಂದಿಗೆ ಶವವನ್ನು ಕಾಡಿಗೆ ಹೊತ್ತುಕೊಂಡು ಹೋಗುತ್ತಾರೆ.[39] ದಾರಿಯಲ್ಲಿ ಮುಂದಿನವರು ಹಿಂದೆ ಹಿಂದಿನವರು ಮುಂದೆ ಹೆಗಲು ಬದಲಿಸಿಕೊಂಡು ಶಿದಿಗೆ ಹೊರುವುದು ಒಂದು ವಿಶೇಷ. ಮೃತ ವ್ಯಕ್ತಿಯ ಮಗ (ತಲೆ ಕೊಡುವವನು) ಕುಡಿಕೆಯಲ್ಲಿ ಕೊಳ್ಳಿ ಹಿಡಿದು 'ಶವೋತ್ಸವ'ದ ಮುಂದಾಳತ್ವ ವಹಿಸುತ್ತಾನೆ. ಇನ್ನೊಬ್ಬರು ಕುಂಬುನೀರನ್ನು ಒಯ್ಯುತ್ತಾರೆ. ಮೃತ ವ್ಯಕ್ತಿಗೆ ಮತ್ತೊಬ್ಬ ಮಗನಿದ್ದರೆ, ಅವನ ಉಡಿಯಲ್ಲಿ ಒಂಬತ್ತು ಬಗೆಯ ಕಾಳುಗಳನ್ನು ಹಾಕಿರುತ್ತಾರೆ. ಅವನು ಹಾಡಿಯಿಂದ ಆರಂಭಿಸಿ ತಂದೆಯ ಹೆಸರಿನಲ್ಲಿ ಮತ್ತೀಮರದ ತಳದಲ್ಲಿ ಕಲ್ಲುನೆಡುವ ಜಾಗದವರೆಗೂ ಆ ಕಾಳುಗಳನ್ನು ಬೀರಾಡುತ್ತಾ ದಾರಿಯಲ್ಲಿ ಸಾಗುತ್ತಾನೆ. ಕಲ್ಲು ನೆಡುವ ಜಾಗದಲ್ಲಿ ತನ್ನ ಉಡಿಯನ್ನು ಖಾಲಿ ಮಾಡುತ್ತಾನೆ.

ಮೃತವ್ಯಕ್ತಿಯ ರಕ್ತಸಂಬಂಧಿಗಳು ಮೃತರು ಬದುಕಿದ್ದಾಗ ಸಾಧಿಸಿದ ಸಿದ್ಧಿ ಮಹಿಮೆಗಳನ್ನು ಕುರಿತು ಪ್ರಶಂಸಿಸುತ್ತಾ ಶವೋತ್ಸವದಲ್ಲಿ ಪಾಲ್ಗೊಳುತ್ತಾರೆ.

ಕಾಲು ತೊಳೆಯುವ ಜಾಗದಲ್ಲಿ : ಶಿದಿಗೆಯನ್ನು 'ಕಾಲು ತೊಳೆಯುವ ಜಾಗ'ಕ್ಕೆ ಒಯ್ಯಲಾಗುವುದು. ಅಲ್ಲಿ ಕವಲೆಗಿಡ ಅಥವಾ ಮತ್ತಿಮರದ ಸನಿಹದಲ್ಲಿ ಅದನ್ನು ಇಳಿಸಿಟ್ಟು

ಆ ಗಿಡ ಅಥವಾ ಮರದ ಬುಡದಲ್ಲಿ ಸತ್ತವನ ಹೆಸರಿನಲ್ಲಿ ಒಂದು ಕಲ್ಲನ್ನು ನೆಡಲಾಗುವುದು.[40] ಕಲ್ಲಿನ ಮುಖ ಪಶ್ಚಿಮದಿಕ್ಕಿಗಿರುತ್ತದೆ.

ಕಲ್ಲು ಸ್ಥಾಪನೆಯಾದ ಮೇಲೆ ಹಾಡಿಯಿಂದ ತಂದ ಕುಂಬು ನೀರಿನಿಂದ ಹೆಣದ ಪಾದ ತೊಳೆದು ಕೂಳು, ಕಾಳು ಧಾನ್ಯಗಳನ್ನು ಎಡೆಸಲ್ಲಿಸಿ ಶಾಸ್ತ್ರೋಕ್ತವಾಗಿ ಶವ ಪೂಜೆ ನಡೆಸಲಾಗುವುದು. ಅದಾದ ನಂತರ ಹೆಣವನ್ನು ಹೂಳುವ ಜಾಗಕ್ಕೆ ಸಾಗಿಸಿ ತರಲಾಗುತ್ತದೆ. ಅಲ್ಲಿ ಸುಮಾರು ನಾಲ್ಕು ಅಡಿ ಆಳದ ಮೂರು ಅಡಿ ಅಗಲದ ಗುಂಡಿ ತೋಡಿ ಹೊತ್ತು ಹುಟ್ಟುವ ದಿಕ್ಕಿಗೆ ಹೆಣದ ತಲೆಮಾಡಿ ಮಲಗಿಸುತ್ತಾರೆ. ಗುಂಡಿಯಲ್ಲಿ ಮಲಗಿಸುವಾಗ ಉಡಿದಾರ, ಕೌಪೀನಾದಿಯಾಗಿ ಎಲ್ಲವನ್ನೂ ಕಿತ್ತೆಸೆದು ದೇಹದ ಮೇಲೆ ಬಿಳಿವಸ್ತ್ರವೊಂದನ್ನು ಮಾತ್ರ ಹೊದಿಸಲಾಗುವುದು. ಮೃತ ವ್ಯಕ್ತಿಯ (ತಲೆಕೊಡುವ) ಮಗನು ಮೊದಲು ಗುಂಡಿಗೆ ಒಂದು ಮುಷ್ಟಿ ಮಣ್ಣು ಹಾಕಿದ ಮೇಲೆ 'ಕಳ್ಳುಬಳ್ಳಿ' ಎಲ್ಲರೂ ಸಾಮೂಹಿಕವಾಗಿ ಒಂದೊಂದು ಮುಷ್ಟಿ ಮಣ್ಣೆರಚುತ್ತಾರೆ. ಅಷ್ಟಾದ ಮೇಲೆ ಗುಂಡಿಗೆ ಮಣ್ಣೆಳೆದು ಸಮಾಧಿ ರಚಿಸಿ ಅದರ ಮೇಲೆ ಮೂರು ಕಲ್ಲುಗಳನ್ನು ನೆಟ್ಟು ಮುಳ್ಳುಗಳನ್ನು ಹೊದಿಸುತ್ತಾರೆ. ಕಾಡುಮೃಗಗಳು ಹೆಣವನ್ನು ಕಿತ್ತು ತಿನ್ನುವುದನ್ನು ತಡೆಗಟ್ಟಲು ಆ ಕ್ರಮ. ಹೆಣ ಸಾಗಿಸಲು ಬಳಸಿದ ಬಿದಿಗೆಯನ್ನು ಅಲ್ಲೇ ಕತ್ತರಿಸಿ ಸಮಾಧಿಯ ಎರಡೂ ಮಗ್ಗುಲುಗಳಿಗೆ 'ಮಾಡು' ಕಟ್ಟಲಾಗುವುದು.

ಹೆಣ ಸುಡುವುದಾದರೆ ಸೇರಿದವರು ನಾಲ್ಕು ಮಂದಿ ಸೌದೆಕೊಡಿಸುತ್ತಾರೆ.[41] ಅರ್ಧ ತಾಸಿನೊಳಗೆ ಸೌದೆ ಮಾಡಿ, ಚಚ್ಚೌಕಾಕಾರದಲ್ಲಿ ಜೋಡಿಸಿ, ಹೆಣ ಮಲಗಿಸಬೇಕಾದ ತಾಣದಲ್ಲಿ ತುಸು ಹೊಂಡ ಮಾಡಿ, ಹೆಣದ ತಲೆ ಪೂರ್ವಕ್ಕೂ ಕಾಲು ಪಶ್ಚಿಮಕ್ಕೂ ಇರುವಂತೆ ಚಿತೆಯ ಮೇಲೆ ಮಲಗಿಸಿ, ಹೆಣದ ಎರಡೂ ಮಗ್ಗುಲುಗಳಿಗೆ ಸೌದೆ ಜೋಡಿಸಿ, ಹೆಣದ ಮೇಲ್ಭಾಗಕ್ಕೂ ತಳಭಾಗದಲ್ಲಿ ಜೋಡಿಸಿದಷ್ಟೇ ಪ್ರಮಾಣದ ಸೌದೆ ಜೋಡಿಸಲಾಗುವುದು. ರಕ್ತ ಸಂಬಂಧಿಗಳಲ್ಲಿ ಯಾರಾದರೊಬ್ಬರು ಚಿತೆಗೆ ಕಿಚ್ಚು ತಗುಲಿಸಿ ಅಲ್ಲಿಂದ ಹೊರಟು ಬರುವುದಷ್ಟೇ ಸುಡುವ ಕ್ರಿಯೆ.[42]

ಮೃತನ ಪತ್ನಿಯನ್ನು ಒಳ್ಳೆಯ ಉಡುಗೆ ತೊಡುಗೆಗಳಿಂದ ಸಿಂಗರಿಸಿ ಸುಡುವ ಜಾಗಕ್ಕೆ/ಸಮಾಧಿಯ ಬಳಿಗೆ ಕರೆತಂದಿರಲಾಗುತ್ತದೆ. ಅಲ್ಲಿ ಅವಳ ಓಲೆ, ಮೂಗುತಿ, ತಾಳಿಗಳನ್ನು ತೆಗೆದು ಕೈ ಬಳೆಗಳನ್ನು ಸಮಾಧಿಯ ಮೇಲೆ ನೆಟ್ಟ ಕಲ್ಲಿಗೆ ಘಟ್ಟಿಸಿ ಒಡೆಸಲಾಗುವುದು.

ಇಷ್ಟು ಕೆಲಸವಾದ ಮೇಲೆ, ಎಲ್ಲರೂ ಅತ್ತಿಮರದ ಬುಡದಲ್ಲಿ ಸ್ಥಾಪಿಸಿದ ಕಲ್ಲಿನ ಹತ್ತಿರಕ್ಕೆ ಬಂದುಬಿಡುತ್ತಾರೆ. ಸಮಾಧಿ ಜಾಗದಿಂದ ಅಲ್ಲಿಗೆ ಬರುವ ಹಾದಿಯಲ್ಲಿ ತಮ್ಮ ಕಣ್ಣಿಗೆ ಕಾಣಿಸಿದ ಕಾಡು ಹೂಗಳನ್ನು ಸಂಗ್ರಹಿಸಿ ತಂದು ಕಲ್ಲಿನ ಮೇಲೆ ಚೆಲ್ಲಿ ಹಾಡಿಯತ್ತ ಹೆಜ್ಜೆ ಹಾಕಬೇಕೆಂಬುದು ವಿಧಿ. ಹಾಡಿಯತ್ತ ಬರುವ ಮಾರ್ಗದಲ್ಲಿ ನೀರಿನ ತೊರೆಗಳಿದ್ದರೆ ಅಲ್ಲಿ ಕೈಕಾಲು ಮುಖ ತೊಳೆದುಕೊಂಡು ಹಾಡಿಗೆ ಬರಬೇಕು.

ಸಾಮಾನ್ಯವಾಗಿ ಸಂಸ್ಕಾರ ಕ್ರಿಯೆಯಲ್ಲಿ ಭಾಗವಹಿಸಿದವರೆಲ್ಲರೂ ತೊಟ್ಟಿದ್ದ ಬಟ್ಟೆಗಳನ್ನು ನೀರಿನಲ್ಲಿ ಅದ್ದಿ ಸ್ನಾನಮಾಡಿ ಬಂದು ಸಮಾಧಿಗೊಂಡ ವ್ಯಕ್ತಿಗೆ ಸಾವು ಬಂದ ಜಾಗದಲ್ಲಿ ಹೊತ್ತಿಸಿಟ್ಟ ದೀಪವನ್ನು ನೋಡಿಕೊಂಡು ಹೋಗುವುದು ಸಂಪ್ರದಾಯ.[43]

ಸುಡುಗಾಡು/ಸಮಾಧಿ ಮಾಡುವ ಸ್ಥಳಕ್ಕೆ ಹೋಗದೆ ಸಾವಿನ ಗುಡಿಸಲಲ್ಲೇ ಉಳಿದುಕೊಂಡ ಒಬ್ಬಿಬ್ಬರು ಹೆಂಗಸರು ಆ ಗುಡಿಸಲನ್ನು ಸಗಣಿಯಿಂದ ಸಾರಿಸಿ ಹೊಸ ನೀರು ತಂದು ಅನ್ನ ಬೇಳೆಸಾರಿನ ಅಡಿಗೆಯನ್ನು ಅಣಿಗೊಳಿಸಬೇಕು.[44]

ವ್ಯಕ್ತಿ ಸತ್ತದಿನದಿಂದ ತೊಡಗಿ ಮುಂದಿನ ಎರಡು ದಿನಗಳವರೆಗೆ ಹಗಲು ರಾತ್ರಿಯೆನ್ನದೆ ಕನಿಷ್ಟ ಎರಡು ದಿನಗಳಾದರೂ ನಂದಾದೀವಿಗೆಯನ್ನು ಉರಿಸಬೇಕೆಂಬ ಕಟ್ಟಳೆಯಿದೆ.

ಗಂಜಿ ಬಿಡುವುದು : ಸತ್ತು ಮೂರು ದಿನಗಳಾದ ಮೇಲೆ ಕಲ್ಲಿಗೆ ಹಾಲುಬಿಡುವ ವಿಧಿ ಇರುತ್ತದೆ. ಹಾಲಿನ ಜೊತೆಗೆ ಮೂರು ತೂತು (ಅಕ್ಕಿಯ)ರೊಟ್ಟಿಗಳನ್ನೂ ಎಡೆ ಸಲ್ಲಿಸಲಾಗುವುದು. ಮೂರು ಸಗಣಿ ಉಂಡೆ ರಚಿಸಿ ಅವುಗಳ ಮೇಲೆ ಬಿಮ್ಮಾರಲು ಹಣ್ಣಿನ ಗಿಡದ ಎಲೆಗಳಿಂದ ರಚಿಸಿದ ಮೂರು 'ಬೀಡಿ'ಗಳನ್ನು ನೆಟ್ಟು ಅವಕ್ಕೆ ತೂತು ಮಾಡಿ ಬೇಯಿಸಿ ತಂದ ರೊಟ್ಟಿಗಳನ್ನು ಸಿಕ್ಕಿಸಿ, ಆ ರೊಟ್ಟಿಗಳ ಮೇಲೆ ಹಾಲು ಬಿಡುವರು. ಈ ಕ್ರಿಯೆ ಮೃತನ ಮಗ, ಪತ್ನಿಯಿಂದ ಆರಂಭಗೊಂಡು ರಕ್ತಸಂಬಂಧಿಗಳಿಂದ ಅಂತ್ಯಗೊಳ್ಳುತ್ತದೆ.

ಆ ದಿನ, ಸಾವಿನ ದಿನ ಬುತ್ತಿ ಬೇಯಿಸಿದ ಗಡಿಗೆಯಲ್ಲೇ ಹಾಲು ಒಯ್ದು ಸ್ವಲ್ಪ ಹಾಲನ್ನು ಕಲ್ಲ ಮೇಲೆರೆದು ಮಿಕ್ಕ ಹಾಲನ್ನು ಸಮಾಧಿ ಮೇಲೆ ಚೆಲ್ಲಿ ಗಡಿಗೆಯನ್ನು ಅಲ್ಲೇ ಜಪ್ಪಿ ಒಡೆಯಲಾಗುವುದು. ಅಂದೂ ಕಾಡು ಹೂಗಳನ್ನು ಆಯ್ದು ತಂದು ಕಲ್ಲಿನ ಮೇಲೆ ಚೆಲ್ಲಿ ಹಾಡಿಗೆ ಹಿಂತಿರುಗುತ್ತಾರೆ.

ಅಂದಿನ ಸಮಾರಂಭಕ್ಕೆ ಆಗಮಿಸಿದ ರಕ್ತಸಂಬಂಧಿಗಳಿಗೆ ಮಜ್ಜಿಗೆಯನ್ನ–ಮೊಸರಿನ ಊಟವಿರುತ್ತದೆ.

ಸೂತಕ : ಸತ್ತ ದಿನದಿಂದ ತೊಡಗಿ ಮುಂದಿನ ಹನ್ನೆರಡು ದಿನಗಳವರೆಗೆ ಸೂತಕವೆಂದು ಪರಿಗಣಿಸಿ ಕೆಲವು ನಿಷೇಧಗಳನ್ನು ಪಾಲಿಸಲಾಗುತ್ತದೆ. ಈ ಅವಧಿಯಲ್ಲಿ ಸಾವಿನ ಕುಟುಂಬದವರು ಹಾಡಿಯಿಂದ ಹೊರಗೆ ಸುಳಿದಾಡಬಾರದು ; ನಿತ್ಯಬಳಕೆಯ ವಸ್ತುಗಳನ್ನಲ್ಲದೆ ಬೇರೆ ಏನನ್ನೂ ಮುಟ್ಟುವಂತಿಲ್ಲ. ಸೂತಕದ ಅವಧಿ ಕೊನೆಗೊಳ್ಳುವವರೆಗೂ ಸಿಹಿ ಪದಾರ್ಥಗಳು ಮಾಂಸ ಮತ್ಸ್ಯಗಳು ವರ್ಜ್ಯ. ಸ್ನಾನ ಮಾಡಬಾರದು. ಮಕ್ಕಳು ಮರಿಗಳಿಗೆ ತಲೆಗೆ ಎಣ್ಣೆ ಬಿಡಕೂಡದು.

ಪಾನಿಪಾದಾಜ : ಹನ್ನೆರಡನೆಯ ದಿನ ಜರುಗುವ ಉತ್ತರಕ್ರಿಯೆ ಇದು ; ಸೂತಕವನ್ನು ಕೊನೆಗೊಳಿಸಲು ಆಚರಿಸುವ ವಿಧಿ. ಜೀವಕ್ಕೆ ಜೀವ ಕೊಡುವ ಸಂದರ್ಭ. ಮೃತ ವ್ಯಕ್ತಿಯ ಆತ್ಮಕ್ಕೆ ಶಾಂತಿ, ತೃಪ್ತಿಯನ್ನು ದೊರಕಿಸಿಕೊಡಲು ಆತನ/ಆಕೆಯ ಹೆಸರಿನಲ್ಲಿ ಕುರಿಯೊಂದನ್ನು ಬಲಿಕೊಡಲಾಗುವುದು. ಪಾನಿಪಾದಾಜ ಮುಖ್ಯವಾಗಿ ಸೂತಕ ಪರಿಹರಿಸಿಕೊಳ್ಳುವ ಕಾರ್ಯಕ್ರಮವಾದ್ದರಿಂದ ಅದರ ಅಂಗವಾಗಿ ಗುಡಿಸಲ ಆವರಣವನ್ನು ಸ್ವಚ್ಛಗೊಳಿಸಿ ಸಗಣಿಯಿಂದ ಸಾರಿಸಿ ಯಡಿಗ್ಯ ಅಥವಾ ಲಾಂಬೂರ್‌ರಿಂದ ತೀರ್ಥ[45] ಹಾಕಿಸಲಾಗುವುದು.

ಎಡೆಪದಾರ್ಥಗಳನ್ನು ಅಣಿಗೊಳಿಸುವುದು : ಅಕ್ಕಿಯನ್ನು ಒಂದು ಸೇರಿ[46]ನಲ್ಲಿ ಭರ್ತಿಯಾಗಿ ಅಳೆದು ಸೇರಿನ ತಲೆ ಹೊಡೆದು ಸ್ವಲ್ಪ ಅಕ್ಕಿಯನ್ನು ಕೆಳಗೆ ಬೀಳಿಸಿ ಹಾಗೆ ಬೀಳಿಸಿದ ಅಕ್ಕಿಯನ್ನು ಬೀಸಿ ಅದರಿಂದ ಹನ್ನೆರಡು ರೊಟ್ಟಿಗಳನ್ನು ತಯಾರಿಸಿಕೊಳ್ಳಲಾಗುತ್ತದೆ. ಅಲ್ಲದೆ ಗಂಜಿಬಿಡುವ ದಿನ ಬಳಸಿ ಮಿಕ್ಕಿಸಿಟ್ಟ ಅಕ್ಕಿಯಿಂದ ಎಡೆಗಾಗಿ ಅನ್ನ ಬೇಯಿಸಿಕೊಳ್ಳಲಾಗುವುದು.

ಅನ್ನ ರೊಟ್ಟಿಗಳು ಅಣಿಗೊಂಡಮೇಲೆ ಕುಡಿಬಾಳೆ ಎಲೆಯನ್ನು ಕುಡಿಬಿಟ್ಟು ಅರ್ಧ ಎಲೆ ಹರಿದು ಹನ್ನೆರಡು ಕೊಟ್ಟೆಗಳನ್ನು ನಿರ್ಮಿಸಿ ಆ ಎಲ್ಲ ಕೊಟ್ಟೆಗಳಿಗೂ ಲಿಂಬೆ, ಬಾಳೆಕಾಯಿಗಳನ್ನು ಕೊಯ್ದು ಹಾಕಲಾಗುತ್ತದೆ. ಮೊದಲೇ ಬೇಯಿಸಿಟ್ಟಿದ್ದ ಅನ್ನವನ್ನು ಎಲ್ಲ ಕೊಟ್ಟೆಗಳಿಗೂ ತುಂಬಿಸಿ ಒಳ್ಳೆಣ್ಣೆ ಬತ್ತಿಯನ್ನು ಆ ಅನ್ನದ ರಾಶಿಯ ಮೇಲೆ ನೆಡಲಾಗುವುದು.

ಅನಂತರ ಗುಡಿಸಲ ಮುಂಭಾಗದ ಒಂದು ಪಕ್ಕದಲ್ಲಿ ಸ್ವಲ್ಪ ಜಾಗವನ್ನು ಸಗಣಿಯಿಂದ ಸಾರಿಸಿ ಆ ಜಾಗದಲ್ಲಿ ಅಕ್ಕಿ ಹಿಟ್ಟನ್ನು ಹರಡಿ ಅದರ ಮೇಲೆ ಬಾಳೆ ಎಲೆಯೊಂದನ್ನು ಹಾಸಿ ಅನ್ನ ಮುಂತಾದ ಭಕ್ಷ್ಯಗಳ ಎಡೆ ಸಲ್ಲಿಸಿ ದೀಪವೊಂದನ್ನು ಹೊತ್ತಿಸಿಟ್ಟು ಬಳಿದ ಬುಟ್ಟಿಯೊಂದನ್ನು ಆ ಎಡೆಯ ಮೇಲೆ ಬೋರಲು ಹಾಕುತ್ತಾರೆ. ಆ ಬೋರಲು ಹಾಕಿದ ಬುಟ್ಟಿಯ

ಒಂದು ಮಗ್ಗುಲಲ್ಲಿ ಸತ್ತವ್ಯಕ್ತಿಯ ವಸ್ತ್ರಾಭರಣಗಳನ್ನಿಟ್ಟು ಆತನ ರಕ್ತ ಸಂಬಂಧಿಗಳೆಲ್ಲಾ ಅಲ್ಲಿ ಕುಳಿತು ಅವನನ್ನು ಸ್ಮರಿಸಿಕೊಂಡು ಅಳುವುದು ಅಂದಿನ ಕ್ರಿಯೆಯ ಒಂದು ಮುಖ್ಯ ಉಪಾಸನೆ.

ಅದೇ ಸಂದರ್ಭದಲ್ಲಿ ಅದೇ ಎಡೆಯ ಎದುರಿನಲ್ಲಿ ಮೃತ ವ್ಯಕ್ತಿಯ ಮಗನ ತಲೆಗೂದಲು ಬೋಳಿಸಲಾಗುವುದು.[47] ತಲೆಗೂದಲನ್ನು 'ಸಮಾಧಿವಸ್ತ್ರ'[48]ದ ಮೇಲೆ ತೆಗೆಸುವುದು ಪದ್ಧತಿ. ಕೂದಲು ತೆಗೆದಾದ ಮೇಲೆ ಅವನಿಗೆ ಕಂಬಳಿಕೊಪ್ಪೆಯ ಮುಸುಕು ಹಾಕಿ ಕೈಗೆ ಕೂದಲಿರುವ ಸಮಾಧಿ ವಸ್ತ್ರ ಕೊಟ್ಟು ಅದನ್ನು ನದಿಯಲ್ಲಿ ತೇಲಿಬಿಟ್ಟು ಬರಲು ಹೇಳುತ್ತಾರೆ. ಅವನ 'ಧೈರ್ಯಕ್ಕಾಗಿ' ಆತನ ಸಂಗಡ ಇನ್ನು ನಾಲ್ವರು ಹೋಗುತ್ತಾರೆ. ನದಿಯಲ್ಲಿ ಕೂದಲನ್ನು ತೇಲಿಬಿಟ್ಟು ಆ ವಸ್ತ್ರವನ್ನು ಅಲ್ಲೇ ತೊಳೆದುಕೊಂಡು ಚೆರಿಗೆಯೊಂದರಲ್ಲಿ ನೀರು ಹೊತ್ತು ಹಾಡಿಗೆ ಬರಬೇಕು.

ನೀರು ಕುಡಿದು ಸ್ವರ್ಗಕ್ಕೆ ಹೋಗು: ಇನ್ನು ತರ್ಪಣ ಸಲ್ಲಿಸುವ ವಿಧಿ. ಹಾಡಿಯ ಯಜಮಾನ, ಎಡೆ ಮಾಡಿದ ಜಾಗದಲ್ಲಿ ಎಡೆಯ ಒಂದು ಪಕ್ಕದಲ್ಲಿ ಚೊಂಬೊಂದರಲ್ಲಿ ನೀರಿರಿಸಿಕೊಂಡು ಕುಳಿತು ವೀಳ್ಯದೆಲೆಯೊಂದರಿಂದ ಒಂದುನೂರುಸಲ ಒಂದುನೂರು ಹನಿ ನೀರು ಬಿಟ್ಟು, ಸತ್ತವನನ್ನು 'ನೀರು ಕುಡಿದು ಸ್ವರ್ಗಕ್ಕೆ ಹೋಗು' ಎಂದು ಕೋರಿಕೊಳ್ಳುತ್ತಾನೆ. ಸತ್ತ ವ್ಯಕ್ತಿಯ ರಕ್ತ ಸಂಬಂಧಿಗಳೂ ಯಜಮಾನನಿಗೆ ಕೈಬೆರಳು ನೀಡಿ ನೀರು ಬಿಡಿಸಿಕೊಂಡು ಸತ್ತವನ ಆತ್ಮಕ್ಕೆ ಶುಭ ಶಾಂತಿ ಕೋರುತ್ತಾರೆ. ತಲೆಗೂದಲು ಕೊಟ್ಟ ಮಗನು ಆ ವಿಧಿಯನ್ನು ಮೊದಲು ನಿರ್ವಹಿಸಬೇಕು: ಮೂಡಣ ದಿಕ್ಕಿಗೆ ಮುಖಮಾಡಿ ಪಾರ್ಶ್ವವಾಗಿ ನಿಂತು, ಯಜಮಾನನತ್ತ ಬೆನ್ನುಮಾಡಿಕೊಂಡು, ತನ್ನ ಎಡಗಾಲಿನ ಹೆಬ್ಬೆರಳನ್ನು ನೀಡಿ ನೀರು ಬಿಡಿಸಿಕೊಂಡು 'ತಂದೆಯೇ ನೀರು ಕುಡಿದು ಸ್ವರ್ಗಕ್ಕೆ ಹೋಗು' ಎಂದು ತಂದೆಯನ್ನು ಬಿನ್ನವಿಸಿಕೊಳ್ಳುತ್ತಾನೆ. ಮತ್ತೊಂದು ಸಲ ಅದೇ ಭಂಗಿಯಲ್ಲಿ ನಿಂತು ಅದೇ ನುಡಿಗಳನ್ನು ಪಠಿಸುತ್ತಾ ತನ್ನ ಹಸ್ತದ ಹೆಬ್ಬೆರಳೆರಡನ್ನೂ ಚಾಚಿ ನೀರು ಬಿಡಿಸಿಕೊಳ್ಳುತ್ತಾ[49] ತಂದೆಗೆ 'ಸ್ವರ್ಗಕ್ಕೆ ಹೋಗಲು ಅಪ್ಪಣೆಯಾಗಿದೆ ಸ್ವರ್ಗಕ್ಕೆ ಹೋಗು' ಎಂದು ಗಟ್ಟಿಯಾಗಿ ಉಚ್ಚರಿಸಿ ಸ್ವರ್ಗಕ್ಕೆ ಹೋಗುವಂತೆ ಕೇಳಿಕೊಳ್ಳುತ್ತಾನೆ.

ಅವನದಾದ ಮೇಲೆ ಮೃತನ ಪತ್ನಿಯ ಸರದಿ. ಅವಳ ನಂತರ ರಕ್ತಸಂಬಂಧಿಗಳು. ಎಲ್ಲರೂ ಎಲೆ ಮುಟ್ಟಿ ಕೈಬೆರಳು ಚಾಚಿ ನೀರು ಬಿಡಿಸಿಕೊಂಡು ಮೃತನಿಗೆ 'ಸ್ವರ್ಗಕ್ಕೆ ಹೋಗಪ್ಪಾ' ಎಂದು ವಿಜ್ಞಾಪಿಸಿಕೊಳ್ಳುತ್ತಾರೆ.

ಎಲ್ಲರೂ ನೀರು ಬಿಟ್ಟಾದ ಮೇಲೆ ಎಡೆಯ ತಳದಲ್ಲಿ ರೊಟ್ಟಿಹಿಟ್ಟನ್ನಿಟ್ಟು ಆ ಹಿಟ್ಟಿನ ಮೇಲೆ ಬಾಳೆಎಲೆಯೊಂದನ್ನು ಹಾಸಲಾಗುವುದು. ಶಿಷ್ಟಾಚಾರಕ್ಕಾಗಿ ಆ ಎಲೆಯನ್ನು ಎಲ್ಲರೂ ಮುಟ್ಟಬೇಕು. ನಾಲ್ವರು ಪುರುಷರು ಆ ಎಡೆಯನ್ನು ಸತ್ತವ್ಯಕ್ತಿಯ ಮಗನ ಕಂಬಳಿಗೆ ಎತ್ತಿ ಕೊಡುವಾಗ ಎಲೆಯ ಕೆಳಗಿದ್ದ ಹಿಟ್ಟಿಗೆ ಯಜಮಾನ ನೀರು ಹೊಯ್ಯುತ್ತಾನೆ. ಮೃತವ್ಯಕ್ತಿಯ ಮಗ ಆ ಎಡೆಯೊಂದಿಗೆ ಕಟ್ಲೆ ಸಾಮಾನುಗಳನ್ನೂ ಒಯ್ದು ನದಿಯಲ್ಲಿ ತೇಲಿಬಿಟ್ಟು ನೀರಿನಲ್ಲಿ ಮುಳುಗೆದ್ದು 'ಹಸಿಮೈ'ಯಲ್ಲಿ ಗುಡಿಸಲಿಗೆ ಬರುತ್ತಾನೆ.

ಅಂದಿನ ಕಟ್ಲೆಯ ಅಂಗವಾಗಿ ಕುರಿಮಾಂಸದ ಊಟದ ಏರ್ಪಟ್ಟಿರುತ್ತದೆ. ಎಲ್ಲರೂ ಸಾರಾಯಿ ಕುಡಿದು ಸಹಭೋಜನ ನಡೆಸುತ್ತಾರೆ. ರಾತ್ರಿ ವೇಳೆಯಲ್ಲಿ ಬಯಲಿನಲ್ಲಿ ಬೆಂಕಿ ಹಾಕಿ ಅಲ್ಲಿ ಕುಳಿತು ಕಥೆ, ಹರಟೆ, ಭಜನೆಯಲ್ಲಿ ಬೆಳಗು ಮಾಡುವುದು ಆ ದಿನದ ವಿಶೇಷ.

ಕಣ್ಣುನೀರು ಒರಸುವುದು: ಉತ್ತರಕ್ರಿಯಾಚರಣೆಗಾಗಿ ಬಂದಿದ್ದ ರಕ್ತಸಂಬಂಧಿಗಳು ಮರುದಿನ ನಸುಕಿನಲ್ಲೆದ್ದು ಕೈಕಾಲು ಮುಖ ತೊಳೆದು ಚಾವಡಿಯಲ್ಲಿ ಕುಳಿತುಕೊಳ್ಳುತ್ತಾರೆ. ಅವರಲ್ಲಿ ನಾಲ್ವರು ತಲೆಗೂದಲು ಬೋಳಿಸಿಕೊಂಡ ಮಗನಿಗೆ (ಸಂತಾಪ ಸೂಚಕವಾಗಿ) ಒಂದು

ಮುಂಡಾಸು ಕಟ್ಟುತ್ತಾರೆ. ಅಲ್ಲಿಗೆ ಅವನಿಗೆ ಅಂಟಿದ ಸೂತಕ ಸಂಪೂರ್ಣ ಪರಿಹಾರವಾಯಿತೆಂದು ಭಾವಿಸಲಾಗುವುದು. ಅವನಿಗೆ ಅಣ್ಣ ತಮ್ಮಂದಿರು ಇದ್ದರೆ ಅವರಿಗೂ ಒಂದೊಂದು ಪೇಟ ಕಟ್ಟಲಾಗುತ್ತದೆ. ಹೀಗೆ ಮುಂಡಾಸು ಅಥವಾ ಪೇಟ ಕಟ್ಟುವುದನ್ನು ಸತ್ತ ವ್ಯಕ್ತಿಯ ಕುಟುಂಬದವರ ಕಣ್ಣು ನೀರು ಒರಸುವ ಕ್ರಿಯೆ ಎಂದು ಗುರುತಿಸಲಾಗುವುದು. ರಕ್ತಸಂಬಂಧಿಗಳು ಕಣ್ಣು ನೀರು ಒರಸಿ ಹೋದ ಮೇಲೆ ಸಾವಿನ ಕುಟುಂಬದವರು ಧರಿಸಿದ್ದ ಬಟ್ಟೆಗಳನ್ನು ಶುಚಿಗೊಳಿಸಿಕೊಂಡು ಮಿಂದುಮಡಿ ಬಟ್ಟೆಯುಡುತ್ತಾರೆ. ಇಲ್ಲಿಗೆ ಉತ್ತರಕ್ರಿಯೆಗಳು ಮುಗಿದಂತೆ.

ಹೂಳುವುದು, ಸುಡುವುದು : ರಜಸ್ವಲೆಯಾಗಿದ್ದ ಸ್ತ್ರೀ ಅಕಾಲ ಮರಣಕ್ಕೆ ತುತ್ತಾದರೆ, ಗರ್ಭಿಣಿಯಾಗಿದ್ದ ಸ್ತ್ರೀ ತೀರಿಕೊಂಡರೆ, ಹೆರಿಗೆಯಾದ ಮೇಲೆ ಕನಿಷ್ಠ ಮೂರುತಿಂಗಳು ಭರ್ತಿಯಾಗುವುದರೊಳಗೆ ಮೃತರಾದರೆ ಅಂಥವರನ್ನು ಮಣ್ಣು ಮಾಡುವುದು ಪದ್ಧತಿ.

ಮೃತಳ ಗಂಡ ಇಲ್ಲವೆ ಮಗನು ಬದುಕಿದ್ದರೆ, ಅವಳಿಗಾಗಿ ತಲೆ ಬೋಳಿಸಿಕೊಳ್ಳುವ ಸಂಪ್ರದಾಯವಿದೆ. ಆದರೆ ಮೃತರ ಆತ್ಮ ಸಂಕೇತವಾಗಿ ಅತ್ತಿಮರದ ಬುಡದಲ್ಲಿ ಕಲ್ಲು ನೆಡುವುದು—ಆ ಸಂಬಂಧವಾದ ಯಾವ ಕ್ರಿಯೆಗಳನ್ನೂ ಆಚರಿಸುವುದಿಲ್ಲ. ಸತ್ತು ಮೂರು ದಿನಗಳಾದ ಮೇಲೆ ಸಮಾಧಿಗೆ ಗಂಜಿ ಹಾಲು ಬಿಡುವ ಪದ್ಧತಿ ಇದೆ. ಆದರೆ ಹನ್ನೆರಡನೆಯ ದಿನ ನಡೆಸುವ ಕ್ರಿಯಾಚರಣೆಗಳೂ ಅಂದಿನ ಸಂಸ್ಕಾರಕ್ರಿಯೆಯಲ್ಲಿ ಸಮಾವೇಶಗೊಂಡಿರುತ್ತವೆ.

ತೊನ್ನು, ಕ್ಷಯ ಮುಂತಾದ ಅನಿಷ್ಟರೋಗಗಳಿಗೆ ತುತ್ತಾದವರನ್ನು ಹೂಳುವುದಿಲ್ಲ; ಸುಡುತ್ತಾರೆ. ಹಾಗೆ ಸುಟ್ಟ ದೇಹದ ಬೂದಿಯನ್ನು ಸಂಪೂರ್ಣವಾಗಿ ತೊಳೆದು ನದಿಯಲ್ಲಿ ತೇಲಿಬಿಡುವ ಸಂಪ್ರದಾಯವಿದೆ. ಸುಡುಗಾಡಿನಲ್ಲಿ ಮೃತದೇಹದ ಅವಶೇಷಗಳೇನೂ ಉಳಿಯದಂತೆ ಕೈಗೊಳ್ಳುವ ಕ್ರಮ ಅದು.

ಅವಿವಾಹಿತರು ಸತ್ತರೆ ಕಲ್ಲು ಸ್ಥಾಪಿಸುವುದಿಲ್ಲ. ಉತ್ತರಕ್ರಿಯೆಗಳನ್ನಂತೂ ಆಚರಿಸುವುದೇ ಇಲ್ಲ. ಎಳೆ ಮಗುವಿನಿಂದ ತೊಡಗಿ ಮೀಸೆ ಹೊತ್ತ ಯುವಕನವರೆಗೂ ಆ ಕ್ರಮ ಅನ್ವಯಿಸುತ್ತದೆ.

ಮಾಳಪಕ್ಷ : ವರ್ಷಕ್ಕೊಮ್ಮೆ (ಅವರವರ ಆರ್ಥಿಕ ಸ್ಥಿತಿಗತಿಗಳಿಗನುಸಾರವಾಗಿ) ಆಚರಿಸಲ್ಪಡುವ ಶ್ರಾದ್ಧ ಸಮಾರಂಭವಿದು. ತಿಥಿ ಮಾಡುವಾಗ ಅನುಸರಿಸುವ ಎಲ್ಲ ವಿಧಿ ವಿಧಾನಗಳನ್ನು ಇಲ್ಲೂ ಅನುಸರಿಸಲಾಗುವುದು. ಅಲ್ಲಿನಂತೆ ಇಲ್ಲೂ ಗುಡಿಸಲ ಎದುರಿನಲ್ಲಿ ಒಂದು ಪಕ್ಕದಲ್ಲಿ ಆ ಸಂಬಂಧವಾದ ಪೂಜೆ ನೆರವೇರುತ್ತದೆ.

ಗುಡಿಸಲ ಮಾಡಿನ ಮೇಲೆ ಎಡೆಯಿಟ್ಟು ಕಾಗೆಗಳನ್ನು ಅವುಗಳ ಭಾಷೆಯಲ್ಲಿಯೇ ಕೂಗಿ ಕರೆಯುವುದು ಸಂಪ್ರದಾಯ. ಕಾಗೆಗಳು ವಿಳಂಬ ಮಾಡದೆ ಸಲೀಸಾಗಿ ಬಂದು ಆ ಎಡೆಯನ್ನು ಎಂಜಲು ಮಾಡಿದರೆ ಸತ್ತವ್ಯಕ್ತಿ ಹಬ್ಬಕ್ಕೆ ಬಂದಿದ್ದಾನೆ; ಅವನಿಗೆ/ಅವಳಿಗೆ ಮನಃಶಾಂತಿ ದೊರಕಿದೆ ಎಂದು ಭಾವಿಸಿಕೊಳ್ಳಲಾಗುವುದು. ವ್ಯತಿರಿಕ್ತವಾದರೆ ಹಬ್ಬ ಆಚರಿಸಿದ್ದು ವ್ಯರ್ಥ—ಶುದ್ಧವಾಗಿ ಆಚರಿಸಲಿಲ್ಲವೆಂದು ನೊಂದುಕೊಳ್ಳುವುದು ಸ್ವಾಭಾವಿಕ.

ಸತ್ತ ದಿನವಂದು ಮೃತನ ಆತ್ಮಸಂಕೇತವಾಗಿ ಸ್ಥಾಪಿಸಿದ್ದ ಕಲ್ಲಿಗೆ ಅಂದು ಪೂಜೆ ಮಾಡಲಾಗುವುದು. ಆ ಕಲ್ಲಿಗೆ ಅಂದು ಮಾತ್ರ ಭಂಡಾರ ಹಚ್ಚುವುದು ವಿಶೇಷ.

ರಿವಾಜು : ಗಂಡ ತೀರಿಕೊಂಡರೆ ಹೆಣ್ಣು ಕುಂಕುಮ ಧರಿಸುವುದಿಲ್ಲ. ಕಾಲು ಸುತ್ತು ಉಂಗುರ, ಕಿವಿಬುಗುಡಿ, ತಾಳಿ, ಹೂ—ಇಷ್ಟು ನಿಷೇಧ. ಆದರೆ ಕಿವಿಗೆ ಓಲೆ ಹಾಕಬಹುದು; ಮೂಗುತಿ ಬಳೆ ಧರಿಸಬಹುದು; ಮಣಿಸರವನ್ನು ತೊಟ್ಟುಕೊಳ್ಳಬಹುದು.

ಧಾರ್ಮಿಕ ಜೀವನ : ಈ ಬುಡಕಟ್ಟು ಜನಾಂಗ ಶಿವ ಮತ್ತಿತರ ಹಿಂದೂದೈವಗಳಿಗೆ

ನಡೆದುಕೊಳ್ಳುತ್ತದೆ. ಶಿವ–ವಿಷ್ಣು ಇಬ್ಬರನ್ನೂ ಸಮಾನ ರೀತಿಯಲ್ಲಿ ಆರಾಧಿಸುವುದರಿಂದ ಇವರನ್ನು ಶೈವಾರಾಧಕರು ಅಥವಾ ವೈಷ್ಣವಾರಾಧಕರು ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಕಚ್ಛಾದೈವಭಕ್ತರಾದ ಇವರು ಆರಾಧಿಸುವ ದೈವಗಳು ಖಾಂಡೋಬಾ ಮತ್ತು ಭೀರೋಬಾ. ಇವೇ ಅವರ ಮನೆದೇವರುಗಳು. ಈ ದೈವಗಳಲ್ಲದೆ ಕೆಲವು ಅಡವಿದೈವಗಳನ್ನೂ ಪೂಜಿಸುತ್ತಾರೆ. ಹಾಡಿಮಾರಮ್ಮನನ್ನು, ಅನಿಷ್ಟ ರೋಗಗಳನ್ನು ತಡೆಗಟ್ಟುತ್ತಾಳೆಂಬ ನಂಬಿಕೆಯ ಹಿನ್ನೆಲೆಯಲ್ಲಿ ವಿಶೇಷ ಭಯಭಕ್ತಿಯಿಂದ ಕಾಣುತ್ತಾರೆ.[51] ತಮ್ಮ ಬುಡಕಟ್ಟಿನ ವಾಂಶಿಕ ಮೂಲದ ಹಲವು ದೈವಗಳಿಗೆ ಪ್ರತ್ಯೇಕ ಎಡೆಗಳಲ್ಲಿ ಒಂದೊಂದು ನಿರ್ದಿಷ್ಟ ನೆಲೆಗಳಿದ್ದರೂ ವಲಸೆ ಹೋದೆಡೆಯಲ್ಲೆಲ್ಲಾ ಆ ದೈವಗಳ ಹೆಸರಿನಲ್ಲಿ ಒಂದೊಂದು ಕಲ್ಲು ನೆಟ್ಟು ಪೂಜಿಸುತ್ತಾರೆ. ಅಲ್ಲದೆ ಎಲ್ಲ ದೈವಗಳಿಗೂ ಕಾಲಕಾಲಕ್ಕೆ ಹರಕೆ ಸಲ್ಲಿಸಲಾಗುವುದು.

ಹಳೆಯ ತಲೆಮಾರಿನ ‘ಹಿರಿಯರ’ನ್ನೂ ಆರಾಧಿಸುತ್ತಾರೆ. ಒಬ್ಬೊಬ್ಬ ಹಿರಿಯನೂ ಒಂದೊಂದು ಪ್ರತಿಮೆಯಿಂದ ಪ್ರತಿನಿಧಿಸಲ್ಪಡುತ್ತಾನೆ.

ಒಂದೊಂದು ಹಾಡಿಗೂ ಒಂದೊಂದು ಹಾಡಿ ದೇವರು ಸಾಮಾನ್ಯವಾಗಿ ಇರುವುದಲ್ಲದೆ ಪ್ರತಿಯೊಂದು ಕುಟುಂಬಕ್ಕೂ ಒಂದೊಂದು ಮನೆದೇವರಿರುತ್ತದೆ. ಹಾಡಿ ದೇವತೆ, ಗ್ರಾಮ ಮತ್ತು ಅಡವಿ ದೇವತೆಗಳಿಗೆ ವರ್ಷಕ್ಕೊಮ್ಮೆ ಹರಕೆ ಸಲ್ಲಿಸುವುದು ಸಂಪ್ರದಾಯ. ಮನೆದೇವರಿಗೆ ಮಾತ್ರ ಆಗಾಗ ಹಬ್ಬ ಹರಿದಿನಗಳಲ್ಲಿ ಎಡೆಸಲ್ಲಿಸಿ ಪೂಜೆ ನಡೆಸಲಾಗುವುದು.

ಮೇಲ್ಕಂಡ ದೈವಗಳಲ್ಲದೆ ತಾವು ವಲಸೆ ಹೋಗಿ ನೆಲೆಸುವ ಪ್ರದೇಶದ ಗ್ರಾಮದೇವತೆಗಳಿಗೂ ಇವರು ನಡೆದುಕೊಳ್ಳುತ್ತಾರೆ. ಉದಾಹರಣೆಗೆ ಚೌಡಮ್ಮ, ಸಿದ್ಧರು, ಬಸವಣ್ಣ ಮುಂತಾಗಿ.

ಹಬ್ಬ ಹರಿದಿನಗಳಲ್ಲಿ ಮನೆದೇವರುಗಳಿಗೆ ಬಲಿ ನೀಡಿದ ಕುರಿಯ ಚರ್ಮವನ್ನು ಡೋಲು ತಯಾರಿಸಲು ಉಪಯೋಗಿಸಿಕೊಳ್ಳುತ್ತಾರೆ. ಡೋಲಿನ ಮರ್[52] ಮಾಡಿಕೊಟ್ಟ ವ್ಯಕ್ತಿಗೆ ಸಂಭಾವನಾ ರೂಪದಲ್ಲಿ ಕೋಣ ಅಥವಾ ಎಮ್ಮೆಯ ದಾನ ನೀಡಲಾಗುವುದು.

ಈ ಬುಡಕಟ್ಟು ಜನಾಂಗದ ಪ್ರತಿಯೊಂದು ಹಾಡಿಯಲ್ಲೂ ಒಬ್ಬ ಯಡಿಗ್ಯ ಅಥವಾ ಲಾಂಬೂರ್ ಇರುತ್ತಾರೆ. ಅವರು ದೈವ ಅಥವಾ ಧರ್ಮ ಮತ್ತು ಜನರ ನಡುವೆ ನಿಂತು ಬುಡಕಟ್ಟು ಜನಾಂಗದ ಎಲ್ಲ ಧಾರ್ಮಿಕ ಕಾರ್ಯಗಳನ್ನೂ ನಡೆಸಿಕೊಡುತ್ತಾರೆ. ಯಡಿಗ್ಯ ನಡೆಸಿಕೊಟ್ಟರೆ ಶ್ರೇಷ್ಠವೆಂದು ಪರಿಗಣಿಸಲಾಗುವುದು.

ಪವಿತ್ರ ಯಾತ್ರಾಕೇಂದ್ರಗಳಿಗೆ ಯಾತ್ರೆ ಹೋಗುವ ಸಂದರ್ಭದಲ್ಲಿ ಮತ್ತು ಹಿರಿಯರ ಹಬ್ಬವನ್ನು ಆಚರಿಸುವ ವಿಶೇಷ ದಿನಗಳಲ್ಲಿ ಮಾತ್ರ ಹಣೆಗೆ ಗಂಧ ಧರಿಸುವುದು ಇವರ ರೂಢಿ. ಉಳಿದ ದಿನಗಳಲ್ಲಿ ಕುಂಕುಮ ಧರಿಸುವುದು ಸಾಮಾನ್ಯ. ಹಬ್ಬ ಹರಿದಿನಗಳಲ್ಲಿ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ‘ಅಬಿಲ್‌ಗುಲಾಲ್’ನ್ನು ಎಣ್ಣೆಯೊಳಗೆ ಕಲಸಿ ಹಣೆಗೆ ಅಡ್ಡಡ್ಡ ಲೇಪಿಸಿಕೊಳ್ಳುವುದುಂಟು.

ಹಬ್ಬ ಹುಣ್ಣಿಮೆಯ ದಿನಗಳಲ್ಲಿ ಗುಡಿಸಲಲ್ಲಿ ತುಪ್ಪ ಅಥಾವ ಬೆಣ್ಣೆಯ ಹಣತೆ ದೀಪ ಉರಿಸುವುದು ಸಂಪ್ರದಾಯವಾಗಿದೆ.

ಹಬ್ಬಗಳು : ಹಿಂದೂ ಸಂಪ್ರದಾಯದ ಎಲ್ಲಾ ಹಬ್ಬಗಳನ್ನು ಇವರು ಆಚರಿಸುತ್ತಾರೆ. ಅಲ್ಲದೆ ಕೆಲವು ಸ್ಥಳೀಯ ಹಬ್ಬಗಳನ್ನೂ ಸಾಂಪ್ರದಾಯಿಕ ರೀತಿಯಲ್ಲಿ ಆಚರಿಸುತ್ತಾರೆ. ನಿರ್ದಿಷ್ಟಕಾಲದಲ್ಲಿ ಇವರು ಆಚರಿಸುವ ಹಬ್ಬಗಳಲ್ಲಿ ಮುಖ್ಯವಾದವು ಈ ಕೆಳಕಂಡವು–ದೀಪಾ

ವಳಿ, ಕಾರ್ತೀಕ, ವಕರ್ೂತ. ಯುಗಾದಿ, ಶ್ರಾವಣ, ಗೌರಿಹಬ್ಬ, ನಾಗರಪಂಚಮಿ, ಶಿವರಾತ್ರಿ, ಹಿರಿಯರ ಹಬ್ಬ ಮತ್ತು ನವರಾತ್ರಿ ಹಬ್ಬಗಳು.

ದೀಪಾವಳಿ : ಇದು ಈ ಬುಡಕಟ್ಟು ಜನಾಂಗದವರಿಗೆ ಹೊಸಬಟ್ಟೆ ಧರಿಸುವ ಹಬ್ಬವೆನಿಸಿದೆ. ಈ ಹಬ್ಬದಲ್ಲಿ ಎಮ್ಮೆಗಳ ಕೊರಳು ಕೋಡುಗಳಿಗೆ ಬಣ್ಣ ಲೇಪಿಸಿ ಹೂಗಳಿಂದ ಅಲಂಕರಿಸಲಾಗುತ್ತದೆ ವಿಶೇಷವಾಗಿ ಗಾಡಿ ಎತ್ತುಗಳ ಕೋಡುಗಳಿಗೆ ಬಣ್ಣ ಲೇಪಿಸಿ ಗೆಜ್ಜೆ ಕಟ್ಟಿ ಕೋಡು ಕುಂಜ (ನಾರಿನ ಗೊಂಡೆ) ಹಾಕಿ ಸಿಂಗರಿಸುತ್ತಾರೆ.

ಹಬ್ಬದ ದಿನ ಹೊತ್ತು ಮುಳುಗಿದ ಮೇಲೆ ಎಮ್ಮೆ ಎತ್ತು ದನಗಳ ಪೂಜೆ ಆರಂಭಗೊಳ್ಳುವುದು. ಅನಂತರ ಮನೆದೇವರ ಪೂಜೆ. ಹಾಡಿಯ ಸಮಸ್ತರೂ ಆ ಪೂಜಾ ಸಮಾರಂಭಕ್ಕೆ ಹಾಜರಿರುತ್ತಾರೆ.[53] ಅದೇ ಸಂದರ್ಭದಲ್ಲಿ ಕುಟುಂಬದ ಹಿರಿಯರ ಪೂಜೆಯೂ ನೆರವೇರುವುದು. ಪೂಜಾವಿಧಿಗಳು ಮುಗಿದ ಮೇಲೆ ದೇವರು ಮತ್ತು ಹಿರಿಯರಿಗೆ ಪ್ರತ್ಯೇಕವಾಗಿ ಬೇರೆ ಬೇರೆ ಎಡೆ ಸಲ್ಲಿಸಿ ಹಾಡಿಯ ಜನರೊಂದಿಗೆ ಕುಳಿತು ಹಾಲುಪಾಯಿಸದ ಸಹಭೋಜನ ನಡೆಸುವುದು ವಾಡಿಕೆ.

ಕಾರ್ತೀಕ : ಅತ್ಯಂತ ಶುದ್ಧದಿಂದ ಆಚರಿಸುವ ಹಬ್ಬ. ಗುಡಿಸಲ ಒಳ ಮತ್ತು ಹೊರಾವರಣಗಳನ್ನು ಶುಚಿಗೊಳಿಸಿ ಮಿಂದು ಮಡಿಬಟ್ಟೆ ಧರಿಸಿ ಮನೆದೇವರ ಪೂಜೆಯನ್ನು ನೆರವೇರಿಸಲಾಗುವುದು. ಹಾಡಿಯ ಸಮಸ್ತರೂ ಆ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ ದೇವರ ಎದುರಿನಲ್ಲಿ ತುಪ್ಪದ ಹಣತೆ ದೀಪಗಳನ್ನು ಹೊತ್ತಿಸುವುದು ಅಂದಿನ ವಿಶೇಷ. ಸಿಹಿ ಅಡಿಗೆಯ ಸಹಭೋಜನವಿರುತ್ತದೆ.

ವಕರ್ೂತ : ಅನಿರ್ದಿಷ್ಟ ಕಾಲದಲ್ಲಿ ಜರುಗುವ ಹಬ್ಬವಿದು.

ವಕರ್ೂತ ಎಂದರೆ ಕನ್ನಡದಲ್ಲಿ ರಕ್ಷಣೆ ಎಂಬ ಅರ್ಥವಿದೆ. ಮನೆದೇವರಿಗೆ ವಿಶೇಷ ರೀತಿಯಲ್ಲಿ ಹರಕೆ ಸಲ್ಲಿಸುವ ಒಂದು ಸಂದರ್ಭ. ವರ್ಷಕ್ಕೊಮ್ಮೆ ಹಾಡಿಯ ಒಂದೊಂದು ಕುಟುಂಬವೂ ಒಂದೊಂದು ದಿನ ಈ ಹಬ್ಬವನ್ನು ಆಚರಿಸುತ್ತದೆ.

ಮನೆದೇವರ ಉತ್ಸವಮೂರ್ತಿ ಮತ್ತು ಅದರ ಸಿಪಾಯಿಗಳಿಗೆ ಎಳೆಬಾಳೆಕಂದಿನ ಮಂಟಪ ನಿರ್ಮಿಸಿ. ಆ ಮಂಟಪವನ್ನು ಮಾವಿನ ಚಿಗುರು, ಬಣ್ಣದ ಕಾಗದಗಳಿಂದ ಅಲಂಕರಿಸಲಾಗುವುದು. ಹಾಡಿಯ ಯಡಿಗ್ಯನು ದೇವರನ್ನು ವೀಳ್ಯದೆಲೆ. ತೆಂಗಿನಕಾಯಿ ಮುಂತಾದ ಪೂಜಾ ದ್ರವ್ಯಗಳಿಂದ ಪೂಜಿಸುತ್ತಾನೆ. ಆ ವೇಳೆಯಲ್ಲಿ ಗುಡಿಸಲ ಹೊರಭಾಗದಲ್ಲಿ ದೇವರ ಹೆಸರಿನಲ್ಲಿ ಕುರಿ ಕೋಳಿಗಳನ್ನು ಬಲಿ ಕೆಗೆದುಕೊಳ್ಳಲಾಗುವುದು.

ಪೂಜೆ- ಬಲಿ ಕಾರ್ಯಗಳು ಮುಗಿದ ಮೇಲೆ ದೇವರ ವಸ್ತುಗಳನ್ನು ಒತ್ತಟ್ಟಿಗೆ ಮರೆ ಮಾಡಿಟ್ಟು ಮಾಂಸದಡಿಗೆಯನ್ನು ಅಣಿಗೊಳಿಸಿ ಹಾಡಿಯವರೆಲ್ಲರಿಗೂ ಉಣಬಡಿಸುವರು.

ಎಷ್ಟೇ ಸಂಖ್ಯೆಯಲ್ಲಿ ಕುರಿಕೋಳಿಗಳನ್ನು ದೇವರಿಗೆ ಬಲಿ ಕೊಟ್ಟಿದ್ದರೂ ಅವುಗಳ ಮಾಂಸವನ್ನು ಮಾತ್ರ ಹಾಡಿಯ ಇತರರಿಗೆ ಹಂಚುವಂತಿಲ್ಲ. ಎಷ್ಟೇ ಪ್ರಯಾಸವಾದರೂ ಹಬ್ಬಕ್ಕೆ ಆಹ್ವಾನಿತರಾಗಿ ಬಂದ ರಕ್ತಸಂಬಂಧಿಗಳಿಗೆ ಅವನ್ನು ಅಣಿಗೊಳಿಸಿ ಭೋಜನ ನೀಡಬೇಕು. ಈ ವಿಧಿ ಮಲೆನಾಡು ಒಕ್ಕಲಿಗರು ಆಚರಿಸುವ ತೋಟದ ಶಾಂತಿ ಸಂಪ್ರದಾಯವನ್ನು ಕೆಲಮಟ್ಟಿಗೆ ಹೋಲುತ್ತದೆ.[54]

ಯುಗಾದಿ : ಅತ್ಯಂತ ಸಂಭ್ರಮೋತ್ಸಾಹಗಳಿಂದ ಆಚರಿಸುವ ಹಬ್ಬ.

ಗುಡಿಸಲ ಮುಂದೆ ಚಿಕ್ಕಗೂಡನ್ನು ನಿರ್ಮಿಸಿ ಅದರ ಸನಿಹದಲ್ಲಿ ಗೂಟವೊಂದನ್ನು ನೆಡುತ್ತಾರೆ. ತಾಮ್ರದ ತಂಬಿಗೆಯೊಂದನ್ನು ಅರಿಸಿನ ಕುಂಕುಮ ಗುಲಾಲುಗಳಿಂದ ರಂಗಿಸಿ, ಅದರ

ಕಂಠಕ್ಕೆ ಮಾವಿನ ತೋರಣ, ಹೊಸಬಟ್ಟೆಯ ನೆರಿಗೆ ಕಂತೆ ಕಟ್ಟಿ ಗೂಟಕ್ಕೆ ನೇತುಬಿಡಲಾಗುವುದು. ಗೂಟದ ಬುಡವನ್ನು ಸಗಣಿಯಿಂದ ಸಾರಿಸಿ ಪೂಜಾವಿಧಿಗೆ ಏರ್ಪಾಟುಮಾಡಿಕೊಳ್ಳಲಾಗುತ್ತದೆ. ತೆಂಗಿನಕಾಯಿ ಒಡೆದು ಹಾಲುಪಾಯಿಸ ಬೆಲ್ಲ ಎಡೆ ಇಟ್ಟು ಪೂಜಿಸುವರು. ಎಡೆಯನ್ನು, ಯಾರು ಪೂಜಾಕಾರ್ಯವನ್ನು ನೆರವೇರಿಸಿರುತ್ತಾರೊ ಅವರೇ ತಿಂದು ಮುಗಿಸಬೇಕು.

ಇಷ್ಟಾದ ಮೇಲೆ, ಇನ್ನು ಮಟಮಟ ಮಧ್ಯಾಹ್ನದ ಹೊತ್ತಿಗೆ ಸರಿಯಾಗಿ ಮನೆ ದೇವರ ಪೂಜೆಯನ್ನು ನೆರವೇರಿಸಿ ಬೇವು-ಬೆಲ್ಲ ತಿನ್ನುವ ಸಂಪ್ರದಾಯವಿದೆ. ಹಬ್ಬದ ಪ್ರಯುಕ್ತ ಮನೆ ದೇವರಿಗೆ ಪ್ರತ್ಯೇಕವಾಗಿ ಸಿಹಿ ಅಡಿಗೆಯ ಎಡೆಸಲ್ಲಿಸಿ ಊಟ ಮಾಡುತ್ತಾರೆ.

ಸಂಜೆಯ ವೇಳೆಯಲ್ಲಿ ಚಂದ್ರದರ್ಶನ ಮಾಡಿ ಕಿರಿಯರಾಗಿದ್ದರೆ ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವ ಸಂಪ್ರದಾಯವೂ ಪ್ರಚಲಿತದಲ್ಲಿದೆ.[55]

ಶ್ರಾವಣ : ಅತ್ಯಂತ ಸರಳ ರೀತಿಯಲ್ಲಿ ಜರುಗುವ ಹಬ್ಬ.

ಶ್ರಾವಣ ಮಾಸದ ಯಾವುದಾದರೂ ಒಂದು ಶನಿವಾರ ಈ ಹಬ್ಬ ಆಚರಿಸಲ್ಪಡುತ್ತದೆ. ಹಬ್ಬದ ಅಂಗವಾಗಿ ಮಾಮೂಲಿ ಸಿದ್ಧತೆಗಳೊಡನೆ ಮನೆದೇವರ ಪೂಜೆಯನ್ನು ನಡೆಸಲಾಗುವುದು. ಈ ಹಬ್ಬದಲ್ಲೂ ಸಿಹಿ ಪದಾರ್ಥಗಳನ್ನು ಅಣಿಗೊಳಿಸಿ ದೇವರಿಗೆ ಎಡೆಸಲ್ಲಿಸಲಾಗುತ್ತದೆ.

ಗೌರಿಹಬ್ಬ : ಅತ್ಯಂತ ಮಡಿ ಶುಚಿಯಿಂದಿದ್ದು ಶುದ್ಧದಿಂದ ಮನೆದೇವರ ಆರಾಧನೆಯನ್ನು ಕೈಗೊಳ್ಳುವ ಒಂದು ವಿಶೇಷ ಸಂದರ್ಭ. ಈ ಬುಡಕಟ್ಟಿನ ಪ್ರಮುಖ ಹಬ್ಬಗಳಲ್ಲಿ ಇದೂ ಒಂದು. ಇದು ಅವರ ಪಾಲಿಗೆ ಹೊಸಬಟ್ಟೆ ಧರಿಸುವ ಹಬ್ಬವೂ ಹೌದು. ಕುಟುಂಬದವರೇ ಮನೆದೇವರ ಪೂಜೆಯನ್ನು ನೆರವೇರಿಸುವುದು ವಿಶೇಷ. ದೇವರ ಪೂಜಾಕಾರ್ಯವನ್ನು ನೆರವೇರಿಸುವವರು ತಪ್ಪದೆ ಸ್ನಾನ ಮಾಡಬೇಕೆಂಬ ನಿಯಮವಿದೆ. ಎಂದಿನಂತೆ ಸಿಹಿ ಅಡಿಗೆಯ ಎಡೆ ಸಮರ್ಪಣೆಯ ನಂತರ ಸಹಭೋಜನ ನಡೆಸಲಾಗುವುದು.

ಅಂದಿನ ಮಟ್ಟಿಗೆ ಪಾನ ನಿಷೇಧವಿರುತ್ತದೆ. ಹಬ್ಬದ ದಿನ ಮದ್ಯಪಾನ ಮಾಡಿಕೊಂಡು ಹಾಡಿಯೊಳಗೆ ಬರುವಂತಿಲ್ಲ. ಗೋಮೂತ್ರ ಕುಡಿದು ಶುದ್ಧರಾದ ಮೇಲೆ ಅಂಥವರು ಗುಡಿಸಲ ಚಾವಡಿಯಲ್ಲಿ ಬಂದು ಕುಳಿತುಕೊಳ್ಳಲು ಅರ್ಹರಾಗುತ್ತಾರೆ.

ನಾಗರಪಂಚಮಿ : ಹಿಂದೂ ಸಂಪ್ರದಾಯದ ಬೇರೆಲ್ಲಾ ಹಬ್ಬಗಳಂತೆ ಈ ಹಬ್ಬವನ್ನೂ ಆಚರಿಸಲಾಗುವುದು. ಇದನ್ನು ಅತ್ಯಂತ ಶ್ರೇಷ್ಠ ಹಬ್ಬವೆಂದು ಪರಿಗಣಿಸಿ ತುಸು ಭಯಭಕ್ತಿಯಿಂದಲೇ ನಡೆಸುಕೊಳ್ಳುತ್ತಾರೆ. ನಾಗರಹುತ್ತಕ್ಕೆ ತನಿಯೆರೆದು ಊದಿನಕಡ್ಡಿ ಹೊತ್ತಿಸಿ ಕಾಯಿ ಒಡೆದು ತುಪ್ಪದ ದೀಪ ಹೊತ್ತಿಸಿಡುವುದು ಅಂದಿನ ಮುಖ್ಯ ಕ್ರಿಯೆ. ಮಾಮೂಲಿಯಂತೆ ಮನೆದೇವರನ್ನು ಪೂಜಿಸಿ ಸಿಹಿಪದಾರ್ಥಗಳ ಎಡೆ ಅರ್ಪಿಸಿ ಸಹಭೋಜನ ನಡೆಸಲಾಗುವುದು.

ಪಂಚಮಿಯ ದಿನ ಮಹಿಳೆಯರು 'ಪಂಚಮಿಪುಗಡಿ'ಯಾಡುವುದು ಒಂದು ವಿಶೇಷ ಆಕರ್ಷಣೆ.

ಶಿವರಾತ್ರಿ : ಕಚ್ಚಾಗೌಳಿಗರ ಎಲ್ಲ ಮುಖ್ಯ ಹಬ್ಬಗಳೂ ಶಿವರಾತ್ರಿಯಿಂದಲೇ ಆರಂಭಗೊಳ್ಳುವುದು.

ಹನ್ನೆರಡು ದಿನಗಳ ಪರ್ಯಂತ ಸುದೀರ್ಘ ಅವಧಿಯವರೆಗೆ ನಡೆಸುವ ಹಬ್ಬವಿದು. ಪ್ರತಿನಿತ್ಯವೂ ಮನೆದೇವರಿಗೆ ಸಿಹಿಪದಾರ್ಥಗಳ ಎಡೆ, ಪೂಜೆಸಲ್ಲುತ್ತದೆ ; ಭೋಜನ ನಡೆಯುತ್ತದೆ.

ಈ ಹಬ್ಬದಲ್ಲಿ ಬುಡಕಟ್ಟಿನ ಪ್ರವೀಣ ನರ್ತಕರ ನೃತ್ಯಪ್ರದರ್ಶನವಿರುತ್ತದೆ. ನರ್ತಕರ ಆಮೋದ ಪ್ರಮೋದಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಅವರು ಸಮಮಸ್ತಾ

ಭರಣ[56]ಗಳನ್ನು ಧರಿಸಿ ಹಾಡಿಯಿಂದ ಹಾಡಿಗೆ ಕುಣಿಯಲು ಹೋಗುವುದು ಶಿವರಾತ್ರಿ ದಿನಗಳಲ್ಲೇ. ಹಾಗೆ ಕುಣಿಯಲು ಬಂದ ಅವರನ್ನು ಎಲ್ಲಾ ಹಾಡಿಯವರು ದೇವರ ಸಮಾನವಾಗಿ ಕಂಡು ವಿಶೇಷ ಭಕ್ತಿಗೌರವದಿಂದ ಆದರಿಸಿ ಹೋಳಿಗೆ ಅಡಿಗೆ ಉಣ್ಣಿಸಿ ಸಂತೃಪ್ತಿಗೊಳಿಸುತ್ತಾರೆ.

ಶಿವರಾತ್ರಿಯ ಮೊದಲ ದಿನದಿಂದ ತೊಡಗಿ ಕೊನೆಯ ಹನ್ನೆರಡನೆಯ ದಿನದವರೆಗೂ ಕುಣಿತದವರು ತಮ್ಮ ಪಯಣವನ್ನು ಹಾಡಿಯಿಂದ ಹಾಡಿಗೆ ಮುಂದುವರಿಸುತ್ತಾ ಸಾಗುತ್ತಾರೆ. ಅವರು ಭೇಟಿ ಕೊಡುವ ಕಟ್ಟಕಡೆಯ ಹಾಡಿಯಲ್ಲಿ ವಿಶೇಷ ಸತ್ಕಾರವಿರುವುದು. ಅವರ ಗೌರವಾರ್ಥ ಹಾಡಿಯ ಪ್ರತಿಯೊಂದು ಕುಟುಂಬದಿಂದಲೂ ಚಂದಾಹಣ ಎತ್ತಿ ಎಲ್ಲರ ಸಹಕಾರದಿಂದ ಭರ್ಜರಿ ಔತಣಕೂಟವೊಂದನ್ನು ಏರ್ಪಡಿಸಲಾಗುವುದು.[57] ಆ ದಿವಸ ನರ್ತಕರೂ ಸೇರಿಕೊಂಡಂತೆ ಹಾಡಿಯ ಸಮಸ್ತರೂ ಮದ್ಯಪಾನ ಸೇವಿಸಬಹುದು; ಮಾಂಸಾಹಾರವನ್ನು ಉಪಯೋಗಿಸಬಹುದು.

ಕೆಲವು ಹಾಡಿಗಳಲ್ಲಿ ಶಿವರಾತ್ರಿಯ ಹನ್ನೆರಡು ದಿನವೂ ಜಾಗರಣೆ ಆಚರಿಸುವುದಾಗಿ ತಿಳಿದುಬಂದಿದೆ. ಜಾಗರಣೆಯಲ್ಲಿ ಪಾಲ್ಗೊಂಡವರಿಗೆ ಆ ಹನ್ನೆರಡು ದಿನವೂ ಸಿಹಿಭೋಜನವನ್ನು ಒದಗಿಸಲಾಗುವುದು.

ಹಿರಿಯರ ಹಬ್ಬ: ಇವರಿಗೇ ವಿಶೇಷ ಎನ್ನುವ ರೀತಿಯಲ್ಲಿ ಆಚರಿಸಲ್ಪಡುವ ಒಂದು ಮಹತ್ವದ ಹಬ್ಬ. ಅಲ್ಲದೆ ಇವರಿಗೇ ವಿಶೇಷ ಎನ್ನುವ ರೀತಿಯಲ್ಲಿ ಪ್ರಚಲಿತದಲ್ಲಿದೆ. ನವರಾತ್ರಿಗೆ ಹದಿನೈದು ದಿನ ಮುನ್ನ ಬರುವ ಅಮಾವಾಸ್ಯೆಯ ದಿನ ಈ ಹಬ್ಬವನ್ನು ಆಚರಿಸಲಾಗುವುದು. ಈ ಹಬ್ಬವನ್ನು ಹಾಡಿಯ ಎಲ್ಲ ಕುಟುಂಬದವರೂ ಆಚರಿಸುವುದಿಲ್ಲ. ಇದು, ವಾಸ್ತವವಾಗಿ ಆರ್ಥಿಕವಾಗಿ ಸುಧಾರಿಸಿದ ಕೆಲವೇ ಕುಟುಂಬಗಳಿಗೆ ಮೀಸಲಾದ ಹಬ್ಬವಾಗಿದೆ. ಆರ್ಥಿಕವಾಗಿ ಹಿಂದುಳಿದವರು ಇದನ್ನು ಆಚರಿಸದಿರಲು ಕಾರಣವೇನೆಂದರೆ ಒಂದು ವರ್ಷ ಈ ಹಬ್ಬವನ್ನಾಚರಿಸಿದರೆ ಮುಂದೆ ಕನಿಷ್ಠ ಮೂರು ವರ್ಷಗಳವರೆಗಾದರೂ ಅದನ್ನು ನಡೆಸಲೇಬೇಕು. ಹಾಗೆ ನಾಲ್ಕು ವರ್ಷಗಳವರೆಗೆ ಬಿಡದೆ ನಡೆಸಿಕೊಂಡು ಹೋದರೆ ಮುಂದೆ ಪುನಃ ಹನ್ನೆರಡು ವರ್ಷ ತುಂಬುವವರೆಗೂ ತಪ್ಪದೆ ಆಚರಿಸಿಕೊಂಡು ಹೋಗಬೇಕೆಂಬ ಕಟ್ಟಳೆ ಈ ಬುಡಕಟ್ಟು ಜನಾಂಗದಲ್ಲಿದೆ.

ಆಚರಿಸುವ ವಿಧಾನ: ಅಡವಿಯಲ್ಲಿ ದೊರಕುವ ಎಲ್ಲ ಬಗೆಯ ತರಕಾರಿ ಸೊಪ್ಪುಗಳ ಪಲ್ಯವನ್ನು ಅಣಿಗೊಳಿಸುವುದು; ನಾನಾ ಜಾತಿಯ ಕಾಡುಹೂಗಳನ್ನು ದೇವರ ತಲೆ ಮೇಲೆ ಏರಿಸುವುದು—ಈ ಹಬ್ಬದ ಮುಖ್ಯ ವಿಧಿಗಳು.

ಕುಟುಂಬದ ಯಜಮಾನ 'ಹಿರಿಯರ ಪೂಜೆ'ಯನ್ನು ನೆರವೇರಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಾನೆ. ಗುಡಿಸಲ ಹೊಸ್ತಿಲಲ್ಲಿ ಕುಳಿತು ಹಬ್ಬಕ್ಕೆ ಆಹ್ವಾನಿತರಾಗಿ ಬಂದ ರಕ್ತಸಂಬಂಧಿಗಳ ಕಾಲುಬೆರಳುಗಳನ್ನು ತೊಳೆದು ಪೂಜಿಸುವ ಸಂಪ್ರದಾಯವಿದೆ. ಪೂಜೆಗೆ ಗಂಡಸರು ಕಾಲುಬೆರಳುಗಳನ್ನೂ ಹೆಂಗಸರು ಕೈಬೆರಳುಗಳನ್ನೂ ಚಾಚುವುದು ಪದ್ಧತಿ. ಹೆಂಗಸರ ಕೈಹೆಬ್ಬೆರಳಿಗೆ ಮೊಸರು ಅಕ್ಕಿಕಾಳು, ಹೂಗಳನ್ನಿಟ್ಟು ಪೂಜಿಸುವುದು ವಿಶೇಷ.

ಹೀಗೆ ರಕ್ತಸಂಬಂಧಿಗಳ ಪೂಜೆ ಮುಗಿದ ಮೇಲೆ ಹಿರಿಯರಿಗೆ ಎಡೆ ಸಲ್ಲಿಸಿ ಅನಂತರ ಮನೆದೇವರ ಪೂಜೆಯನ್ನು ನಡೆಸಲಾಗುವುದು.

ಈ ಹಬ್ಬದಲ್ಲಿ ಬುಡಕಟ್ಟಿನ ಪುರುಷರು ಮತ್ತು ಮಹಿಳೆಯರು ಬೇರೆಬೇರೆಯಾಗಿ 'ಪುಗಡಿಹಾಕುವುದು' ಒಂದು ಧಾರ್ಮಿಕ ವಿಧಿ. ಅವರು ಹಬ್ಬವನ್ನಾಚರಿಸುವ ಕುಟುಂಬದ ಹಿರಿಯರನ್ನು ಸ್ಮರಿಸಿಕೊಳ್ಳುತ್ತ ದಣಿವಾಗುವವರೆಗೆ ಮನೆದೇವರ ಮುಂದೆ ಪ್ರದರ್ಶನ ನಡೆಸುತ್ತಾರೆ. ನಡುರಾತ್ರಿಯಲ್ಲಿ ಸಿಹಿಭೋಜನವಿರುತ್ತದೆ.

ಹಿರಿಯರ ಹಬ್ಬವನ್ನಾಚರಿಸಲು ಶಕ್ಯವಿಲ್ಲದವರು ಈ ಹಬ್ಬಕಾರ್ಯದಲ್ಲಿ ತಪ್ಪದೆ ಭಾಗ

ವಹಿಸುತ್ತಾರೆ. ಅವರು ಹಬ್ಬವನ್ನಾಚರಿಸಿದ ಕುಟುಂಬದ ಸದಸ್ಯರ ಕಾಲಿಗೆ ಬಿದ್ದು ಕೈಮುಗಿದು ಕೊಳ್ಳುವುದು ಪದ್ಧತಿ.

ದಸರಾ: ಈ ಬುಡಕಟ್ಟು ಜನಾಂಗದವರಿಗೆ ಹೊಸಬಟ್ಟೆ ಧರಿಸಲು ಅವಕಾಶವಾಗುವ ಮತ್ತೊಂದು ಪ್ರಮುಖ ಹಬ್ಬ. ಹನ್ನೊಂದು ದಿನಗಳವರೆಗೆ ಸತತವಾಗಿ ಒಂದಲ್ಲಾ ಒಂದು ಕಾರ್ಯವಿಧಿಯೊಂದಿಗೆ ಜರಗುವ ಸಂಭ್ರಮದ ಹಬ್ಬವಿದು.

ಹಬ್ಬದ ಹನ್ನೊಂದು ದಿನಗಳೂ ಅವರಿಗೆ ಶ್ರೇಷ್ಠ ದಿನಗಳು. ಪ್ರತಿನಿತ್ಯವೂ ನದಿಯಲ್ಲಿ ಮುಳುಗೆದ್ದು ಶುದ್ಧರಾಗಬೇಕು; ಹೊಸಬಟ್ಟೆಯನ್ನೇ ಧರಿಸಬೇಕು; ಜರಿಪೇಟ ಸುತ್ತಿಕೊಳ್ಳ ಬೇಕು; ಎಲ್ಲಕ್ಕಿಂತ ವಿಶೇಷವಾಗಿ ಮನೆದೇವರ ಪೂಜೆ ನಡೆಸಬೇಕು; ಆ ಅವಧಿಯಲ್ಲಿ ಕುಡಿತ, ಮಾಂಸಾಹಾರಗಳನ್ನು ತ್ಯಜಿಸಬೇಕು.

ಗುಡಿಸಲಿನ ಒಳಭಾಗದಲ್ಲಿ 'ದೇವರಜಾಗ'ದಲ್ಲಿ ಮಂಟಪವೊಂದನ್ನು ನಿರ್ಮಿಸಿ ಮಾವಿನ ಚಿಗುರು, ಹೂ, ಬಣ್ಣದ ಕಾಗದಗಳಿಂದ ಅದನ್ನು ಸಿಂಗರಿಸಿ ಮನೆದೇವರ ಪ್ರತಿಮೆಗಳನ್ನು ಅಲ್ಲಿ ಕುಳ್ಳಿರಿಸುವರು. ವಿಶೇಷವಾಗಿ, ಕೊಬ್ಬರಿ, ಉತ್ತುತ್ತೆ ಮುಂತಾದ ಮಂಗಳದ್ರವ್ಯಗಳನ್ನು ವಸ್ತ್ರ ವೊಂದರಲ್ಲಿ ಕಟ್ಟಿ ಮನೆದೇವರಿಗೆ ಮಡಿಲುದುಂಬುವ ಶಾಸ್ತ್ರವಿರುತ್ತದೆ.

ಹಬ್ಬದ ಮೊದಲ ದಿನ ದೇವರ ಪೂಜೆಗೆ ಮೀಸಲಾಗಿ 'ಆಯಿನ್‌ಕಲ್'[58] ಪಾಯಿಸವನ್ನು ಅಣಿಗೊಳಿಸಲಾಗುವುದು. ಮೊದಲು ಅದನ್ನು ದೇವರಿಗೆ ಎಡೆ ಇಟ್ಟು ಅನಂತರ ಮೀಸಲು ಹಾಲು[59] ಸಲ್ಲಿಸುವುದು ಪದ್ಧತಿ.

ಎರಡನೆಯ ದಿನ ಗಂಗಾಪೂಜೆ. ಹಾಡಿಯ ಸ್ತ್ರೀಪುರುಷರೆಲ್ಲಾ ಸಾಮೂಹಿಕವಾಗಿ ನದಿಗೆ ಹೋಗಿ ತಾಮ್ರದ ಬಿಂದಿಗೆಯಲ್ಲಿ ನೀರು ತರುವ ವಿಧಿ ಅದು. ಗಂಟೆ, ಧೂಪದಾರತಿ, ಲೋಬಾನ, ಕಂಚಿನತಟ್ಟೆ ಇನ್ನು ಮುಂತಾದ ಪೂಜಾಸಾಮಗ್ರಿಗಳೊಂದಿಗೆ ನದಿಗೆ ಹೋಗಿ, ಅಲ್ಲಿ ಗಂಗೆಗೆ ಮೀಸಲು ಹಾಲು ಸಲ್ಲಿಸಿ ಪೂಜೆ ಮಾಡಿದ ಮೇಲೆ ಹಾಡಿಗೆ ನೀರು ತರಲಾಗುವುದು. ವಾಸದ ಗುಡಿಸಲಲ್ಲೂ ಮೀಸಲು ಹಾಲಿನಿಂದಾದ ಮೊಸರನ್ನು ಕಡೆದು ಬೆಣ್ಣೆ ತೆಗೆದು ಬೆಣ್ಣೆ ನೈವೇದ್ಯವನ್ನು ದೇವರಿಗೆ ಅರ್ಪಿಸಲಾಗುವುದು.

'ಮಾರ್ಗಿಪಾಟ': ಬನ್ನಿತರಲು ಬನಕ್ಕೆ ಹೋಗುವ ಸಂದರ್ಭ. ಕಡೆಯದಿನ ಜರುಗುವ ಕಾರ್ಯಕ್ರಮವಿದು. ಈ ಕಾರ್ಯಕ್ರಮದ ಪೂರ್ವಸಿದ್ಧತೆಯಾಗಿ ಪ್ರತಿಯೊಂದು ಕುಟುಂಬವೂ ಐವತ್ತರಿಂದ ಅರವತ್ತು ತೆಂಗಿನಕಾಯಿಗಳನ್ನೂ ಜೊತೆಗೆ ಇತರ ಪೂಜಾ ಸಾಮಗ್ರಿಗಳನ್ನೂ ಒದ ಗಿಸಿಟ್ಟುಕೊಂಡಿರುತ್ತದೆ.

ಆ ದಿನ ಹಾಡಿಯ ಎಲ್ಲ ಕುಟುಂಬದವರೂ ತಮ್ಮ ತಮ್ಮ ಮನೆದೇವರುಗಳಿಗೆ ಮೀಸಲು ಅಡಿಗೆ ಅಣಿಗೊಳಿಸಿ ಹಾಲುಪಾಯಿಸ ಎಡೆ ಸಲ್ಲಿಸುತ್ತಾರೆ. ಅನಂತರ ಹಾಡಿಯಿಂದ ಅನತಿ ದೂರದಲ್ಲಿ 'ಮಾರ್ಗಿಪಾಟ' ಎಂದು ಬನ್ನಿತರಲು ಹೋಗುವ ಕಾರ್ಯಕ್ರಮವಿರುತ್ತದೆ.

ಮಾರ್ಗಿಪಾಟಯಿಂದ ಹಿಂದಿರುಗಿ ಬಂದ ಮೇಲೆ ಹಾಡಿಯ ಜನರು ಸಾಮೂಹಿಕವಾಗಿ ಬುಡಕಟ್ಟಿನ ಎಲ್ಲ ಮುಖ್ಯ ದೈವಗಳಿಗೂ ಹಣ್ಣುಕಾಯಿ ಅರ್ಪಿಸಿ ಎಡೆ ನೀಡುವರು. ಈ ಕಾರ್ಯ ಆಯಾಯ ಮನೆದೇವರ ಮಂಟಪದ ಸಮ್ಮುಖದಲ್ಲೇ ಜರುಗುತ್ತದೆ.

ಅದಾದ ಮೇಲೆ, ಗಂಡಸರು ಹೆಂಗಸರು ಸಾಮೂಹಿಕವಾಗಿ ಬೇರೆ ಬೇರೆ ಸಮವಸ್ತ್ರ ಧರಿಸಿ ತಮ್ಮ ತಮ್ಮ ಮನೆದೇವರುಗಳನ್ನು ಉತ್ಸವದಲ್ಲಿ ಹಾಡಿಯ ಬಯಲಿಗೆ ತಂದು ಅಲ್ಲಿ ಒಂದರ ಪಕ್ಕದಲ್ಲೊಂದು ದೇವರನ್ನು ಸಾಲಾಗಿ ಓರಣಗೊಳಿಸಿ ಯಡಿಗ್ಯನಿಂದ ಪೂಜೆಮಾಡಿಸಿ ಹಾಡಿಯ ಸಮಸ್ತರ ಪರವಾಗಿ ಹಾಡಿಯ ಎಲ್ಲ ಕುಟುಂಬದ ದೈವಗಳಿಗೂ ಒಟ್ಟಿಗೆ ಎಡೆ ಸಲ್ಲಿಸಲಾಗು ವುದು.[60]

ಪೂಜೆ ಪುನಸ್ಕಾರಗಳು ಮುಗಿದ ಮೇಲೆ ಸಮವಸ್ತ್ರಧಾರಿಗಳು ಆ ಬಯಲಿನಲ್ಲಿ ನೃತ್ಯ ಪ್ರದರ್ಶನ ನೀಡುವರು. ಡೊಳ್ಳಿನ ಸದ್ದಿಗನುಗುಣವಾಗಿ ಹೆಜ್ಜೆ ಇಕ್ಕುತ್ತಾ ವಿವಿಧ ಹಾವಭಾವಗಳಿಂದ ಕುಣಿಯುವ ಆ ದೃಶ್ಯ ರಮಣೀಯವಾಗಿರುತ್ತದೆ. ಅದೊಂದು ಮೋಜಿನ ಕುಣಿತ.

ಕೊನೆಯದಾಗಿ, ಎಡೆಯ ಸ್ವಲ್ಪ ಭಾಗವನ್ನು ವಿಧ್ಯುಕ್ತರೀತಿಯಲ್ಲಿ ಗಂಗೆಯಲ್ಲಿ ತೇಲಿಬಿಟ್ಟು ಮಿಕ್ಕವನ್ನು ಮಕ್ಕಳು ಮರಿಗಳಿಗೆ ತಿನ್ನಲು ವ್ಯವಸ್ಥೆಗೊಳಿಸುತ್ತಾರೆ– ತಿಂಡಿಪೋತಗಳ ನಡುವೆ ಒಂದು ಸ್ಪರ್ಧೆಯೇ ಜರುಗುತ್ತದೆ: ಒಬ್ಬ ವ್ಯಕ್ತಿ ಎಡೆ ಪದಾರ್ಥಗಳನ್ನು ಗಂಗಳದಲ್ಲಿ ತುಂಬಿಸಿ ತನ್ನ ತಲೆಮೇಲೆ ಹೊತ್ತು ನಿಲ್ಲುತ್ತಾನೆ. ಮಕ್ಕಳು ಆತನ ಎತ್ತರಕ್ಕೆ ಜಿಗಿದು ಸೆಣಸಾಡಿ ಆ ಪದಾರ್ಥಗಳನ್ನು ತಿನ್ನುವ ದೃಶ್ಯ ವಿನೋದಪೂರ್ಣವಾಗಿರುತ್ತದೆ.

ಪುಗಡಿ ಹಾಕುವುದು: ದಸರೆಯ ಪ್ರಯುಕ್ತ ಮನರಂಜನೆಗಾಗಿ ಏರ್ಪಡುವ ಒಂದು ಧಾರ್ಮಿಕ ನೃತ್ಯ.[61] ಸುಮಾರು ಹತ್ತು ಮಂದಿ ಹೆಂಗಸರು ಮತ್ತು ಹತ್ತು ಮಂದಿ ಗಂಡಸರು[62] ಸಮವಸ್ತ್ರ ಧರಿಸಿ ಗೋಲಾಕಾರವಲ್ಲಿ ನಿಂತು ಡೊಳ್ಳಿನ ಸದ್ದು ತಾಳದ ಗತ್ತು ಕೊಳಲಿನನಾದಕ್ಕನುಸಾರವಾಗಿ ಚಪ್ಪಾಳೆ ತಟ್ಟುತ್ತಾ ಹೆಜ್ಜೆ ಇಕ್ಕುತ್ತಾ ವಿವಿಧ ಹಾವಭಾವಗಳೊಂದಿಗೆ ಅಭಿನಯಪೂರ್ವಕವಾಗಿ ನರ್ತಿಸುವುದನ್ನು 'ಪುಗಡಿ ಹಾಕುವುದು' ಎಂದು ಕರೆಯುತ್ತಾರೆ. ದಸರಾ ಹಬ್ಬದ ಎಲ್ಲ ದಿನಗಳಲ್ಲೂ ಹಾಡಿಯ ಮಹಿಳೆಯರು ಪುಗಡಿಯಾಡುವರು.

ವಿಶೇಷ ಸಂದರ್ಭಗಳಲ್ಲಿ ಕಚ್ಛಾಗಾಳಿಗರ ಹಾಡಿಯ ಸುತ್ತಿನ ಗ್ರಾಮಸ್ಥರು[63] ಈ ಬುಡಕಟ್ಟು ಜನಾಂಗದ ದೈವಗಳಿಗೆ ಪುಗಡಿಹಾಕಿಸುವುದಾಗಿ ಹರಕೆ ಹೊತ್ತುಕೊಂಡಿದ್ದರೆ ಅವರ ಆಹ್ವಾನದ ಮೇರೆಗೆ ಕಚ್ಛಾಗಾಳಿಗರು ಪುಗಡಿ ಹಾಕಲು ಹೋಗುವುದುಂಟು.

ಗ್ರಾಮಸ್ಥರು ಪುಗಡಿಯಾಡುವವರನ್ನು ಸಕಲ ಮರ್ಯಾದೆಗಳೊಡನೆ ಹಾಡಿಯಿಂದ ಕರೆದುಕೊಂಡು ಹೋಗುವ ಸಂಪ್ರದಾಯವಿದೆ. ನಿಶ್ಚಿತ ದಿನದಂದು ಗ್ರಾಮದ ಮುಖ್ಯರು ಪೂಜಾ ಸಾಮಗ್ರಿಗಳೊಡನೆ ಹಾಡಿಯ ಹೆಬ್ಬಾಗಿಲಲ್ಲಿ ಪುಗಡಿಯಾಡುವವರ ಆಗಮನಾಕಾಂಕ್ಷಿಗಳಾಗಿ ನಿಂತು ವಿಧ್ಯುಕ್ತವಾಗಿ ಅವರನ್ನು ಇದಿರುಗೊಳ್ಳುವರು.

ಸುಮಾರು ಇಪ್ಪತ್ತು ಮಂದಿ ಪುಗಡಿಯಾಡುವ ಸಮವಸ್ತ್ರಧಾರಿಗಳು[64] ತಮ್ಮ ಹಾಡಿ ದೇವರ[65] ಸಮೇತ ಗ್ರಾಮಕ್ಕೆ ಹೊರಡುತ್ತಾರೆ. ಎರಡೂ ಕಡೆಯವರು ಒಂದೆಡೆ ಸಂಧಿಸಿದಾಗ ಪರಸ್ಪರರು ಹಣೆಗೆ ಅಬಿಲ್‌ಗುಲಾಲ್[66] ಹಚ್ಚಿಕೊಳ್ಳುವರು. ಪುಗಡಿಯಾಡುವ ಪುರುಷರನ್ನು ಗ್ರಾಮದ ಪುರುಷರೂ ಪುಗಡಿಯಾಡುವ ಮಹಿಳೆಯರನ್ನು ಗ್ರಾಮದ ಮಹಿಳೆಯರೇ ಇದಿರುಗೊಳ್ಳುವುದು ಕ್ರಮ.

ಎರಡೂ ಬಣದವರು ಒಟ್ಟಾಗಿ ಹರಕೆ ಹೊತ್ತುಕೊಂಡವರ ಮನೆಗೆ ಮೆರವಣಿಗೆಯಲ್ಲಿ ಬರುತ್ತಾರೆ. ಅಲ್ಲಿ ಹಾಡಿಯ ಪುರುಷರು ಮತ್ತು ಮಹಿಳೆಯರು ನಾನಾಮೂಲಿ ಸಿದ್ಧತೆಗಳೊಡನೆ ಸಾಂಪ್ರದಾಯಿಕವಾಗಿ ಪುಗಡಿ ಹಾಕುವರು. ಕಾರ್ಯಕ್ರಮ ಮುಗಿದ ಮೇಲೆ ಗ್ರಾಮಸ್ಥರು ಪುಗಡಿಯಾಡುವವರನ್ನು ಅದೇ ಗೌರವದಿಂದ ಹಾಡಿಗೆ ಬೀಳ್ಕೊಡುತ್ತಾರೆ.

ಗಾಳಿ: ಇವರಿಗೆ ಮಾಟಮಂತ್ರಗಳಲ್ಲಿ ಅಪಾರ ನಂಬುಗೆ ಇರುವುದಾದರೂ ದೈವ ಪಿಶಾಚಿಗಳ[67] ಬಗ್ಗೆ ಭಯವಿಲ್ಲದಿರುವುದು ಸೋಜಿಗ. ಆದರೆ ಹಾಡಿಯಲ್ಲಿ ಯಾರೇ ಅಸ್ವಸ್ಥಗೊಂಡರೂ ನಿಮಿತ್ಯ ನೋಡಿಸಲು ಗ್ರಾಮದ ಜೋಯಿಸರ ಬಳಿಗೂ, 'ಗಾಳಿ'ಯನ್ನು ತೊಲಗಿಸಲು ಗ್ರಾಮದ 'ಗಣಮಗ'ನ ಬಳಿಗೂ ಓಡುತ್ತಾರೆ.

ಸತ್ತ ವ್ಯಕ್ತಿ 'ಗಾಳಿ'ಯಾಗಿ ಬಂದು ತಾನು ಬದುಕಿದ್ದಾಗ ಪ್ರೀತಿಸುತ್ತಿದ್ದವರ ಮೈದುಂಬುವುದಾಗಿಯೂ ಹೀಗೆ ಮೈದುಂಬಿದ 'ಗಾಳಿ' ಹಾಡಿ ಜನರ ಕಷ್ಟನಷ್ಟಗಳಿಗೆ, ತೊಂದರೆ–ನೋವುಗಳಿಗೆ ಪರಿಹಾರ ಸೂಚಿಸುವುದಾಗಿಯೂ ಹೇಳುತ್ತಾರೆ.

ಅನಿಷ್ಟ ಗಾಳಿ ಮೈಗೆ ಅಂಟಿಕೊಂಡು ಪೀಡಿಸಲಾರಂಭಿಸಿದರೆ ತಾವು ನೆಲೆಸುವ ಗ್ರಾಮದ ಮಾರಿಯಮ್ಮನ ಕೈಗೆ ಅವನ್ನು ಸಿಲುಕಿಸಿ ಪೀಡೆಯಿಂದ ಪಾರಾಗಲು ಯತ್ನಿಸುತ್ತಾರೆ. ಸಾಮಾನ್ಯವಾಗಿ, ಅನಿಷ್ಟಗಾಳಿಗೆ ತುತ್ತಾದವರನ್ನು ಮಾರಿಯಮ್ಮನ ಮುಂದೆ ಕುಳ್ಳಿರಿಸಿ ಮಾರಿಯ ಹಿಂಸಾ ಬಂಧನಕ್ಕೊಳಪಡಿಸಿ ಆ ಗಾಳಿಯನ್ನು ಓಡಿಸಲು ಕ್ರಮಕೈಗೊಳ್ಳಲಾಗುವುದು. ಅದಕ್ಕಾಗಿಯೇ ಮಾರಿಯಮ್ಮನಿಗೆ ಯಥೇಚ್ಛವಾಗಿ ಕಾಣಿಕೆ ಸಲ್ಲಿಸುವುದು ರೂಢಿಯಾಗಿದೆ.

ವೈದ್ಯ: ಈ ಬುಡಕಟ್ಟು ಜನಾಂಗದವರು ತಮ್ಮ ಕಾಯಿಲೆ ಕಸಾಯಿಲೆಗಳಿಗೆ ಪರಂಪರಾನುಗತವಾಗಿ ಬಳಕೆಯಲ್ಲಿರುವ ಮನೆವೈದ್ಯ, ನಾಟಿವೈದ್ಯಗಳಿಗೇ ಮೊರೆ ಹೋಗುತ್ತಾರೇ ಹೊರತು ಸಮೀಪದ ಆಸ್ಪತ್ರೆಗಳಿಗೆ ಹೋಗುವವರಲ್ಲ. ಸಾಮಾನ್ಯವಾಗಿ ಮನೆವೈದ್ಯ, ನಾಟಿವೈದ್ಯಗಳಿಂದ ಹತೋಟಿಗೆ ಬಾರದ ತೀವ್ರ ಸ್ವರೂಪದ ರೋಗಗಳಿಗೆ ಇವರು ಯಾವ ಔಷಧವನ್ನೂ ಮಾಡುವುದಿಲ್ಲ. ಸಾಧಾರಣ ಸ್ವರೂಪದ ಕಾಯಿಲೆಗಳನ್ನು ಉಪೇಕ್ಷಿಸುವರಾದರೂ ಕೆಲವು ಸಂದರ್ಭಗಳಲ್ಲಿ ಕೆಲವು ಮದ್ದುಗಳನ್ನು ರೋಗ ನಿರೋಧಕಗಳಾಗಿ ಬಳಸುತ್ತಾರೆ. ಇಲ್ಲಿ ಕೆಲವನ್ನು ಪಟ್ಟಿಮಾಡಿದೆ:

1. 'ಸಾಪ್‌ಸಿಂದಿ' ಎಂಬ ಕಹಿಬೇರನ್ನು ನೀರಿನಲ್ಲಿ ಅರೆದು ಅದರ ರಸವನ್ನು ಕುಡಿಸುವುದರಿಂದ ಜ್ವರ ಮಾಯವಾಗುವುದು. 2. ಮೆಂತೆ ಹುರಿದು ನುಣ್ಣಗೆ ಅರೆದು ಮಜ್ಜಿಗೆಯಲ್ಲಿ ಸೇರಿಸಿ ಕುಡಿಸಿದರೆ ಭೇದಿ ಕಡಿಮೆಯಾಗುವುದು. 3. ಬಜೆಯನ್ನು ನೀರಿನಲ್ಲಿ ಅರೆದು ರಸವನ್ನು ನೆಕ್ಕಿದರೆ ಹೊಟ್ಟೇನೋವು ನಿಂತುಹೋಗುವುದು. 4. ಶುಂಠಿಯನ್ನು ನೀರಿನಲ್ಲಿ ಅರೆದು ಹಣೆಗೆ ಲೇಪಿಸಿದರೆ ತಲೆನೋವು ನಿವಾರಣೆಯಾಗುವುದು. 5. ಎಕ್ಕೆ ಗಿಡದ ಹಾಲು ಮತ್ತು ಸ್ವಲ್ಪ ಪ್ರಮಾಣದಲ್ಲಿ ನೀಲಗಿರಿ ಎಣ್ಣೆಯನ್ನು ಹಲ್ಲುಗಳಿಗೆ ಸವರಿದರೆ ಹಲ್ಲುನೋವು ಗುಣವಾಗುವುದು. 6. ಸಂಪೂರ್ಣ ಸುಧಾರಣೆ ಕಾಣುವವರೆಗೂ ಬಿಸಿನೀರಿನ ಶಾಖ ಕೊಡುವುದರಿಂದ ಎದೆನೋವನ್ನು ಗುಣಪಡಿಸಿಕೊಳ್ಳಬಹುದು. 7. ಎಳ್ಳೆಣ್ಣೆ ಕಾಯಿಸಿ ಒಂದೊಂದೇ ಹನಿ ಎಣ್ಣೆಯನ್ನು ಕಿವಿಗೆ ಬಿಟ್ಟುಕೊಂಡರೆ ಕಿವಿನೋವು ದೂರಾಗುವುದು. 8. ಸಾಸಿವೆ ಕಾಳನ್ನು ನೀರಿನಲ್ಲಿ ಅರೆದು ಲೇಪಿಸಿದರೆ ಗಂಟಲುನೋವು ಸುಧಾರಿಸುವುದು. 9 ಕಣ್ಣುನೋವಿಗೆ ಎದೆಹಾಲೇ ಮದ್ದು.

ಪಶುವೈದ್ಯ: ಎಮ್ಮೆಗಳಿಗೆ ತೀವ್ರ ಸ್ವರೂಪದ ಇಲ್ಲವೆ ತೀರ ಸಾಧಾರಣ ಸ್ವರೂಪದ ರೋಗ ಉಂಟಾದರೂ ಇವರು ಸೂಕ್ತಮದ್ದು ಮಾಡುವುದು ವಿರಳ; ಉಪೇಕ್ಷಿಸುವುದೇ ಹೆಚ್ಚು. ಮುಖ್ಯವಾಗಿ, ಒಂದು ಕಾಲದಲ್ಲಿ ಇದ್ದಿರಬಹುದಾದ ಪರಂಪರಾಗತ ರೋಗ ನಿರೋಧಕ ವಸ್ತುಗಳ ಬಳಕೆ ಈಗ ನಿಂತು ಹೋಗಿರುವುದರಿಂದ ಹಾಗೂ ಅವುಗಳ ಪರಿಜ್ಞಾನ ಇವರಿಗೆ ಇಲ್ಲದಿರುವುದರಿಂದ ಅದಕ್ಕಾಗಿ ತಲೆಕೆಡಿಸಿಕೊಳ್ಳುವ ಜನ ಇವರಲ್ಲ. ಆಶ್ಚರ್ಯದ ಸಂಗತಿಯೆಂದರೆ ಇವರ ಎಮ್ಮೆಗಳಿಗೆ ರೋಗ ಬಾಧಿಸುವುದೇ ಇಲ್ಲವಂತೆ. ಅದಕ್ಕೆ ಮುಖ್ಯಕಾರಣವೆಂದರೆ ಇವರ ಎಮ್ಮೆಗಳು ಬೇರೆ ಬೇರೆ ಋತುಮಾನಗಳಲ್ಲಿ ಬೇರೆ ಬೇರೆ ಹುಲ್ಲುಗಾವಲುಗಳಲ್ಲಿ ಮೇವು ತಿನ್ನುವುದು.

ವಿಪರೀತ ಮಳೆ ಸುರಿಯುವ ಕಾಲದಲ್ಲಿ ಮತ್ತು ಚಳಿಗಾಲದ ದಿನಗಳಲ್ಲಿ ಎಮ್ಮೆಗಳಿಗೆ ತಂಡಿ ತಗಲುವುದನ್ನು ತಡೆಗಟ್ಟಲು ಅವುಗಳು ಮಲಗುವ ಜಾಗ ಅಥವಾ ಆವರಣದ ಸುತ್ತಲೂ ಬೆಚ್ಚಗಿರುವಂತೆ ಉರುವಲು ಹೊತ್ತಿಸಿಡಲಾಗುವುದು

ಇವರಲ್ಲಿ ಬಳಕೆಯಲ್ಲಿರುವ ಒಂದೇ ಒಂದು ಮದ್ದೆಂದರೆ ಎಮ್ಮೆಕರುಗಳ ಹೊಟ್ಟೆ ಹುಳುಗಳನ್ನು[68] ನಿವಾರಿಸಲು ಉಪಯೋಗಿಸುವಂಥದು–'ನಸುಗುನಿ ಕಾಯಿ'ಯ ಮೇಲಿನ 'ಸುಂಕ'ವನ್ನು ಹೆರೆದು ಬಿಸಿ ನೀರಿನಲ್ಲಿ ಅಥವಾ ಬಿಸಿ ಹಾಲಿನಲ್ಲಿ ಕಲಸಿ ಕುಡಿಸುತ್ತಾರೆ. ಕಡಿತ ಹೆಚ್ಚಿದ್ದರೆ ಚೆಂಡು ಹೂವಿನ ಸೊಪ್ಪಿನಿಂದ ಮೈಯುಜ್ಜುತ್ತಾರೆ.

ಇತ್ತೀಚಿನ ದಿನಗಳಲ್ಲಿ ಎಮ್ಮೆಗಳಿಗೆ ಗಂಟಲುರೋಗ, ಚಪ್ಪೆರೋಗ ಮುಂತಾದ ಕುತ್ತುಗಳು ಬರುವುದನ್ನು ಗುರುತಿಸಿರುವರಾದರೂ ಆ ರೋಗಗಳನ್ನು ನಿವಾರಿಸುವಂಥ ಮದ್ದುಗಳು ಮಾತ್ರ

ಇನ್ನೂ ಶೋಧಿತವಾಗಿಲ್ಲ. ಆ ನಿಟ್ಟಿನಲ್ಲಿ ಅವರು ಯೋಚಿಸುವುದೂ ಇಲ್ಲವೆಂದು ತೋರುತ್ತದೆ. ಕಾರಣ ಇಂಥ ರೋಗಗಳಿಗೆ ತುತ್ತಾದ ಎಮ್ಮೆಗಳು ಖಂಡಿತವಾಗಿಯೂ ಬದುಕುವುದಿಲ್ಲವೆಂಬ ನಿಲುವು ತಳೆದ ಜನ ಅವರು.

ಈಗೀಗ ಎಮ್ಮೆಗಳಿಗೆ ರೋಗ ಉಲ್ಬಣಿಸಿದಂತೆ ಕಂಡಾಗ ಮಾತ್ರ ಆಧುನಿಕ ವೈದ್ಯ ಪದ್ಧತಿಗೆ ಮೊರೆ ಹೋಗುವುದನ್ನು ರೂಢಿಸಿಕೊಂಡಿದ್ದಾರೆ.

ಹಚ್ಚೆ : ಈ ಬುಡಕಟ್ಟು ಜನಾಂಗದಲ್ಲಿ ಹಚ್ಚೆ ಹೊಯ್ಯಿಸಿಕೊಳ್ಳುವ ಸಂಪ್ರದಾಯವಿದೆ. ಹೆಚ್ಚಾಗಿ ಸ್ತ್ರೀಯರು (ಕಡ್ಡಾಯವೆಂದು ತಿಳಿದಿರುವಂತೆ ಕಾಣುತ್ತದೆ) ಹೊಯ್ಯಿಸಿಕೊಳ್ಳುತ್ತಾರೆ. ಪ್ರಪಂಚವನ್ನೇ ಸುತ್ತುವ ಸ್ವಭಾವದವರಾದ ಕಿಳ್ಳೇಕ್ಯಾತರು ಕಚ್ಚಾ ಗೌಳಿಗರ ನೆಲೆಗಳಿಗೂ ಆಗಾಗ ಭೇಟಿಕೊಟ್ಟು ತಮ್ಮ ಕಸಬನ್ನು ಪ್ರದರ್ಶಿಸುತ್ತಾರೆ. ಹಣೆ, ಗಲ್ಲ ಮತ್ತು ತೋಳಿನ ಭಾಗಗಳಿಗೆ ಮಾತ್ರ ಹಚ್ಚೆ ಚುಚ್ಚಿಸಿಕೊಳ್ಳುವುದು ಸಾಮಾನ್ಯ.

ಸಾಮಾಜಿಕ ವ್ಯವಸ್ಥೆ : ಈ ಬುಡಕಟ್ಟಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಟ್ಟೆಗೌಡ ಮತ್ತು ಹಾಡಿಯ ಯಜಮಾನ–ಈ ಇಬ್ಬರು ಪ್ರಭಾವಶಾಲಿ ವ್ಯಕ್ತಿಗಳು. ಒಂದೊಂದು ಹಾಡಿಗೂ ಒಬ್ಬೊಬ್ಬ ಯಜಮಾನ[69] ಏಳು ಹಾಡಿಗಳ ವ್ಯಾಪ್ತಿಗೆ ಒಬ್ಬ ಕಟ್ಟೆಗೌಡನನ್ನು ನೇಮಕ ಮಾಡಿರಲಾಗುತ್ತದೆ. ಈ ಹುದ್ದೆಗಳು ಅನುವಂಶಿಕವಾದವು.

ಬುಡಕಟ್ಟಿನ ಮುಖಂಡನನ್ನು ಕಟ್ಟೆಗೌಡ ಎಂದು ಸಂಬೋಧಿಸುವುದರಿಂದ ಇವರಲ್ಲೂ ಕಟ್ಟೇಮನೆಗಳು[70] ಅಸ್ತಿತ್ವದಲ್ಲಿದ್ದವು ಎಂದು ತಿಳಿಯುತ್ತದೆ.

ಸದ್ಯ ನಾಲ್ಕಾರು ತಾತ್ಕಾಲಿಕ ನೆಲೆಗಳ ನಡುವೆ ಹೆಚ್ಚು ಖಾಯಂ ಆಗಿ ವಾಸಿಸುವ ಬುಡಕಟ್ಟಿನ ಹಿರಿಯನೊಬ್ಬನನ್ನು ಕಟ್ಟೆಗೌಡ ಎಂದು ಗೌರವಿಸುವುದಾಗಿ ತಿಳಿದುಬಂದಿದೆ. ಕಟ್ಟೆಗೌಡನನ್ನು ಅವನ ವಯಸ್ಸಿಗನುಸಾರವಾಗಿ ಗೌರವದಿಂದ ಅಜ್ಜ, ಅಣ್ಣ, ಮಾವ ಹೀಗೆ ಮುಂತಾಗಿ ಸಂಬೋಧಿಸುವುದುಂಟು. ಕೆಲವೆಡೆಗಳಲ್ಲಿ ಅವನನ್ನು 'ಬುದ್ಧಿವಂತ' ಎಂದೂ ಕರೆಯುವುದಾಗಿ ಹೇಳುತ್ತಾರೆ. ಬುಡಕಟ್ಟಿನ ಸಾಮಾಜಿಕ ವ್ಯವಹಾರಗಳನ್ನು ಅತ್ಯಂತ ಕೌಶಲದಿಂದ ಅವನು ನಿರ್ವಹಿಸುವುದರಿಂದ ಅವನಿಗೆ ಆ ಹೆಸರು ಬಂದಿದೆ.

ಹಾಡಿಯಲ್ಲಿ ಸಂಭವಿಸುವ ವಾದ ವಿವಾದಗಳನ್ನು, ಘರ್ಷಣೆಗಳನ್ನು ತೊಲಗಿಸಲು ಹಾಡಿಯ ಯಜಮಾನ ಅಶಕ್ತನಾದಾಗ ಕಟ್ಟೆಗೌಡ ಆ ಕೆಲಸವನ್ನು ನಿರ್ವಹಿಸುತ್ತಾನೆ. ಬುಡಕಟ್ಟಿನ ಜನರ ನಡುವೆ ತೀವ್ರ ಸ್ವರೂಪದ ಭಿನ್ನಾಭಿಪ್ರಾಯ, ವೈಷಮ್ಯಗಳಿದ್ದರೆ ಅವನ್ನೆಲ್ಲಾ ಪರಿಹರಿಸುವವನೂ ಅವನೇ. ತಪ್ಪಿತಸ್ಥರಿಗೆ ದಂಡ ವಿಧಿಸುವ ಇಲ್ಲವೆ ಬುಡಕಟ್ಟಿನಿಂದ ಉಚ್ಚಾಟಿಸುವ ಅಧಿಕಾರವೂ ಅವನಿಗಿದೆ.

ಕಟ್ಟೆಗೌಡನ ಅಧಿಕಾರ ವ್ಯಾಪ್ತಿ: ಸುಳ್ಳುಹೇಳಿದವರನ್ನು, ಮೋಸ ವಂಚನೆ ಕೃತ್ಯಗಳಲ್ಲಿ ತೊಡಗಿದ್ದವರನ್ನು, ವ್ಯಭಿಚಾರಿಗಳನ್ನು ಬುಡಕಟ್ಟಿನಿಂದ ಹೊರಗೆ ಹಾಕುವ ಪರಮಾಧಿಕಾರ ಗೌಡನದು. ಗಂಡನು ಹೆಂಡತಿಯನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸಿಸುತ್ತಿದ್ದರೆ ಆವಳು ನಿಜಾಂಶವನ್ನು ಹಾಡಿಯ ಯಜಮಾನ ಇಲ್ಲವೆ ಕಟ್ಟೆಗೌಡರ ಗಮನಕ್ಕೆ ತಂದರೆ ಅಪರಾಧಿಗೆ ಎಚ್ಚರಿಕೆ ಕ್ರಮಗಳನ್ನು ನೀಡಿ ದಂಡ ವಿಧಿಸುವ ಹಕ್ಕು ಕಟ್ಟೆಗೌಡನದು. ಹೆಂಗಸು ಮೊದಲ ಗಂಡನನ್ನು ತಿರಸ್ಕರಿಸಿ ಮರುಮದುವೆ ಮಾಡಿಕೊಳ್ಳುವಾಗ ಕಟ್ಟೆಗೌಡನಿಗೆ ದಂಡ ಸಲ್ಲಿಸಬೇಕು. ಹಬ್ಬಹರಿದಿನಗಳಲ್ಲಿ ಹಾಡಿಯ ಒಂದು ಕುಟುಂಬದ ಸದಸ್ಯರು ಮತ್ತೊಂದು ಕುಟುಂಬದ ಮನೆ ದೇವರ ಪೂಜೆಗೆ ಹೋಗದಿದ್ದರೆ, ದೇವಕಾರ್ಯಕ್ಕೆ ಸಹಕರಿಸದಿದ್ದರೆ ಕಟ್ಟೆಗೌಡ ಅಂಥವರಿಗೆ ದಂಡ ವಿಧಿಸಬಹುದು. ಧಾರ್ಮಿಕ ಕಾರ್ಯಾಚರಣೆಗಳಲ್ಲಿ ಗಂಡಸರು ಜರಿ ಇರುವ ಬಿಳಿಪೇಟ

ಧರಿಸದಿದ್ದರೆ ಅಂಥವರಿಗೂ ದಂಡ ವಿಧಿಸಬಹುದು. ಮಗುವಿನ ನಾಮಕರಣ ಮುಂತಾದ ಸಂದರ್ಭಗಳಲ್ಲಿ ಗಂಡಹೆಂಡಿರು ಪರಸ್ಪರರ ಹೆಸರನ್ನು ಉಚ್ಚರಿಸಲು ನಿರಾಕರಿಸಿದರೆ ಹಾಡಿಯ ಯಜಮಾನ ತಪ್ಪಿದರೆ ಕಟ್ಟೆಗೌಡ ಆ ದಂಪತಿಗಳಿಗೆ ದಂಡ ವಿಧಿಸಬಹುದು.

ರಾಜಿ ಸಂಪ್ರದಾಯ : ಇವರಲ್ಲಿ ಅಪರಾಧ ಪ್ರವೃತ್ತಿ ವಿರಳವೆನಿಸಿದರೂ ಸಣ್ಣ ಪುಟ್ಟ ಕಲಹಗಳು ಇದ್ದೇ ಇವೆ. ಇವರ ಶ್ರೇಷ್ಠ ಹಬ್ಬಗಳಲ್ಲೊಂದಾದ ದಸರಾ ಹಬ್ಬದ ದಿನಗಳಲ್ಲಿ ಬುಡಕಟ್ಟಿನ ಜನರು ತಮ್ಮ ನಡುವೆ ಇರುವ ಎಲ್ಲ ಬಗೆಯ ಮನಸ್ತಾಪಗಳನ್ನೂ ಮರೆತು ಕಾರ್ಯ ಪ್ರವೃತ್ತರಾಗಬೇಕೆಂದು ಕಟ್ಟಳೆ. ತಪ್ಪಿತಸ್ಥರಿಗೆ ಕಟ್ಟೆಗೌಡ ಕಠಿಣ ದಂಡ ವಿಧಿಸುತ್ತಾನೆ.

ದಸರೆಯ ಕೊನೆಯ ದಿನ ಯಾವುದೇ ಸ್ವರೂಪದ ಅಂತಃಕಲಹ, ಘರ್ಷಣೆ, ಸಣ್ಣಪುಟ್ಟ ಅಪರಾಧಗಳ ವಿಚಾರಣೆ ನಡೆಯುತ್ತದೆ. ಹಾಡಿಯ ಯಜಮಾನ ಮತ್ತು ಗುಂಪಿನ ಮುಖಂಡರ ಸಹಕಾರ ಸಲಹೆಗಳಿಗನುಸಾರವಾಗಿ ಕಟ್ಟೆಗೌಡ ನ್ಯಾಯ ತೀರ್ಪನ್ನು ನೀಡುತ್ತಾನೆ.

ನ್ಯಾಯತೀರ್ಮಾನ ನಡೆಸುವುದು: ಕಟ್ಟೆಗೌಡನ ಸಲಹೆಯಂತೆ ಅಪರಾಧಿ ಎನಿಸಿದವನು ತಪ್ಪೊಪ್ಪಿಕೊಂಡು ರಾಜೀ ನ್ಯಾಯಕ್ಕೆ ಸಿದ್ಧನಾಗಬೇಕು. ಅಪರಾಧಿ ಯಾವುದೇ ಸ್ವರೂಪದ ಅಪರಾಧವೆಸಗಿರಲಿ ಕಟ್ಟೆಗೌಡನ ಸೂಚನೆಯಂತೆ ಫಿರ್ಯಾದು ಎನ್ನಿಸಿಕೊಂಡವನು ಆತನಿಗೆ ರಾಜಿಸೂಚಕವಾಗಿ ಮುಂಡಾಸು ಕಟ್ಟಿದರೆ ಅಪರಾಧ ಖುಲಾಸೆಯಾದಂತೆ. ಫಿರ್ಯಾದು ಮುಂಡಾಸು ಕಟ್ಟಿದ ಮೇಲೆ ಅಪರಾಧಿ ಆತನನ್ನು ಎಲ್ಲರ ಸಮ್ಮುಖದಲ್ಲಿ ಬಹಿರಂಗವಾಗಿ ಪ್ರೀತಿಯಿಂದ ಆಲಂಗಿಸಿಕೊಳ್ಳಬೇಕು. ಆಮೇಲೆ ಫಿರ್ಯಾದು ಕೊಟ್ಟವನು ಆ ಅಪರಾಧಿಯನ್ನೂ ಅಷ್ಟೇ ಸ್ನೇಹದಿಂದ ತಬ್ಬಿಕೊಳ್ಳುವುದು ಸಂಪ್ರದಾಯ. ಅವರು ಮೊದಲು ಪರಸ್ಪರ ಭುಜಕ್ಕೆ ಭುಜ ಒತ್ತಿ ಮತ್ತೊಮ್ಮೆ ಅಪ್ಪಿಕೊಂಡು ವಂದನೆ ಸಲ್ಲಿಸುವುದು ಆ ಸಂದರ್ಭದ ನಡೆವಳಿ.

ಕೆಟ್ಟ ಬೈಗುಳ ಬೈದವರಿಗೆ, ಎಕ್ಕಡದಲ್ಲಿ ಹೊಡೆದವರಿಗೆ ಕಟ್ಟೆಗೌಡ ಹೆಚ್ಚು ದಂಡ ವಿಧಿಸುವುದು ಸಹಜ. ಯಾವ ವ್ಯಕ್ತಿ ಕೆಟ್ಟ ಬೈಗುಳಪದಗಳನ್ನು ಪ್ರಯೋಗಿಸಿ ಬೈದಿರುತ್ತಾನೊ ಅವನು ಬೈಯಿಸಿಕೊಂಡವನಿಗೆ ರಾಜೀ ಸೂಚಕವಾಗಿ ಪೇಟ ಕಟ್ಟಿ ಕೈ ಕುಲುಕಬೇಕು–ಹಾಡಿಯ ಯಜಮಾನ ಮತ್ತು ಕಟ್ಟೆಗೌಡರ ಸಮ್ಮುಖದಲ್ಲಿ ಈ ಕ್ರಿಯೆ ಜರುಗುವುದು. ಅಪರಾಧಿ ನಿರಪರಾಧಿ ಇಬ್ಬರೂ ದಂಡ ತೆರುವುದು ನ್ಯಾಯಸಮ್ಮತವಲ್ಲ.

ಯಾವುದೇ ನ್ಯಾಯ ತೀರ್ಮಾನ, ರಾಜೀ ಸಂಪ್ರದಾಯಗಳನ್ನು ಜರುಗಿಸಬೇಕಾದರೆ ಅದಕ್ಕೆ ಮುಂಚೆಯೇ ಫಿರ್ಯಾದು ಸಲ್ಲಿಸುವವ 'ಜಾಮೀನುಹಣ' ಎಂದು ಬುಡಕಟ್ಟಿನ ಯಜಮಾನನಿಗೆ ಕೊಡಬೇಕು. ನ್ಯಾಯ ಇತ್ಯರ್ಥವಾದ ಮೇಲೆ ಕಟ್ಟೆಗೌಡ ಇಬ್ಬರಿಗೂ ಆ ಜಾಮೀನು ಹಣದಲ್ಲಿ ಒಂದೊಂದು ಪಾವಲಿಯನ್ನು ಹಿಂದಿರುಗಿಸುವುದು ಸಂಪ್ರದಾಯ.

ವ್ಯಭಿಚಾರ : ಇವರು ವ್ಯಭಿಚಾರವನ್ನು ಪಾಪವೆಂದು ಪರಿಗಣಿಸುತ್ತಾರೆ. ಕಟ್ಟೆಗೌಡ ಈ ಕೃತ್ಯವೆಸಗಿದ ಸ್ತ್ರೀಗೆ ದಂಡ ವಿಧಿಸುತ್ತಾನೆ.

ಮದುವೆಗೆ ಮುನ್ನ ಹುಡುಗಿ ಬಸಿರಾದರೆ ಹಾಡಿಯ ಯಜಮಾನ ಆಕೆಯ ಬಸಿರಿಗೆ ಕಾರಣನಾದ ವ್ಯಕ್ತಿಯನ್ನು ತೋರಿಸುವಂತೆ ಒತ್ತಾಯಪಡಿಸುತ್ತಾನೆ. ಅನಂತರ ಆ ವ್ಯಕ್ತಿಗೆ ಬಸಿರಾದ ಹುಡುಗಿಯನ್ನು ಮದುವೆಮಾಡಿಕೊಳ್ಳುವಂತೆ ಸೂಚಿಸಿ ಅವನನ್ನು ಒಪ್ಪಿಸುತ್ತಾನೆ. ಒಂದು ವೇಳೆ ಮದುವೆಯಾಗಲು ಒಪ್ಪದಿದ್ದರೆ ಅವನಿಗೆ ಮರಣಾಂತಕ ಶಿಕ್ಷೆ ವಿಧಿಸಲಾಗುವುದು ಇಲ್ಲವೆ ಬುಡಕಟ್ಟಿನಿಂದ ಅವನನ್ನು ಬಹಿಷ್ಕರಿಸಲಾಗುತ್ತದೆ.

ಗಂಡನ ಅನುಮತಿಯಿಲ್ಲದೆ ಹೆಂಡತಿ ಬೇರೆಯ ವ್ಯಕ್ತಿಯನ್ನು ಕೂಡಿದರೆ ಅವಳು ಸಹ ಮರಣಾಂತಕ ಶಿಕ್ಷೆ ಅನುಭವಿಸಬೇಕಾಗುತ್ತದೆ.

ಕಚ್ಚಾಗೌಳಿಗರ ಸಮಾಜದ ಕೆಲವು ವಿಶೇಷ ಆಚಾರ, ವ್ಯವಹಾರಗಳನ್ನು ಇಲ್ಲಿ ಗಮನಿಸಬಹುದು:

1. ಅಣ್ಣನ ಹೆಂಡತಿ ಮೈದುನನ ಹೆಸರು ಹಿಡಿದು ಸಂಬೋಧಿಸಬಾರದು. ಆತನೊಡನೆ ಸಲಿಗೆಯಿಂದಿರದೆ ತುಸು ಭಯದಿಂದಲೇ ವರ್ತಿಸುವುದು ಸ್ವಾಭಾವಿಕ.

2 ಹೆಣ್ಣು ತಾನಾಗಿಯೆ ಗಂಡನನ್ನು ಬಿಟ್ಟುಹೋದರೆ ಅವಳ ವಿರುದ್ಧ ಯಾವ ಕ್ರಮ ವನ್ನೂ ಕೈಗೊಳ್ಳುವುದಿಲ್ಲ.

3. ಸಂಪಾದಿಸಿದ ಅಮೂಲ್ಯ ವಸ್ತುಗಳನ್ನು ಮತ್ತು ಹಣವನ್ನು ವಾಸದ ಗುಡಿಸಲ ಆವರಣದಲ್ಲೇ ಒಂದೆಡೆ ಗುಪ್ತವಾಗಿ ಹೂಳಿಡುತ್ತಾರೆ.

4 ಬಂಜೆ ಎನಿಸಿದವಳನ್ನು ತಿರಸ್ಕಾರ ಭಾವದಿಂದ ಕಾಣುವುದಿಲ್ಲ ಅವಳಿಗೆ ಮಂಗಲ ಕಾರ್ಯಗಳಲ್ಲಿ ಪ್ರವೇಶವಿದೆ. ಅವಳ ಗಂಡ ಒಂದಲ್ಲ ಹತ್ತು ಮದುವೆ ಮಾಡಿಕೊಳ್ಳಬಹುದು.

5. ಕುಟುಂಬ ಜೀವನದಲ್ಲಿ ಏನಾದರೂ ಸಮಸ್ಯೆಗಳು ತಲೆದೋರಿದರೆ ಇಲ್ಲವೆ ಯಾರಿಗಾ ದರೂ ತೀವ್ರವಾಗಿ ದೇಹಾರೋಗ್ಯ ಕೆಟ್ಟಾಗ ಮನೆದೇವರ ಹೆಸರಿನಲ್ಲಿ ಎಮ್ಮೆಯನ್ನು ಸುಳಿದು ಬಿಡುವುದು ಪದ್ಧತಿ. ಮುಂದೆ ಆ ಎಮ್ಮೆಯ ಹಾಲನ್ನು ಏನೇ ಸಂದರ್ಭ ಬಂದರೂ ಆ ಕುಟುಂಬದ ಸದಸ್ಯರ ವಿನಃ ಬೇರಾರೂ ಉಪಯೋಗಿಸುವುದಿಲ್ಲ.

6. ಎಮ್ಮೆಗಳು ತೀರಿಕೊಂಡರೆ ತಮ್ಮ ಗುಂಪಿನ ನಾಲ್ವರು ಸೇರಿ ಹಗ್ಗಹಾಕಿ ಕಾಡಿಗೆ ಅವನ್ನು ಎಳೆದುಬಿಡುತ್ತಾರೆ. ಎಮ್ಮೆ ಚರ್ಮ ಸುಲಿಯುವ ಕಸಬಿನವರಿಗೆ ಎಮ್ಮೆ ಸತ್ತ ಸುದ್ದಿ ಯನ್ನು ಮುದ್ದಾಂ ಹೇಳುವುದಿಲ್ಲ.

7. ಬುಡಕಟ್ಟು ಜನಾಂಗದ ಸಾಮಾಜಿಕ ಧಾರ್ಮಿಕ ಕಾರ್ಯಾಚರಣೆಗಳಲ್ಲಿ ಹಾಡಿಯ ಯಜಮಾನ ಮತ್ತು ಕಟ್ಟೆಗಾಡ, ಇನ್ನು ಕೆಲವು ಬುಡಕಟ್ಟಿನ ಮುಖಂಡರ ಪ್ರಭಾವವೇ ಹೆಚ್ಚು.

8. ಕೌಟುಂಬಿಕ ವ್ಯವಹಾರಗಳನ್ನು ಯಾರು ಚಾಣಾಕ್ಷತೆಯಿಂದ ದಕ್ಷವಾಗಿ ನಿರ್ವಹಿಸು ತ್ತಾರೊ ಅವರು ಕುಟುಂಬದ ಯಜಮಾನರಾಗಿ ನೇಮಕಗೊಳ್ಳುತ್ತಾರೆ. ಕುಟುಂಬದ ಹಿರಿಯ ನಿಗೆ ವಿಶೇಷ ಪಾಲು ಸಲ್ಲುತ್ತದೆ.

9. ಒಮ್ಮೆ ಹೊಲಿಸಿಕೊಂಡು ಮೈಗೆ ಧರಿಸಿದ ಬಟ್ಟೆಯನ್ನು ಮತ್ತೊಮ್ಮೆ ತೆಗೆದು ತೊಳೆ ಯುವ ಅಭ್ಯಾಸ ಕಡಿಮೆ. ಅದು ಹರಿದು ಚಿಂದಿಯಾಗುವವರೆಗೆ ಮೈಮೇಲೇ ಇರುತ್ತದೆ. ಹೊಸ ಬಟ್ಟೆ ಧರಿಸುವ ಹಬ್ಬಗಳಲ್ಲಿ ಬಟ್ಟೆ ಹೊಲಿಸಿಕೊಳ್ಳಲು ಅಸಮರ್ಥರಾದವರು ಹಳೆ ಬಟ್ಟೆ ಯನ್ನೇ 'ಚೌಳಿ'ನಿಂದ ತೊಳೆದು ಅದನ್ನೇ ಧರಿಸಿಕೊಳ್ಳುವರು.

10. ಸ್ನಾನಮಾಡುವುದು ಬಹಳ ಅಪರೂಪ. ಮೈಯುಜ್ಜಲು ಕಲ್ಲು ಬಳಸುತ್ತಾರೆ. ತಣ್ಣೀರು ಬಿಸಿನೀರು ಎರಡನ್ನೂ ಸ್ನಾನಕ್ಕೆ ಉಪಯೋಗಿಸುತ್ತಾರೆ.

11. ಕಳ್ಳಿಕೊನೆ, ಬೇವಿನಕಡ್ಡಿ ಹುಲಿಕಡ್ಡಿಗಳಿಂದ ಹಲ್ಲುಜ್ಜುತ್ತಾರೆ. ಬಹುಮಂದಿ ಹಲ್ಲಿಗೆ ಹಲ್ಲಿಟ್ಟು, ಕಾಚು ಹಾಕುವುದನ್ನು ರೂಢಿಸಿಕೊಂಡಿದ್ದಾರೆ.

12. ಮುಂಜಾನೆ ಎದ್ದ ಗಳಿಗೆಯಲ್ಲಿ ಮುಖ ತೊಳೆದಾದ ಮೇಲೆ ಸೂರ್ಯದರ್ಶನ ಗೈದು ಅವನಿಗೆ ಸಾಷ್ಟಾಂಗ ವಂದನೆ ಸಲ್ಲಿಸುವುದು ನಿತ್ಯಕರ್ಮ.

13. ಆಷಾಢಮಾಸ ಮತ್ತು ಹುಣ್ಣಿಮೆ ದಿನಗಳಲ್ಲಿ ಮನೆಕಟ್ಟುವುದು, ಮದುವೆ ಮುಂತಾದ ಶುಭಕಾರ್ಯಗಳನ್ನು ನಿರ್ವಹಿಸಲಾಗುವುದಿಲ್ಲ.

ಸಾಮಾಜಿಕ ಸ್ಥಾನಮಾನ : ಸಾಮಾಜಿಕವಾಗಿ ಈ ಬುಡಕಟ್ಟು ಜನಾಂಗದವರು ಮಾದಿಗರು, ಹೊಲೆಯರು, ಬಗ್ಗರು ಮುಂತಾದ ಜನಾಂಗಗಳಿಗಿಂತ ಉತ್ತಮರೆಂದು ಪರಿಗಣಿಸಲ್ಪಟ್ಟಿದ್ದಾರೆ. ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣ ಜಾತಿಗಳಿಗಿಂತ ಕೀಳು. ಇವರ ನೆರೆಹೊರೆಯ ಗ್ರಾಮದ ಜನರು ಇವರನ್ನು ಅಸ್ಪೃಶ್ಯರೆಂದು ಭಾವಿಸುವುದಿಲ್ಲ. ಆದರೆ ಗ್ರಾಮದ ಜನರು ಅಸ್ಪೃಶ್ಯರೆಂದು ಪರಿಗಣಿಸುವ ಮಾದಿಗರು ಮತ್ತು ಹೊಲೆಯರನ್ನು ಇವರೂ ಹಾಡಿಯ ಒಳಗೆ ಸೇರಿಸುವುದಿಲ್ಲ.[71] ಅದೇ ರೀತಿಯಲ್ಲಿ ಕ್ರೈಸ್ತ ಮತ್ತು ಮುಸ್ಲಿಂ ಜನಾಂಗದವರನ್ನು ದೂರವಿಡುತ್ತಾರೆ ಬ್ರಾಹ್ಮಣರಿಗೆ ಮಾತ್ರ ಇವರ ವಾಸದ ಗುಡಿಸಲೊಳಗೆ ಪ್ರವೇಶಾರ್ಹತೆ ಇದೆ. ಒಕ್ಕಲಿಗರು ವೀರಶೈವರು ಇವರ ವಾಸದ ಗುಡಿಸಲಿನ ಚಾವಡಿಯನ್ನು ಮಾತ್ರ ಹತ್ತಬಹುದು.

ಕಚ್ಚಾಗೌಳಿಗರು ಆರ್ಥಿಕವಾಗಿ ಸುಧಾರಿಸಿದ ಬುಡಕಟ್ಟು ಜನಾಂಗವಾಗಿದ್ದರೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಅಲೆಮಾರಿ ಬುಡಕಟ್ಟು ಜನಾಂಗವೆನಿಸಿದೆ. ಇವರಲ್ಲಿ ಸಾಕ್ಷರತೆ ಇಲ್ಲದಿರುವುದೇ ದೊಡ್ಡ ಕೊರತೆಯೆನಿಸಿದೆ.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಜೀವನದಲ್ಲಿ ಅಲ್ಪಸ್ವಲ್ಪ ಮಾರ್ಪಾಟುಗಳಾಗಿದ್ದರೂ ಬಹುಪಾಲು ಕಚ್ಚಾಗೌಳಿಗರ ಜೀವನ ಮಟ್ಟ ಸುಧಾರಿಸಿಲ್ಲದಿರುವುದು ಒಗಟಾಗಿಯೇ ಇದೆ. ಸಂಪಾದನೆಯ ಮುಕ್ಕಾಲು ಭಾಗವನ್ನು ಮದ್ಯಪಾನಕ್ಕೇ ಮೀಸಲಿಡುವುದರಿಂದ ಅವರ ಸ್ಥಿತಿಗತಿಗಳು ಸುಧಾರಣೆಗೊಳ್ಳುವುದು ದುಸ್ಸಾಧ್ಯವಾಗಿದೆ.

ಇಂದಿಗೂ ಕಚ್ಚಾಗೌಳಿಗರು ಕಾಡುಗಳ ನಡುವೆ ನದೀ ದಂಡೆಗಳ ಸಮೀಪದಲ್ಲೇ ವಾಸಿಸುತ್ತಿದ್ದಾರೆ. ಅವರು ಅವಲಂಬಿಸಿರುವ ವೃತ್ತಿಯ ಹಿನ್ನೆಲೆಯಲ್ಲಿ ಅದು ಅನಿವಾರ್ಯವಾಗಿದೆ. ಕರ್ನಾಟಕಕ್ಕೆ ಬಂದಂದಿನಿಂದ ತೊಡಗಿ ಇಂದಿನವರೆಗಿನ ಅವರ ಸಾಂಸ್ಕೃತಿಕ ಇತಿಹಾಸವನ್ನು ಪರಿಶೀಲಿಸಿ ನೋಡಿದರೆ ಅವರ ಜೀವನ ಕ್ರಮದಲ್ಲಿ, ಧರ್ಮದಲ್ಲಿ ಗುರುತಿಸಬಹುದಾದಂಥ ಗಮನಾರ್ಹ ಬದಲಾವಣೆಗಳು ಏನೂ ಆಗಿಲ್ಲ. ಕರ್ನಾಟಕ ಸರ್ಕಾರದ ಗುಡ್ಡಗಾಡು ಜನಾಭಿವೃದ್ಧಿಯ ಕಲ್ಯಾಣ ಯೋಜನೆಗಳಾವುವೂ ಅವರ ಜೀವನ ಮಟ್ಟವನ್ನು ಸುಧಾರಿಸಲು ಶಕ್ತವಾಗಿಲ್ಲ. ಪ್ರಾಥಮಿಕ ಹಂತದ ಶಿಕ್ಷಣವೇ ದೊರಕಿಲ್ಲವೆಂದರೆ ಅವರ ಸಾಕ್ಷರತೆಯ ಪ್ರಮಾಣದ ಅಂದಾಜಾಗೀತು. ಸಾಕ್ಷರತೆಯ ಅಗತ್ಯವೇ ಇಲ್ಲವೆಂದು ನಿಷ್ಠುರವಾಗಿ ಪ್ರತಿಕ್ರಿಯಿಸುವ ಜನರೇನೂ ಅವರಲ್ಲಿ ಕಡಿಮೆಯಿಲ್ಲ. ಹೀಗೆ ಅವರು ಭಾವಿಸಿರುವುದು ಅವರ ಮೌಢ್ಯ, ಅಜ್ಞಾನವನ್ನು ಎತ್ತಿ ಹೇಳುತ್ತದೆ.

ಅಡಿಟಿಪ್ಪಣಿಗಳು

*ಮಾಹಿತಿ ಒದಗಿಸಿದವರು : ವಿ. ಶಂಕ್ರಪ್ಪ, ೪೦ವರ್ಷ, ಕಚ್ಚಾಗೌಳಿಗರು, ಚೌಡಿಕಟ್ಟೆ ಹಾಡಿ, ಬೈರಾಪುರ ಗ್ರಾಮ, ಉಂಬಳೆಬೈಲು ಅಂಚೆ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರುಜಿಲ್ಲೆ.

ಬೈರು, ೫೫ವರ್ಷ, ಕಚ್ಚಾಗೌಳಿಗರು, ಸುಲ್ಲೊಳ್ಳಿ, ಉಂಬಳೆಬೈಲುಅಂಚೆ, ನರಸಿಂಹರಾಜಪುರ ತಾಲ್ಲೂಕು.

ಬಾಗೂಬಾಯಿ, ೪೬ ವರ್ಷ, ಕಚ್ಚಾಗೌಳಿಗರು, ಮಾರಿದಿಬ್ಬ, ಉಂಬಳೆಬೈಲು ಅಂಚೆ, ನರಸಿಂಹರಾಜಪುರ ತಾಲ್ಲೂಕು.

ಸಂದರ್ಶನ ನಡೆದುದು ೧೯೭೭ರ ಏಪ್ರಿಲ್‌ನಲ್ಲಿ.

1. ಹಿಂದೆ ಸಾಮಾನ್ಯವಾಗಿ 'ಮಾಡು'ಗಳಿಗೆ ಅಡವಿಯಲ್ಲಿ ಸಿಗುತ್ತಿದ್ದ ಕೆಲವು ಜಾತಿಯ ಒಣಗಿದ ಎಲೆಗಳು, ಬಾಳೆಯ ಹುಲ್ಲನ್ನು ಹೊದಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕಬ್ಬಿನ ಓಲೆ, ಬತ್ತದಹುಲ್ಲು ಮುಂತಾದುವನ್ನು ಮನೆಗಳ ಮಾಡುಗಳ ಹೊದಿಕೆಗಳಾಗಿ ಉಪಯೋಗಿಸುತ್ತಿರುವುದು ಕಂಡುಬಂದಿದೆ. ಗುಡಿಸಲೊಳಗೆ, ವಿಶೇಷವಾಗಿ ಮಳೆಗಾಲದ ದಿನಗಳಲ್ಲಿ, ನುಸಿ, ಸೊಳ್ಳೆ ಕ್ರಿಮಿಕೀಟಾದಿಗಳು ಬರುವುದನ್ನು ನಿವಾರಿಸಲು 'ಮಾಡು'ಗಳಿಗೆ ಯಥೇಚ್ಛವಾಗಿ 'ನೆಲ್ಲಿ ಸೊಪ್ಪು' ಹೊದಿಸುವುದು ವಿಶೇಷ.

2. ಮಕ್ಕಳು ಜೋಕಾಲಿ ಹಗ್ಗಗಳನ್ನು ಕಟ್ಟಿಕೊಂಡು ತೂಗುಯ್ಯಾಲೆ ಆಟವಾಡುತ್ತವೆ.

3. ಹುಲ್ಲಿಗೆ ಗೆದ್ದಲು ಹಿಡಿಯುವುದನ್ನು ತಪ್ಪಿಸಲು ಅದನ್ನು ಚಪ್ಪರದ ಮೇಲೆ ಬಣವೆ ರಚಿಸುವುದಾಗಿ ಹೇಳುತ್ತಾರೆ.

4. ಅಡವಿಯಲ್ಲಿ ಹತ್ತಾರು ಕುಟುಂಬಗಳು ಬೇರೆ ಬೇರೆ ಗುಡಿಸಲುಗಳನ್ನು ಕಟ್ಟಿಕೊಂಡು ಒಂದೇ ಗುಂಪಿನಲ್ಲಿ ವಾಸಿಸುವ ತಾಣಗಳಿಗೆ 'ಹಾಡಿ' ಎಂದು ಕರೆಯುತ್ತಾರೆ. ಒಂದೊಂದು ಹಾಡಿಯಲ್ಲಿ 15ರಿಂದ 40 ಹುಲ್ಲು ಚಾವಣಿಗಳಿರುತ್ತವೆ. ಒಂದು ಹುಲ್ಲು ಚಾವಣಿಗೂ ಇನ್ನೊಂದಕ್ಕೂ ಕನಿಷ್ಟ ಒಂದು ಕಲ್ಲೆಸೆಯುವ ದೂರದ ಅಂತರವಿರುತ್ತದೆ.

5. ಇವರಿಗೆ ಹಳ್ಳಿ ಕ್ಷೌರಿಕರ ಸೇವೆ ಲಭ್ಯವಿಲ್ಲ. ಬುಡಕಟ್ಟಿನವರಲ್ಲೇ ಒಬ್ಬಿಬ್ಬರು ಈ ಕಸಬನ್ನು ಕಲಿತಿರುತ್ತಾರೆ.

6. ಸುಮಾರು ಹದಿನೆಂಟು ಮೊಳದುದ್ದದ ದೊಡ್ಡ ಸೀರೆ.

7. ಕಚ್ಚಾ ಹಾಕುವುದು ಅವರ ವೃತ್ತಿಯ ಹಿನ್ನೆಲೆಯಲ್ಲಿ ಅನಿವಾರ್ಯವೆನಿಸಿದೆ. ಕಾಡು ಪ್ರದೇಶಗಳಲ್ಲೇ ವಾಸಮಾಡುವವರಾದ್ದರಿಂದ ಕಾಡುಮೃಗಗಳಿಂದ ಸಂಭವಿಸಬಹುದಾದ ಪ್ರಾಣಹಾನಿಯಿಂದ ಪಾರಾಗಲು ಹೇಗೆಂದರೆ ಹಾಗೆ ಹತ್ತಿರದಲ್ಲೇ ಸಿಕ್ಕಿದ ಮರಮುಟ್ಟುಗಳನ್ನೊ ಕಲ್ಲುಬಂಡೆಗಳನ್ನೋ ಕ್ಷಿಪ್ರವಾಗಿ ಏರಿ ಕುಳಿತುಕೊಳ್ಳಲು ಕಚ್ಚಾ ಧರಿಸುವಿಕೆಯಿಂದ ಮಾತ್ರ ಸಾಧ್ಯವಾಗುತ್ತದೆ.

8. ಜರಿ ಇರುವ ಬಿಳಿ ಮುಂಡಾಸು; ಕೆಲವೊಮ್ಮೆ ಪಾಣಿ ಪಂಚೆಯನ್ನೇ ರುಮಾಲನ್ನಾಗಿ ಸುತ್ತಿಕೊಳ್ಳುತ್ತಾರೆ.

9. ಮುತ್ತುಗಳಿಂದ ಅಲಂಕೃತವಾಗಿರುತ್ತದೆ.

10. ತೋಳು ಮುಚ್ಚುವ ಭಾಗಗಳಲ್ಲಿ ಮೂರು ಮೂರು ಕೆಂಪನೆಯ ಪಟ್ಟೆ ಬರುವಂತೆ ನಾಲ್ಕಾರು ಬಣ್ಣದ ಬಟ್ಟೆಗಳ ತುಂಡುಗಳನ್ನು ಸೇರಿಸಿ ಹೊಲಿದು ರಚಿಸುವ ರವಿಕೆಗೆ 'ಚೋಳಿ' ಎನ್ನುತ್ತಾರೆ. ಬಗಲಿನ ಜಾಗಕ್ಕೆ ದಪ್ಪನೆಯ ಬಟ್ಟೆಯ ತೇಪೆಯಿರುತ್ತದೆ.

11. ಒಂದು ಬಗೆಯ ಲೋಹದ ಬಳೆ.

12. ಕರ್ನಾಟಕದ ಈ ಬುಡಕಟ್ಟು ಜನಾಂಗದವರಿಗೆ ಆಭರಣಾದಿಗಳನ್ನು ತಯಾರು ಮಾಡಿಕೊಡುವವರು ಕಾರವಾರದ ಎಲ್ಲಾಪುರದ ಅಕ್ಕಸಾಲಿಗರು. ಅವರ ಹೊರತು ಬೇರೆ ಪ್ರದೇಶಗಳಲ್ಲಿ ವಾಸಿಸುವ ಅಕ್ಕಸಾಲಿಗರನ್ನು ಅವರು ನಂಬುವುದಿಲ್ಲ: ಬಹುಶಃ ನೋಡೇ ಇಲ್ಲವೇನೊ!

13. ನೀರು ಬಿದ್ದರೂ ಫಕ್ಕನೆ ಆರಿಹೋಗುವುದಿಲ್ಲ ಎಂಬ ಕಾರಣಕ್ಕಾಗಿ ಬೀಟೆ ಮರದ ಸೀಳುಗಳನ್ನು 'ಪಂಜು'ಗಳಿಗೆ ಬಳಸಿಕೊಳ್ಳಲಾಗುವುದು.

ಗುಡಿಸಲಲ್ಲಿ ಬೆಳಕಿಗೆ ತುಪ್ಪ ಅಥವಾ ಬೆಣ್ಣೆಯ ಹಣತೆ ದೀಪವನ್ನು ಉಪಯೋಗಿಸುತ್ತಾರೆ.

14. ಈಗೀಗ ನಗರ ಪಟ್ಟಣಗಳ ಸಂಪರ್ಕ ಪಡೆದಿರುವ ಇವರು ಎತ್ತಿನ ಗಾಡಿಗಳಲ್ಲಿ ಹಯಿನವನ್ನು ಸಾಗಿಸಿ ತಂದು ಮಾರಿಹೋಗುತ್ತಾರೆ.

15. ಇವರಿಗೆ 'ಸೀಮಂತ'ದ ಕಲ್ಪನೆಯೇ ಇಲ್ಲ.

16. ಕರ್ನಾಟಕಕ್ಕೆ ಬಂದ ಹೊಸತರಲ್ಲಿ ಇವರ ಹೆಂಗಸರಿಗೆ ಬಾಣಂತನದ ಉಪಚಾರ ಗಳಾವುವೂ ನಡೆಯುತ್ತಿರಲಿಲ್ಲ; ತಮ್ಮ ಹೆರಿಗೆಯನ್ನು ತಾವೇ ನಿರ್ವಹಿಸುತ್ತಿದ್ದುದಾಗಿ ಹೇಳಿ ಕೊಳ್ಳುತ್ತಾರೆ.

17. ಉಳಿದೆಲ್ಲ ಜನಾಂಗಗಳಲ್ಲಿನಂತೆ ಹುಟ್ಟಿದ ತಕ್ಷಣ ಬಾಯಿಗೆ ಬಜೆ ಬೆಣ್ಣೆ ಹಾಕುವು ದಾಗಲೀ ಸಿಹಿತಿನ್ನಿಸುವ ಸಂಪ್ರದಾಯವಾಗಲೀ ಇಲ್ಲ.

18. ಪೂಜಾ ಸಂದರ್ಭದಲ್ಲಿ ತೊಟ್ಟಿಲಿಗೆ ಹೂಮುಡಿಸುವುದಿಲ್ಲ.

19. ಇಂಥದೇ ಇನ್ನು ಕೆಲವು ಧಾರ್ಮಿಕ ಸ್ವರೂಪದ ವಿಧಿ, ಉಪಾಸನೆಗಳಲ್ಲಿ ಹೆಸರು ಗಳನ್ನು ಪುನರುಚ್ಚರಿಸುವುದು ಇವರಲ್ಲಿ ಒಂದು ವಿನೋದದ ವಿಷಯವಾಗಿದೆ. ಹೆಸರುಚ್ಚರಿಸಲು ನಿರಾಕರಿಸಿದವರು ಹಾಡಿಯ ಯಜಮಾನನಿಗೆ ಒಂದು ತೆಂಗಿನಕಾಯಿಯನ್ನೂ ಕಟ್ಟೆಗೌಡನಿಗೆ ಕೇಳಿ ದಷ್ಟು ದಂಡವನ್ನೂ ತೆರಬೇಕಾಗುತ್ತದೆ.

20. ಈ ಬುಡಕಟ್ಟು ಜನಾಂಗದವರಿಗೆ ಅಗಸರ ಸೇವೆ ಲಭ್ಯವಿಲ್ಲ.

21. ಹೆಣ್ಣಿನ ಮಾತಿಗೆ ಮೂವರು ಹೋಗುವುದಿಲ್ಲ.

22. ಸರ್ಪ, ಮೊಲ, ಬೆಕ್ಕು, ನಾಯಿ ಮುಂತಾದ ಪ್ರಾಣಿಗಳು ಅಡ್ಡಬಂದರೆ ಕಾರ್ಯ ವನ್ನು ಮುಂದೂಡುತ್ತಾರೆ. ಈಗೀಗ ಹೊರಟ ಹಾದಿಗೆ ಅಡಚಣೆಯುಂಟಾದರೆ ಜೋಯಿಸರನ್ನು ಸಮೀಪಿಸಿ ಅದಕ್ಕೆ ಪರಿಹಾರ ತಿಳಿದುಕೊಳ್ಳಲು ಪ್ರಯತ್ನಿಸುವುದು ಕಂಡುಬರುತ್ತಿದೆ.

23. ಜಾತಕ ಬರೆಸುವ ಗೋಜಿಗೇ ಹೋಗುವುದಿಲ್ಲವಾದ್ದರಿಂದ ಆ ಸಂಬಂಧವಾಗಿ ಯಾವ ಪ್ರಸ್ತಾಪವೂ ನಡೆಯುವುದಿಲ್ಲ. ಆದರೆ ಗಂಡಿಗಿಂತ ಹೆಣ್ಣಿಗೆ ಹೆಚ್ಚು ವಯಸ್ಸಾಗಿರಬಾರದು ಎಂಬುದು ಷರತ್ತು.

24. ಮದುವೆ ಇನ್ನೊಂದು ತಿಂಗಳಿಗೊ ವರ್ಷಕ್ಕೊ (ಅಷಾಢಮಾಸ ಮತ್ತು ಹೋಳಿ ಹುಣ್ಣಿಮೆ ದಿನಗಳನ್ನು ಬಿಟ್ಟು) ಎಂಬುದನ್ನು ಆಗ ನಿರ್ಧರಿಸಿಕೊಳ್ಳಲಾಗುತ್ತದೆ.

25. ಇದು ಇತ್ತೀಚಿನ ದಿನಗಳಲ್ಲಿ ಪ್ರಚುರಕ್ಕೆ ಬಂದ ಸಂಪ್ರದಾಯ.

26. ವಧು ಹಾಡಿ ಎಷ್ಟೇ ದೂರದಲ್ಲಿರಲಿ ಏನೇ ಅಡ್ಡಿ ಆತಂಕಗಳಿರಲಿ ಮದುವೆ ವಧು ಹಾಡಿಯಲ್ಲೇ ನಡೆಯಬೇಕೆಂಬ ಕಟ್ಟಳೆ ಇದೆ.

27. ಕಟ್ಟೆಗೌಡ, ಯಡಿಗ್ಯ, ಲಾಂಬೂರ್—ಈ ಮೂವರಲ್ಲಿ ಒಬ್ಬರು ಪೌರೋಹಿತ್ಯ ವಹಿಸುವರು.

28. ಗಂಡಿನ ಉಡುಗೆತೊಡುಗೆ: ಕಿವಿಗೆ ಮುರ, ಕೊರಳಿಗೆ ಪದಕದಸರ, ಕೈಗೆ ಬೆಳ್ಳಿಬಳೆ, ತಲೆಗೆ ಪೇಟ.

ಹೆಣ್ಣಿನ ಉಡುಗೆತೊಡುಗೆ: ಕಾಪು, ಬುಗುಡಿ, ಕಾಲುಂಗುರ, ಮೂಗುತಿ, ಕಾಕನಬಳೆ ಅಥವಾ ಗಾಜಿನ ಬಳೆ.

ಗಂಡಿನ ಕಡೆಯವರು ಹೆಣ್ಣಿಗೂ ಹೆಣ್ಣಿನ ಮನೆಯವರು ಗಂಡಿಗೂ ಉಡುಗೆಗಳನ್ನು ತರುವುದು ಸಂಪ್ರದಾಯ.

29. ಮದುವೆ ಚಿಹ್ನೆ.

30. ಈ ಬುಡಕಟ್ಟಿನವರಿಗೆ 'ಧಾರೆ'ಯ ಕಲ್ಪನೆಯಿಲ್ಲ. ತೀರ ಸರಳ ವಿಧಿಗಳನ್ನನು ಸರಿಸಿ ಮದುವೆ ಕಾರ್ಯ ಮುಗಿಸುವ ಕ್ರಮಗಳೂ ಇವರಲ್ಲಿ ಜಾರಿಯಲ್ಲಿವೆ—ಗಂಡು ಹೆಣ್ಣುಗಳನ್ನು

ಜೋಡಿಯಾಗಿ ನಿಲ್ಲಿಸಿ ಸೇಸೆ ಇಕ್ಕಿದರೆ ವಿಧ್ಯುಕ್ತವಾಗಿ ಮದುವೆಯಾದಂತೆಯೆ. ಇನ್ನು ಕೆಲವು ಪ್ರದೇಶಗಳಲ್ಲಿ ಪರಸ್ಪರ ಒಪ್ಪಿದ ಗಂಡು ಹೆಣ್ಣುಗಳ ಸೆರಗು ಗಂಟು ಹಾಕಿದರೆ ಅವರ ಸಂಯೋಗ ವಾಯಿತೆಂದು ಪರಿಗಣಿಸಲಾಗುವುದು. ಎರಡೂ ಹೃದಯಗಳ ಸಂಗಮ–ಬಂಧನವನ್ನು ಅದು ಸಂಕೇತಿಸುತ್ತದೆ.

31. ಹೆಣ್ಣು ಗಂಡಿನ ಎಡ ಮಗ್ಗುಲಲ್ಲಿ ಕುಳಿತುಕೊಳ್ಳಬೇಕು.

32. ಎರಡೂ ಹಸ್ತಗಳನ್ನು ಬಿಗಿಯಾಗಿ ಸೇರಿಸಿ ಮುಷ್ಟಿ ಹಿಡಿಯುವುದು.

33. ಕಂಬಳಿಯೊಂದರ ಮೇಲೆ ಅಕ್ಕಿಯಿಂದ ರಚಿಸಿದ ಚಿತ್ತಾರಕ್ಕೆ 'ಹಸೆ' ಎನ್ನುತ್ತಾರೆ.

34. ಅತ್ತಿಮರವಲ್ಲದೆ ಬೇರೆ ಜಾತಿಯ ಹಾಲು ಮರಗಳಿಂದಲೂ ದೇವರು ತರುವುದುಂಟು. ಅತ್ತಿಮರದಿಂದ ದೇವರು ತಂದಿದ್ದರೆ ಮಾತ್ರ ಗಂಡು ತನ್ನ ಹೊಸ ಸಂಗಾತಿಯನ್ನು ಮನೆದುಂಬಿಸಿ ಕೊಂಡ ದಿನವೇ ದೇವರನ್ನು ಕಳುಹಿಸಿ ಬರಬೇಕೆಂಬ ನಿಯಮವಿದೆ. ಆದರೆ ಬೇರೆ ಜಾತಿಯ ಮರಗಳಿಂದ ತಂದಿದ್ದರೆ ಈ ನಿರ್ಬಂಧವಿಲ್ಲ. ಅನುಕೂಲವೆನಿಸಿದ ಯಾವ ದಿನವಾದರೂ ಆ ಕಾರ್ಯವನ್ನು ನೆರವೇರಿಸಬಹುದು. ಅಲ್ಲದೆ ದೇವರನ್ನು ಮರಳಿ ಮರಕ್ಕೆ ಕಳುಹಿಸಿ ಬರುವ ವರೆಗೂ ಹೊಸ ದಂಪತಿಗಳು ಮಾಂಸಾಹಾರ ಉಪಯೋಗಿಸಬಾರದೆಂಬ ನಿಷೇಧವಿದೆ.

35. ಹೆಣ್ಣು ಋತುಮತಿ ಹೊಂದಿರದಿದ್ದರೂ ಗಂಡನ ಗುಡಿಸಲಲ್ಲೇ ವಾಸಮಾಡಬಹುದು.

36. 'ಪ್ರಸ್ತ'ವೆಂದು ಆ ಸಂಬಂಧವಾದ ಯಾವ ಆಚರಣೆಗಳನ್ನೂ ಅನುಸರಿಸುವುದಿಲ್ಲ.

37. ಅದೇ ಸಮಯದಲ್ಲಿ, ಉರಿಯುವ ಕೊಳ್ಳಿಯೊಂದನ್ನು ಗುಡಿಸಲಿನ ಮುಂದೆ ಹಾಕುತ್ತಾರೆ.

38. ಸತ್ತ ವ್ಯಕ್ತಿ ಸ್ತ್ರೀಯಾಗಿದ್ದರೆ ಆಕೆ ಬದುಕಿದ್ದಾಗ ಅವಳನ್ನು ಪ್ರೀತಿಸುತ್ತಿದ್ದವರು ಅವಳ ಕೊರಳು, ಕೈಕಾಲುಗಳಿಗೆ ವಿವಿಧ ಆಭರಣಗಳನ್ನು ತೊಡಿಸುತ್ತಾರೆ.

ಹೆರಿಗೆ ಸಂದರ್ಭದಲ್ಲಿ ತೀರಿಕೊಂಡವರಿಗೆ, ಗರ್ಭಿಣಿಯಾಗಿದ್ದು ಮೃತರಾದವರಿಗೆ, ಮೇಲಿನಂತೆ ಅಲಂಕರಿಸಿ ಚಾವಡಿಯಲ್ಲಿ ಕುಳ್ಳಿರಿಸುವುದಿಲ್ಲ.

39. ಹೆಣಕ್ಕೆ ಎರಡೇ ಹೆಗಲು. 'ತೋಲ' ಇದ್ದರೆ ಮಾತ್ರ ನಾಲ್ಕು ಹೆಗಲು.

40. ಅಲ್ಲಿ ಸೇರಿದವರೆಲ್ಲರೂ ಆ ಕಲ್ಲನ್ನು ಕೈಯಿಂದ ಮುಟ್ಟಿದ ನಂತರವೇ ಅದನ್ನು ಮರದ ಬುಡದಲ್ಲಿ ನೆಡುವುದು.

ಇವರ ಶವಸಂಸ್ಕಾರ ವಿಧಿಗಳು ಬಿಳಿಗಿರಿರಂಗನ ಮಲೆಸೋಲಿಗರ ಶವಸಂಸ್ಕಾರ ಕ್ರಿಯೆಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಸತ್ತ ವ್ಯಕ್ತಿಯ ಆತ್ಮ ಸಂಕೇತವಾಗಿ ಕಲ್ಲೊಂದನ್ನು ಮರದ ತಳದಲ್ಲಿ ಸ್ಥಾಪಿಸಿ ಕೂಳು ನೀರು ಹಾಕುವುದು, ಹಾಲು ನೀರು ಬಿಡುವುದು ಇಬ್ಬರಲ್ಲೂ ಸಾಮಾನ್ಯ.

41. ಸಾವಿನ ಮನೆಯವರು ಈ ಕೆಲಸವನ್ನು ನಿರ್ವಹಿಸುವುದಿಲ್ಲ.

42. ಸುಟ್ಟು ಮೂರು ದಿನಗಳಾದ ಮೇಲೆ ಬೆಂದು ಉಳಿದಿದ್ದ ಮೂಳೆಗಳನ್ನು ಸಂಗ್ರಹಿಸಿ ಪುನಃ ಸುಡಲಾಗುವುದು.

43. ಕೆಲವು ಪ್ರದೇಶಗಳಲ್ಲಿ ದೀಪ ದರ್ಶನವಿಲ್ಲ.

54. ಗುಂಡಿ ತೆಗೆದು ಹೆಣವನ್ನು ಮಣ್ಣು ಮಾಡಿದ ಜನರು ಸಾವಿನ ಮನೆಯಲ್ಲಿ ಉಂಡು ಹೋಗಬೇಕು.

45. ತಾಮ್ರ, ಬೆಳ್ಳಿ, ಬಂಗಾರ–ಈ ಯಾವುದಾದರೊಂದು ಲೋಹವನ್ನು ಗೋಮೂತ್ರಕ್ಕೆ ಅದ್ದಿ ಮಾವಿನ ಎಲೆಯಿಂದ ಸಿಂಪಡಿಸಿದರೆ ಗುಡಿಸಲ ಆವರಣ ಶುದ್ಧವಾದಂತೆಯೆ.

46. ಅಳತೆಯ ಮಾಪನ.

47. ಇವರಿಗೆ ಹಳ್ಳಿಯ ಕ್ಷೌರಿಕರ ಸೇವೆ ಲಭ್ಯವಿಲ್ಲ.

48. ಮೃತನನ್ನು ಸಮಾಧಿ ಮಾಡುವಾಗ ಹೊದಿಸಿದ ವಸ್ತ್ರದ ಚೂರೊಂದನ್ನು ಕತ್ತರಿಸಿಟ್ಟುಕೊಂಡಿರುತ್ತಾರೆ.

49. ಸತ್ತ ವ್ಯಕ್ತಿ ಭೂಮಿಯೊಳಗಿದ್ದಾನೆಂದು ನಂಬಲಾಗುವುದು.

50. ಹೂ, ಭಂಡಾರ, ಕುಂಕುಮ, ಅಕ್ಕಿಕಾಳು, ಹಾಲು, ಮೊಸರು ಕೆಲವು ಭಕ್ಷ್ಯಗಳು ಮುಂತಾದುವನ್ನು ಎಡೆ ಪದಾರ್ಥಗಳೆಂದು ಕರೆಯುತ್ತಾರೆ.

51. ಹಾಡಿ ಮಾರಮ್ಮನಿಗೆ ಆಗಾಗ ಜರುಗುವ ಹಬ್ಬಹರಿದಿನಗಳಲ್ಲಿ ಅಖಂಡ ಸೇವೆ ಸಲ್ಲುತ್ತದೆ.

52. ಡೋಲನ್ನು ಶಿವನೆ ಮರದಿಂದ ತಯಾರಿಸುತ್ತಾರೆ. ಬೇರೆ ಮರಗಳಿಂದ ಮಾಡಿದ ಡೋಲು ಸರಿಯಾದ ನಾದ ಕೊಡುವುದಿಲ್ಲ.

53. ಹಾಡಿಯ ಒಂದು ಕುಟುಂಬದ ಜನ ಮತ್ತೊಂದು ಕುಟುಂಬದ ಮನೆದೇವರ ಪೂಜೆಗೆ ಹೋಗಬೇಬೇಕೆಂಬ ನಿಯಮವಿದೆ. ಈ ನಿರ್ಬಂಧವನ್ನು ಮುರಿದವರು ಹಾಡಿಯ ಯಜಮಾನನಿಗೆ ದಂಡ ಸಲ್ಲಿಸಬೇಕು. ಹಾಡಿಯ ಐಕಮತ್ಯದ ದೃಷ್ಟಿಯಿಂದ ಇದು ಅನಿವಾರ್ಯ.

54. ನೋಡಿ: ಅಂಬಳಿಕೆ ಹಿರಿಯಣ್ಣ: ಮಲೆನಾಡ ಜನಪದ ಸಂಪ್ರದಾಯಗಳು. ಪುಸ್ತಕ ಚಿಲುಮೆ, 1978, ಪು. 124

55. ಈ ಸಂಪ್ರದಾಯ ಅವರ ಸುತ್ತಿನಲ್ಲಿ ವಾಸಿಸುವ ಹಿಂದೂ ಸಮುದಾಯದ ಬೇರೆ ಜನಾಂಗಗಳ ಪ್ರಭಾವದಿಂದ ಜನಿಸಿರುವಂತೆ ತೋರುತ್ತದೆ.

56. ಕಾಲಿಗೆ ಚಪ್ಪಲಿ ತುಳಿಯುವುದಿಲ್ಲ, ಮದ್ಯಪಾನ, ಮಾಂಸ ವರ್ಜ್ಯ.

57. ಮಲೆನಾಡ ಒಕ್ಕಲಿಗರ 'ಅಂಟಿಗೆ ಪಂಟಿಗೆ ಸಂಪ್ರದಾಯ'ದ ಔತಣಕೂಟವನ್ನು ಹೋಲುತ್ತದೆ.

58. ಅಕ್ಕಿರವೆಯ ಪಾಯಿಸಕ್ಕೆ, ಅಕ್ಕಿ ಹಿಟ್ಟಿನ ಸಣ್ಣ ಸಣ್ಣ ಗುಳಿಗೆ ಸೇರಿಸಿ ತಯಾರಿಸುವ ಪಾಯಿಸಕ್ಕೆ 'ಪಳೆ' ಅಥವಾ 'ಆಯಿನ್ ಕಲ್ ಪಾಯಿಸ' ಎಂದು ಕರೆಯುತ್ತಾರೆ.

59. ದೇವರ ಹೆಸರಿನಲ್ಲಿ ಬಿಟ್ಟ ಎಮ್ಮೆಯ ಹಾಲು. ಈ ಎಮ್ಮೆಯ ಹಾಲನ್ನು ಬೇರೆಯವರಿಗೆ ಮಾರುವಂತಿಲ್ಲ. ಮಾರಿದವರ ಪಾಲಿಗೆ ಅನಂತ ಕಷ್ಟಕೋಟಲೆಗಳು ಕಾದಿರುತ್ತವೆ ಎಂದು ನಂಬಲಾಗುವುದು. ಹಬ್ಬ ಹರಿದಿನಗಳಲ್ಲಿ ದೇವರಿಗೆ ನೈವೇದ್ಯವಾಗಿ ಅರ್ಪಿಸಲು ಮಾತ್ರ ಇದರ ಬಳಕೆಯಾಗುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ, ಅದೂ ಹಾಲಿನ ಅಭಾವವಿದ್ದರೆ ಮಾತ್ರ ಎಮ್ಮೆಯ ಕುಟುಂಬದವರು ಹಾಲನ್ನು ಸೇವಿಸಬಹುದು. ಆದರೆ ಸ್ನಾನ ಮಾಡಿಯೇ ಅದನ್ನು ಉಪಯೋಗಿಸಬೇಕೆಂಬ ನಿರ್ಬಂಧವಿದೆ. ಸಾಮಾನ್ಯವಾಗಿ ಕರುವಿಗೇ ಕುಡಿದುಕೊಳ್ಳಲು ಬಿಡುವ ಪ್ರಸಂಗಗಳೇ ಹೆಚ್ಚು. ಮೀಸಲು ಹಾಲು ಕರೆಸುವವರು ಕಟ್ಟುನಿಟ್ಟಿನಿಂದಿರುತ್ತಾರೆ. ನಾಯಿ ನರಿಗಳು ಆ ಹಾಲನ್ನು ಮುಟ್ಟಿದರೆ ಅಶುದ್ಧವಾಯಿತೆಂದು ಭಾವಿಸಲಾಗುವುದು.

60. ಪೂಜೆಗೆ ಚೆಂಡು ಹೂಗಳನ್ನೇ ಬಳಸುವರು. ಬಾಳೆಹಣ್ಣುಗಳನ್ನು ಉಪಯೋಗಿಸುವುದಿಲ್ಲ.

61. ಶ್ರಾವಣ, ಗೋಕುಲಾಷ್ಟಮಿ, ನಾಗರಪಂಚಮಿ, ಗಣೇಶಚೌತಿ ಇನ್ನು ಮುಂತಾದ ಸಂದರ್ಭಗಳಲ್ಲಿ ಈ ನೃತ್ಯ ಏರ್ಪಡುತ್ತದೆ. ಮಹಿಳೆಯರು ಮತ್ತು ಪುರುಷರು ಅವರವರ ಸಮವಯಸ್ಸಿನವರೊಂದಿಗೆ ಪುಗಡಿಯಾಡುವರು. ಈ ನೃತ್ಯದಲ್ಲಿ ಬೇರೆ ಬೇರೆ ವಿಧಾನಗಳಿವೆ. ಕೆಲವು ಸಾಮೂಹಿಕವಾಗಿ ಕುಣಿಯುವಂಥವಾದರೆ ಕೆಲವು ಇಬ್ಬರೇ ಆಡುವಂಥವು. ಇನ್ನು ಕೆಲವು

ಸ್ಪರ್ಧೆಯ ತರಹವಿರುತ್ತವೆ. ಪುಗಡಿಯ ಹೆಸರುಗಳು ಹೀಗಿವೆ: ಕೊಂಬಡಿ ಬಸ್‌ಫುಗಡಿ, ಫೇರ್, ಚಿಮ್ಮ ಇತ್ಯಾದಿ.
ವಿವರಗಳಿಗೆ ನೋಡಿ: ಯಜ್ಞಾವತಿ ಕೇಶವ್, ಮಹಾರಾಷ್ಟ್ರದ ಜನಪದನೃತ್ಯ–ಪುಗಡಿ, ಸುಧಾ, 17 ಸೆಪ್ಟೆಂಬರ್, 1978

62. ಪುರುಷರು ಮಹಿಳೆಯರು ಅವರವರ ಸಮವಯಸ್ಸಿನವರೊಂದಿಗೆ ಪ್ರತ್ಯೇಕವಾಗಿ ಬೇರೆ ಬೇರೆ ಜಾಗಗಳಲ್ಲಿ ನರ್ತಿಸುವರು.

63. ಕಚ್ಚಾಗೌಳಿಗರ ಹಾಡಿಯ ಆಸುಪಾಸಿನ ಗ್ರಾಮಸ್ಥರು ಗೌಳಿಗರ ದೈವಗಳಿಗೆ ನಡೆದುಕೊಳ್ಳುತ್ತಿರುವ ನಿದರ್ಶನಗಳು ಹಲವಿವೆ.

64. ಧಾರ್ಮಿಕ ಸಂದರ್ಭಗಳಲ್ಲಿ ಮಾತ್ರ ತೊಡುವ ಈ ಉಡುಪನ್ನು 'ಶಿವಾಜಿ ಉಡುಪು' ಎಂದು ಹೆಸರಿಸುತ್ತಾರೆ. ವಿಶೇಷವಾಗಿ ಒಂದು ಜಿಳಿಗೌನು ('ಜಗಾ' ಎಂದು ಕರೆಯುತ್ತಾರೆ– ಬೆನ್ನು ಭಾಗದಲ್ಲಿ ಕೆಂಪು ಬಣ್ಣದ ನೂಲಿನಿಂದ ರಚಿಸಿದ ಹೂವಿನ ಚಿತ್ರಗಳಿರುತ್ತವೆ) ಸೊಂಟಕ್ಕೆ ಬಿಳಿ ವಸ್ತ್ರದ ಪಟ್ಟಿ. ತಲೆಗೆ ಬಿಳಿ ಮುಂಡಾಸು, ಕೊರಳಿಗೆ ಮಣಿಸರ, ಕಾಲಿಗೆ ಗೆಜ್ಜೆ ಇರುತ್ತದೆ.

65. ದೇವರನ್ನು ತಳಿಯ ಅಡಿಯಲ್ಲಿ ಒಯ್ಯಲಾಗುವುದು. ದೇವರು ಹೊತ್ತವನ ತಲೆ ಮೇಲೆ ನಾಲ್ವರು ತಳಿ ಹಿಡಿದು ಸಾಗುತ್ತಾರೆ.

66. ಕುಂಕುಮಕ್ಕಿಂತ ನುಣ್ಣಗಿರುವ ಹಣೆಗೆ ಧರಿಸುವ ಪದಾರ್ಥ.

67. ದೆವ್ವ ಭೂತಗಳ ಸ್ಪಷ್ಟ ಕಲ್ಪನೆ ಇವರಿಗಿಲ್ಲ.

68. ಅದನ್ನು ಕೆಟ್ಟವಾಸನೆಯಿಂದ ಗುರುತಿಸುತ್ತಾರೆ.

69. ಕೆಲವು ಸಂದರ್ಭಗಳಲ್ಲಿ ಹಾಡಿಯ ಅಜಾನುಬಾಹು ಬಲಿಷ್ಠ ವ್ಯಕ್ತಿಯೊಬ್ಬನನ್ನು 'ಯಜಮಾನ' ಎಂದು ಗೌರವಿಸುವುದುಂಟು.

70. ನ್ಯಾಯ ತೀರ್ಮಾನ ಮಾಡುವ ಸ್ಥಳಕ್ಕೆ ಕಟ್ಟೀಮನೆ ಎಂದು ಕರೆಯುತ್ತಾರೆ. ಒಂದು ಕಟ್ಟೀಮನೆಯ ಅಧಿಕಾರ ವ್ಯಾಪ್ತಿಗೆ ಏಳು ಹಾಡಿಗಳು ಸೇರಿಕೊಳ್ಳುತ್ತವೆ.

71. ಅಗಸರನ್ನು ಹರಿಜನ ಸಮಾನರಾಗಿ ಉಪಚರಿಸುತ್ತಾರೆ.

ಕೆ. ಬಿ. ರಾಮಕೃಷ್ಣರಾವ್

ಐ. ಎ. ರಿಚರ್ಡ್ಸ್‌ನ ದೃಷ್ಟಿಯಲ್ಲಿ ಕಲೆ ಮತ್ತು ಕಲಾನುಭವ

ಜೀವನದ ಅರ್ಥ ಮತ್ತು ಮೌಲ್ಯಕ್ಕೆ ಕಲೆ ಅಥವಾ ಕಲಾನುಭವ ಒಂದು ಮಾಪಕ. ಕಲೆ ಅನುಭವದ ಶ್ರೀಮಂತಿಕೆಯ ದ್ಯೋತಕ. ಶ್ರೀಮಂತ ಅನುಭವನೆಂದರೆ ವಿವಿಧ ಚಟುವಟಿಕೆಗಳ (ಪರಸ್ಪರ ವಿರುದ್ಧ ಸನ್ನಿವೇಶಗಳೇ ಇರಬಹುದು) ರಸಾತ್ಮಕ ಸಂಯೋಜನೆ, ರಸಾತ್ಮಕ ಪಾಕ. ಅನುಭವದ ಮೇಲೆ ಒಬ್ಬನಿಗಿರುವ ಸ್ವಾಮ್ಯ ಅಥವಾ ಪ್ರಭುತ್ವ ಅತನ ಸಂಯೋಜನಾ ಶಕ್ತಿಯ ಹೆಗ್ಗುರುತು. ಅನುಭವದ ತೊಡಕುಗಳನ್ನು ಎದುರಿಸುವಲ್ಲಿ ಸಾಮಾನ್ಯನಿಗೆ ಯಾವುದು ದುಸ್ಸಾಧ್ಯವೋ ಅದು ಕಲಾವಿದನಿಗೆ ಸುಲಭ ಸಾಧ್ಯ. ಯಾವ ವಿಚಾರದಲ್ಲಿ ಇತರರಿಗೆ ಭ್ರಾಂತಿಯೋ, ಅಲ್ಲಿ ಕಲಾವಿದನಿಗೆ ಸಂಪೂರ್ಣ ಸಹಜ ತಿಳಿವಳಿಕೆ ಇರುತ್ತದೆ. ಇದು ಕಲಾವಿದನ ವೈಶಿಷ್ಟ್ಯ.

ಉತ್ತಮ ಅಥವಾ ಅಧಮ (Good or Bad) ಎಂದು ಅನುಭವಗಳನ್ನು ನಿರ್ಧರಿಸುವಲ್ಲಿ ಸಾಮಾನ್ಯವಾಗಿ ನೀತಿಯ ಮಾನದಂಡವನ್ನು ತರುತ್ತಾರೆ. ಆದರೆ ಈ ನೀತಿಯೆನ್ನುವುದು ಸಾಪೇಕ್ಷವೆಂಬುದನ್ನು ನಾವು ಮರೆಯುತ್ತೇವೆ. ಜನಾಂಗಗಳ ಜೀವನದಲ್ಲಿ, ದೇಶದೇಶಕ್ಕೂ, ಕಾಲ ಕಾಲಕ್ಕೂ ವ್ಯತ್ಯಾಸ ಹೊಂದುವ ನೀತಿ ನಿಯಮಗಳು ಹೇಗೆ ಸಾರ್ವತ್ರಿಕವಾದಾವು? ಮಾನವ ಶಾಸ್ತ್ರವು (Anthropology) ನೀತಿಯ ಸಾಪೇಕ್ಷತೆಯನ್ನು ವೈಜ್ಞಾನಿಕವಾಗಿ, ಅಸಂದಿಗ್ಧವಾಗಿ ತೋರಿಸುವುದನ್ನು ನಾವು ಮರೆಯಬಾರದು. ಆದ್ದರಿಂದ ಅನುಭವಗಳ ಗುಣನಿರ್ಧಾರಕ್ಕೆ 'ನೀತಿ'ಯ ಮಾಪಕ ಅಸಂಬದ್ಧವಾಗುತ್ತದೆ.

ಹಾಗಾದರೆ ಅನುಭವವನ್ನು ಅಳೆಯಲು ಇರುವ ಇತರ ಸಾಧನಗಳೇನು? ಅನುಭವವನ್ನು ಅಳೆಯುವುದು ಅನುಭವವೇ ಹೊರತು ಬೇರೆಯದಲ್ಲ. ಜೀವನದಲ್ಲಿ ವಾಸ್ತವಿಕವಾಗಿ ಒದಗಿ ಬರುವ ವಿವಿಧ, ವಿರುದ್ಧ, ಅಸಂಗತ ಸನ್ನಿವೇಶಗಳ ಸಂಯೋಜನಾ ನೈಪುಣ್ಯವೇ ಒಂದು ಮಾಪಕ. ಅನುಭವ ಕ್ಷೇತ್ರದಲ್ಲಿ ಒದಗಿ ಬರುವ ಪ್ರವೃತ್ತಿ, ನಿವೃತ್ತಿಪರವಾದ ಪ್ರಚೋದನೆಗಳ ಸಮನ್ವಯವೇ ಮಾಪಕ. ಪ್ರವೃತ್ತಿಪರ ಪ್ರಚೋದನೆ (appetency) ನಮ್ಮನ್ನು ಒಂದರ ಕಡೆ ಸಹಜವಾಗಿ ಸೆಳೆದರೆ, ನಿವೃತ್ತಿಪರ ಪ್ರಚೋದನೆ (aversion) ಅದರಿಂದ ದೂರ ಹೋಗುವಂತೆ ಮಾಡುತ್ತದೆ. ಈ ಆಕರ್ಷಣ, ವಿಕರ್ಷಣಗಳು ಪರಸ್ಪರ ವಿರುದ್ಧ ಪ್ರಚೋದನೆಗಳಿಂದ ಆಗುವುದೊಂದು ವಿಧ, ಮತ್ತೊಂದು ಆಕರ್ಷಣಾತ್ಮಕ ಪ್ರಚೋದನೆಗಳಲ್ಲೇ ಒದಗಿಬರುವ ಪ್ರಮುಖ ಮತ್ತು ಸಾಮಾನ್ಯ ಪ್ರಚೋದನೆಗಳ ದ್ವಂದ್ವ. ಮೊದಲನೆಯದು ಸಾಮಾನ್ಯ ಅನುಭವದ ಲಕ್ಷಣ. ಎರಡನೆಯ ಅನುಭವದಲ್ಲಿ ಕಲಾವಿದನ ವೈಶಿಷ್ಟ್ಯ ಕಂಡು ಬರುತ್ತದೆ. ಪ್ರಚೋದನೆಗಳು ಆಕರ್ಷಣಾತ್ಮಕವಾಗಿಯೇ ಇರುವುದರಿಂದ ಅವುಗಳಲ್ಲಿ ಮುಖ್ಯ ಯಾವುದು,

ಸಾಮಾನ್ಯ ಯಾವುದು ಎನ್ನುವುದನ್ನು ತಿಳಿದು ಮುಖ್ಯವಾದುದರ ಕಡೆಗೆ ಒಲವು ತೋರುತ್ತಾನೆ. ಇಲ್ಲಿಯೂ ಪ್ರಮುಖ ಪ್ರಚೋದನೆಯ ಸಂತೃಪ್ತಿಗೋಸ್ಕರ ಸಾಮಾನ್ಯ ಪ್ರಚೋದನೆಯನ್ನು ದಮನಗೊಳಿಸಿದರೆ ಅದು ಉತ್ತಮ ಅನುಭವ ಆಗಲಾರದು. ಯಾವ ಪ್ರವೃತ್ತಿ ಅಷ್ಟೇ ಪ್ರಬಲವಾದ ಅಥವಾ ಅಪೇಕ್ಷಿತ ಹೆಚ್ಚಿನ ಪ್ರವೃತ್ತಿಯನ್ನು ವಿನಾಶಗೊಳಿಸದೆ, ಎಲ್ಲವನ್ನೂ ಒಂದು ಸಂಯೋಜನೆಯೊಳಗೆ ಸೇರಿಸುವುದೋ ಅಂತಹುದು ಶ್ರೇಷ್ಠ ಅನುಭವದ ಗುರುತಾಗಿ ನಿಲ್ಲುತ್ತದೆ. ಅಂತಹ ಅನುಭವವೇ ಅತ್ಯಂತ ಮೌಲ್ಯವುಳ್ಳದ್ದು. ಕಲೆ ವಿಶಿಷ್ಟ ರೀತಿಯಲ್ಲಿ ಇದನ್ನು ಸಾಧಿಸುವುದರಿಂದ ಒಂದು ಉನ್ನತವಾದ ಮೌಲ್ಯಮಾಪಕವಾಗುತ್ತದೆ. ಕಲಾವಿದ, ಇಂತಹ ಅನುಭವಗಳ ದೆಸೆಯಿಂದ, ಮೌಲ್ಯನಿರ್ಧಾರಕನಾಗುತ್ತಾನೆ. ಕಲಾವಿದನ ಜೀವನ ಅಥವಾ ಇಂತಹ ಮಾನಸಿಕ ಸ್ಥಿತಿ ವಾಸ್ತವಿಕವಾಗಿ ಅಮಾನುಷವಲ್ಲ. ಅಲೌಕಿಕವಲ್ಲ. ಈ ವಿಶ್ಲೇಷಣೆ ಕಲಾನುಭವದ ಮೌಲ್ಯನಿರ್ಧಾರಕ್ಕೆ ಹೆಚ್ಚು ಸಹಾಯ ಮಾಡುತ್ತದೆ. ಯಾವುದೋ ಗುಹ್ಯ, ಗೂಢ, ಅನಿರ್ವಚನೀಯ, ಅತೀಂದ್ರಿಯ ಅನುಭವವು ಕಲಾವಿದನನ್ನೂ ಆತನ ಅನುಭವವನ್ನೂ ಸಾಮಾನ್ಯರಿಂದ ಮತ್ತು ಇತರ ಅನುಭವಗಳಿಂದ ಪ್ರತ್ಯೇಕ ಮಾಡುತ್ತವೆಂದು ಹೇಳುವುದು ಮೇಲಿನ ದೃಷ್ಟಿಯಿಂದ ಉಚಿತವಲ್ಲ. ಅದೇ ರೀತಿಯಲ್ಲಿ ಕಲೆಯ ಮೌಲ್ಯನಿರ್ಧಾರ ನಮ್ಮ ಜೀವನಕ್ಕೆ ಸಂಬಂಧಪಟ್ಟ ವಿಚಾರಗಳಿಂದ ಸಾಧ್ಯವಿಲ್ಲವೆನ್ನುವ ವಾದಸರಣಿಯೂ ಉಚಿತವಲ್ಲ. ಕಲಾವಿದನೆಂದರೆ ಜೀವನ ಕಲೆಯನ್ನು ಸಾಧಿಸಿದವ, ಎಂದು ಅರ್ಥಬರುತ್ತದೆ. ಅವನ ಮಾನಸಿಕ ಸ್ಥಿತಿ ಚಂಚಲರಹಿತವಾದ ಒಂದು ಸಾಮನ್ವಾಸಷ್ಟಿ. ವಿರೋಧಾಭಾಸದಿಂದ ಕುಲುಷಿತಗೊಳ್ಳದ ಸಾಮರಸ್ಯ ಸಾಧಕ ಘಟಕ. ಈ ಕಾರಣದಿಂದ ಕಲಾವಿದ ಮತ್ತು ಕವಿ ದ್ರಷ್ಟಾರರೆನಿಸಿಕೊಳ್ಳುತ್ತಾರೆ, ಧರ್ಮದ ವಿಷಯದಲ್ಲಿ ಮಾರ್ಗದರ್ಶಕರೆನಿಸಿಕೊಳ್ಳುತ್ತಾರೆ, ಇವರೇ 'ನೀತಿ'ಗೆ ತಳಹದಿಯನ್ನು ಕಟ್ಟಲು ಯೋಗ್ಯರಾದವರು.

ಈ ತೆರನಾದ ಜೀವನ ವಿಮರ್ಶೆಯಿಂದ ರಿಚರ್ಡ್ಸನ ಕಲಾವಿಮರ್ಶೆ ರೂಪುಗೊಂಡಿದೆ. ಸೌಂದರ್ಯಾನುಭವ ಅಥವಾ ಆನಂದಾನುಭವ ಜೀವನಕ್ಕೆ ಸಂಬಂಧಪಡದ ಯಾವ ವಿಶಿಷ್ಟ ಅಂಶವನ್ನೂ ಪಡೆದಿರುವುದಿಲ್ಲ. ಎಲ್ಲ ನಡತೆಗಳಲ್ಲೂ, ಚಟುವಟಿಕೆಗಳಲ್ಲೂ, ಇರುವ ಅನುಭವಗಳಂತೆಯೇ ರಸಾನುಭವವೂ ಒಂದು ಅನುಭವ. ಒಂದು ಚಿತ್ರವನ್ನು ನೋಡುತ್ತಿರುವಾಗ, ಸಂಗೀತವನ್ನು ಕೇಳುತ್ತಿರುವಾಗ, ಕವನವನ್ನು ಬರೆಯುತ್ತಿರುವಾಗ ಚಿತ್ರಪ್ರದರ್ಶನಾಲಯಗಳಲ್ಲಿ ಅಡ್ಡಾಡುತ್ತಿರುವಾಗ ಅಥವಾ ಬೆಳಗಿನ ಜಾವ ಉಡುಪು ತೊಟ್ಟುಕೊಳ್ಳುತ್ತಿರುವಾಗ ನಮ್ಮಲ್ಲಿ ನಡೆಯುತ್ತಿರುವ ಕ್ರಿಯೆಯಂತೆಯೇ ಸೌಂದರ್ಯಾನುಭವದಲ್ಲಿಯೂ ಮೂಲತಃ ಒಂದೇ ತೆರನಾದ ಕ್ರಿಯೆ ನಡೆಯುತ್ತಿರುತ್ತದೆ. ಆದರೆ ಅದರ ಗುಣ ಅದರ ಸಂಯೋಜನೆಯಲ್ಲಲ್ಲದೆ, ಅದು ನೀಡುವ ಸಾಮ್ಯಸ್ಥಿತಿಯಲ್ಲಿದೆ.

ಇದು ವೈಜ್ಞಾನಿಕ ದೃಷ್ಟಿ. ಅನುಭವ ವಿಶ್ಲೇಷಣೆಯ ಆಧಾರದ ಮೇಲೆ ಮನಶ್ಶಾಸ್ತ್ರ ತೋರುವ ಮಾರ್ಗ.

ಈ ದೃಷ್ಟಿಯಿಂದ ಹೇಳುವುದಾದರೆ ಕಲಾಕೃತಿಗಳಲ್ಲಿ ರುದ್ರನಾಟಕಕ್ಕೆ ಹೆಚ್ಚು ಮೌಲ್ಯ ನೀಡಬೇಕು. ರುದ್ರನಾಟಕವನ್ನು ನಮ್ಮ ಚಿತ್ತವೃತ್ತಿಗಳ, ನಿರ್ಧಾರಗಳ ಮತ್ತು ವಿವಿಧ, ವಿರುದ್ಧ ಪ್ರಚೋದನೆಗಳ ಸಾಮರಸ್ಯ ದೃಷ್ಟಿಯಿಂದ ನೋಡಬೇಕು. ನಮ್ಮನ್ನು ಹತ್ತಿರಕ್ಕೆ ಒಯ್ಯುವ ಅನುಕಂಪ, ದೂರಕ್ಕೆ ತಳ್ಳುವ ಭಯ, ಇವು ರುದ್ರನಾಟಕದಲ್ಲಿ ಸಮನ್ವಯಗೊಳ್ಳುವಂತೆ ಯಾವ ಅನುಭವದಲ್ಲೂ ಆಗುವುದಿಲ್ಲ. ವಿರುದ್ಧ ತತ್ತ್ವಗಳ ಯೋಜನೆ (Planning)

ಸಂಘಟನೆಯಿಂದ (bringing them together) ಉದ್ಭವವಾಗುವ ಅನುಭಾವಿಕ ಸಾಮ್ಯಾವಸ್ಥೆಯೇರುದ್ರನಾಟಕದ ಹೆಗ್ಗುರುತು.

ಶತಮಾನಗಳಿಂದ ಬಂದ ಪರಂಪರೆಯನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸುವ ಐ. ಎ. ರಿಚರ್ಡ್ಸ್‌ನ ವಾದ ಸಂಪ್ರದಾಯ ಪೋಷಿತ ಕಲಾವಿಮರ್ಶೆ ಕಲಾವಿದನ ವೈಶಿಷ್ಟ್ಯಕ್ಕೆ ಧಕ್ಕೆ ತಂದಂತೆ ತೋರಿಬಂದರೆ ಅತಿಶಯವಲ್ಲ. ಸಾಂಪ್ರದಾಯಿಕ ಕಲಾವಿಮರ್ಶಕ, ಸಾಂಪ್ರದಾಯಿಕ ಕವಿ ರಿಚರ್ಡ್ಸ್‌ನ ವಾದವನ್ನು ದ್ವೇಷಿಸಿದರೆ ಹೆಚ್ಚಲ್ಲ. ಆದರೆ ರಿಚರ್ಡ್ಸ್‌ನು ನಮ್ಮ ಮುಂದಿಟ್ಟಿರುವ ನೂತನ ಸೃಷ್ಟಿ ಮತ್ತು ಬೆಳೆಸಬೇಕೆಂದಿರುವ ಸಂಪ್ರದಾಯ ವೈಜ್ಞಾನಿಕವಾಗಿದ್ದು ಗಮನಾರ್ಹವಾಗಿದೆ, ವಿಚಾರಪೂರ್ಣವಾಗಿದೆ.

ಐ. ಎ. ರಿಚರ್ಡ್ಸ್ ಎನ್ನುವ ವಿಮರ್ಶಕ ಭಾಷೆಯಲ್ಲಿ ಸಾಂಕೇತಿಕ (ಸಿಂಬಾಲಿಕ್) ಮತ್ತು ಭಾವಪ್ರಚೋದಕ (ಇಮೋಟಿವ್) ಕಾರ್ಯ ಲಕ್ಷಣಗಳಿವೆ ಎನ್ನುತ್ತಾನೆ. ಕಲೆಗೆ ಹೆಚ್ಚಾಗಿ ಸಂಬಂಧಿಸಿದುದು ಎರಡನೆಯದು. ಕವಿತೆ ಪದಗಳಿಂದ ಕೂಡಿದ್ದರೂ ನಮ್ಮನ್ನು ಭಾವನೆಯಲ್ಲಿ ಮುಳುಗಿಸುವುದು ಭಾವಮೂಲವಾದ ಅದರ ಭಾಷೆಯಿಂದ. ನಮ್ಮ ಸಮಗ್ರ ವ್ಯಕ್ತಿತ್ವದ ಮೇಲೆ ಅದು ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಅನುಭವವೆಂಬ ಬಹು ವಿಶಾಲ ನಕ್ಷೆಯಲ್ಲಿ ಒಂದು ಪದ ಅಥವಾ ವಾಕ್ಯ ಲೆಕ್ಕಕ್ರಮದಿಂದ ನಮ್ಮಿಂದ ಗುಣಿಸಲು ಸಾಧ್ಯವಾಗದ ರೀತಿಯಲ್ಲಿ ವಿಶಿಷ್ಟ ಸತ್ಯವನ್ನು ತೋರಿಸಿತು ಎಂದು ಭಾವಾವಿಷ್ಟರಾಗಿ ಹೇಳುತ್ತೇವೆ. ಹಾಗೆಯೇ ನೃತ್ಯದ ಭಂಗಿಗಳು. ಅವು ಪ್ರಕೃತಿಯಲ್ಲಿ ಯಥಾ ರೂಪದಲ್ಲಿರದ ವಿನ್ಯಾಸಗಳು. ನಾದಮಯವಾದ ಸಂಗೀತವೂ ಹಾಗೆಯೇ........ಕಲೆಯ ಆಸ್ವಾದನೆ ಸ್ವಾಭಾವಿಕವಾದರೂ ನಿಜವಾದ ಅಭಿರುಚಿ ಹುಟ್ಟಬೇಕಾದರೆ ಶಿಕ್ಷಣದ ಅಗತ್ಯ ಇದ್ದೇ ಇರುತ್ತದೆ. ಮೌಲ್ಯ ನಿರ್ಧಾರಕ್ಕೂ ಶಿಕ್ಷಣ ಬೇಕೇ ಬೇಕು.

ಕೆ. ಬಿ. ರಾಮಕೃಷ್ಣರಾವ್

ಕನ್ನಡ ವಿಶ್ವಕೋಶ, ಸಂಪುಟ ನಾಲ್ಕು ಪು. ೨೫೬ ರಲ್ಲಿನ

ಕಲೆ ಮತ್ತು ಸತ್ಯ ಎಂಬ ಲೇಖನದಿಂದ

ಎಂ. ಎಸ್. ಕೃಷ್ಣಮೂರ್ತಿ

ಮುಂಗಿರಾಜ

ಕರ್ನಾಟಕದ ಇತಿಹಾಸದ ವಿವಾದಾತ್ಮಕ ವ್ಯಕ್ತಿಗಳಲ್ಲಿ, ಮುಂಗಿರಾಜನೂ ಒಬ್ಬ. ಕ್ರಿ.ಶ. 9ನೇ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ ಈತನು ಆ ಕಾಲದ ಮತ್ತು ನಂತರದ ಕಾಲದ ವೆಂಗಿಯ ಚಾಳುಕ್ಯರ ಶಾಸನಗಳಲ್ಲಿ ಉಕ್ತನಾಗಿದ್ದಾನೆ. ಈತನ ಹೆಸರು ಮುಂಗಿ ಅಥವಾ ಮುಂಗಿ ರಾಜನೆಂದೂ ಈತನು ನೊಳಂಬ ರಾಷ್ಟ್ರದವನೆಂದೂ ಪೂರ್ವ ಚಾಳುಕ್ಯ ವಂಶದ ಗುಣಗ ವಿಜಯಾದಿತ್ಯನು (ಕ್ರಿ.ಶ. 844–88) ಈತನನ್ನು ಯುದ್ಧದಲ್ಲಿ ಸಂಹರಿಸಿದನೆಂದೂ ಪೂರ್ವ ಚಾಳುಕ್ಯರ ಶಾಸನಗಳು ವರ್ಣಿಸಿವೆ. ಮುಲಿಯಪೂಂಡಿ ಶಾಸನದಲ್ಲಿ[1] ವಿಜಯಾದಿತ್ಯನು ನೊಳಂಬ ರಾಷ್ಟ್ರದ ರಾಜನಾದ ಮುಂಗಿಯನ್ನು ಸಂಹರಿಸಿ ಗಂಗ ಕೂಟದಲ್ಲಿ ಆಶ್ರಯ ಪಡೆದಿದ್ದ ಗಂಗರನ್ನು ಸೋಲಿಸಿ, ವಲ್ಲಭ (ರಾಷ್ಟ್ರಕೂಟ)ನ ಪರವಹಿಸಿದ್ದ ದಾಹಲದ ಒಡೆಯನಾದ ಶಂಕಿಲನನ್ನು ಭಯಪಡಿಸಿದನೆಂದು ಹೇಳಿದೆ. ಎರಡನೆಯ ಅಮ್ಮರಾಜನ ಎಡೇರು ಶಾಸನದಲ್ಲಿ[2] ವಿಜಯಾದಿತ್ಯನು ರಟ್ಟರಾಜನ ಪ್ರತಿಭಟನೆಯ ಮೇರೆಗೆ ಗಂಗರನ್ನು ಜಯಿಸಿ, ಮುಂಗಿಯ ತಲೆಯನ್ನು ಯುದ್ಧದಲ್ಲಿ ಛೇದಿಸಿ, ಕೃಷ್ಣ ಮತ್ತು ಶಂಕಿಲರನ್ನು ಸೋಲಿಸಿ, ಕೃಷ್ಣನ ರಾಜಧಾನಿಯನ್ನು ಸುಟ್ಟು ಭಸ್ಮ ಮಾಡಿದನೆಂದು ಉಕ್ತವಾಗಿದೆ. ಮಲ್ಲಪದೇವನ ಪೀಠಾಪುರಂ ಶಾಸನದಲ್ಲಿ[3] ಮೂರನೆಯ ವಿಜಯಾದಿತ್ಯನು ಯುದ್ಧಭೂಮಿಯಲ್ಲಿ ಮುಂಗಿರಾಜನ ತಲೆಯನ್ನು ಚೆಂಡಾಡಿ ಕೃಷ್ಣನನ್ನು ಸೇರಿದ್ದ ಕಿರಣಪುರಿಯ ಶಂಕಿಲನಿಗೆ ಭಯ ಹುಟ್ಟಿಸಿ, ಕೃಷ್ಣನ ಘನತೆಯನ್ನು ಪುನಃ ಸ್ಥಾಪಿಸಿದನೆಂದು ಹೇಳಿದೆ.

ಮೇಲೆ ನಿರೂಪಿಸಿರುವ ಶಾಸನಗಳಿಂದ ಕ್ರಿ.ಶ. 844–88ರ ನಡುವೆ ಆಳಿದ ಪೂರ್ವ ಚಾಳುಕ್ಯ ವಂಶದ ರಾಜನಾದ ಮೂರನೆಯ ಗುಣಗವಿಜಯಾದಿತ್ಯನು ನೊಳಂಬ ರಾಷ್ಟ್ರದ, ಅತಿ ಭಯಂಕರನೂ ಮತ್ತು ಪರಾಕ್ರಮಿಯೂ ಆದ ಮುಂಗಿರಾಜನನ್ನು ಯುದ್ಧದಲ್ಲಿ ಕೊಂದು ಆತನ ತಲೆಯನ್ನು ರಣರಂಗದಲ್ಲಿ ಚೆಂಡಾಡಿದನು ಎಂದು ತಿಳಿದುಬರುತ್ತದೆ. ಗುಣಗವಿಜಯಾದಿತ್ಯನು ಕೇವಲ ನೊಳಂಬ ರಾಷ್ಟ್ರದ ಮುಂಗಿರಾಜನ ಮೇಲೆ ಮಾತ್ರ ದಂಡೆಯಾತ್ರೆಯನ್ನು ಕೈಗೊಳ್ಳಲಿಲ್ಲ. ಈತನು ತಲಕಾಡಿನ ಗಂಗರ ಮೇಲೂ ರಾಷ್ಟ್ರಕೂಟರ ಮೇಲೂ ಸಹ ಯುದ್ಧವನ್ನು ಕೈಗೊಂಡನು. ಆ ಸಮಯದಲ್ಲಿ ವಿಜಯಾದಿತ್ಯನ ಸಮಕಾಲೀನರಾದ ರಾಷ್ಟ್ರಕೂಟ ದೊರೆಗಳು ಅಮೋಘವರ್ಷ ನೃಪತುಂಗ (ಕ್ರಿ.ಶ. 814–80) ಮತ್ತು ಆತನ ಮಗ ಎರಡನೆಯ ಕೃಷ್ಣ (ಕ್ರಿ.ಶ. 880–915) ಅದೇ ಕಾಲದ ಗಂಗರ ಸಮಕಾಲೀನ ದೊರೆಗಳು ಒಂದನೆಯ ನೀತಿಮಾರ್ಗ (ಕ್ರಿ.ಶ. 843–70) ಮತ್ತು ಆತನ ಮಗ ಎರಡನೆಯ ರಾಚಮಲ್ಲ (ಕ್ರಿ.ಶ. 870–906). ಆದರೆ ವಿಜಯಾದಿತ್ಯನು ಸಂಹರಿಸಿದ ನೊಳಂಬ ರಾಷ್ಟ್ರದ ಮುಂಗಿರಾಜನು ಯಾರೆಂಬುದು ಇನ್ನೂ ವಿವಾದಾತ್ಮಕ. ಶಾಸನಗಳ ವಿವರವನ್ನು ನೋಡಿದಾಗ ಈತನು ಬಹಳ ಪರಾಕ್ರಮಿಯೂ ಮತ್ತು ಅತಿ ಮುಖ್ಯನಾದ ರಾಜನೂ ಆಗಿದ್ದನೆಂದು ತಿಳಿದು ಬರುತ್ತದೆ. ಈತನು ನೊಳಂಬ

ರಾಷ್ಟ್ರದವನು ಅಂದರೆ ನೊಳಂಬವಾಡಿಯ ದೊರೆ. ಆದರೆ ನೊಳಂಬರ ಶಾಸನಗಳಲ್ಲಿ ಅಥವಾ ಬೇರೆ ಇನ್ನಾವುದೇ ಶಾಸನಗಳಲ್ಲಿ ಮಂಗಿ ಎಂಬ ರಾಜನ ಹೆಸರು ಉಕ್ತವಾಗಿಲ್ಲದಿರುವುದು ನಿಜಕ್ಕೂ ಸೋಜಿಗದ ಸಂಗತಿ. ಗುಣಗವಿಜಯಾದಿತ್ಯನ ಸಮಕಾಲಿನ ನೊಳಂಬ ರಾಜರೆಂದರೆ ಒಂದನೆಯ ಪೊಳಲ್ಚೋರ (ಕ್ರಿ.ಶ. ಸು. 828–875) ಮತ್ತು ಆತನ ಮಗ ಒಂದನೆಯ ಮಹೇಂದ್ರಾಧಿರಾಜ (ಕ್ರಿ.ಶ. ಸು 875–897). ಈ ಇಬ್ಬರಲ್ಲಿ ಯಾರೂ ಸಹ ಮಂಗಿ ಅಥವಾ ಮಂಗಿರಾಜನೆಂಬ ಬಿರುದನ್ನಾಗಲೀ ಅನ್ಯ ಹೆಸರನ್ನಾಗಲೀ ಹೊಂದಿರಲಿಲ್ಲ. ಒಂದು ಪಕ್ಷ ಇವರಿಬ್ಬರಲ್ಲಿ ಯಾರಾದರೂ ಮಂಗಿರಾಜನಾಗಿದ್ದಲ್ಲಿ ಆತನು ಯಾರು ಮತ್ತು ವಿಜಯಾದಿತ್ಯನು ಮಂಗಿಯನ್ನು ಯಾವಾಗ ಕೊಂದನು ಎಂಬುದನ್ನು ನಿರ್ಧರಿಸಬೇಕಾಗಿದೆ. ಅದರಿಂದಾಗಿ ಗುಣಗವಿಜಯಾದಿತ್ಯನ ಕರ್ನಾಟಕದ ದಂಡಯಾತ್ರೆಯ ಕಾಲವನ್ನು ಈಗ ನಿಗದಿಮಾಡುವುದು ಅವಶ್ಯಕ.

ಈ ವಿಚಾರದಲ್ಲಿ ಡಾ. ಎ. ಎಸ್. ಅಲ್ತೇಕರ್‌ರವರು[1] ಈ ರೀತಿ ಅಭಿಪ್ರಾಯಪಡುತ್ತಾರೆ. ವಿಜಯಾದಿತ್ಯನ ಈ ದಂಡಯಾತ್ರೆಯು ಅಮೋಘವರ್ಷನ ರಾಜ್ಯಾಡಳಿತದ ಕೊನೆಯ ವರ್ಷಗಳಲ್ಲಿ ಅಥವಾ ಆತನ ಮಗ ಎರಡನೆಯ ಕೃಷ್ಣನ ಆಡಳಿತದ ಮೊದಲನೆಯ ವರ್ಷಗಳಲ್ಲಿ ನಡೆದಿರಬೇಕು. ಅಮೋಘವರ್ಷನು ಕ್ರಿ.ಶ. 866ಕ್ಕೂ ಮೊದಲೇ ಗುಣಗವಿಜಯಾದಿತ್ಯನನ್ನು ಸೋಲಿಸಿದ್ದುದರಿಂದ ಪೂರ್ವ ಚಾಳುಕ್ಯರ ಶಾಸನಗಳಲ್ಲಿ ಬರೆದಿರುವಂತೆ ಗುಣಗವಿಜಯಾದಿತ್ಯನು, ರಾಷ್ಟ್ರಕೂಟರ ನಗರವಾದ ಕೃಷ್ಣಪುರವನ್ನು ಅಮೋಘವರ್ಷನ ಕೊನೆಯ ಅಥವ ಎರಡನೆಯ ಕೃಷ್ಣನ ರಾಜ್ಯಭಾರದ ಮೊದಲನೆಯ ವರ್ಷಗಳಲ್ಲಿ ನಾಶಪಡಿಸಿರಬೇಕು. ಈ ಘಟನೆಯು ಅಮೋಘವರ್ಷನ ರಾಜ್ಯಾಡಳಿತದ ಕೊನೆಯ ದಿನಗಳಲ್ಲಿ ನಡೆದಿರಲೂ ಸಾಧ್ಯ. ಏಕೆಂದರೆ ಅಷ್ಟು ಹೊತ್ತಿಗೆ ಅಂದರೆ ಸುಮಾರು ಕ್ರಿ.ಶ. 875ರಲ್ಲಿ ಅಮೋಘವರ್ಷನಿಗೆ ವಯಸ್ಸಾಗಿ ಆತನ ಮಗ ಎರಡನೆಯ ಕೃಷ್ಣನು ಇನ್ನೂ ಯುವರಾಜ ಪದವಿಯಲ್ಲಿದ್ದನು. ಇತ್ತ ಕಡೆ ಗಂಗ ರಾಜ್ಯದಲ್ಲಿ ಒಂದನೆಯ ನೀತಿಮಾರ್ಗನ ಮರಣಾನಂತರ ಆತನ ಮಗ ಎರಡನೆಯ ರಾಚಮಲ್ಲನು ಕ್ರಿ.ಶ. 870ರಲ್ಲಿ ಪಟ್ಟಕ್ಕೆ ಬಂದನು. ನೊಳಂಬ ರಾಜ್ಯದಲ್ಲೂ ಒಂದನೆಯ ಪೊಳಲ್ಚೋರನ ಆಡಳಿತ ಕೊನೆಗೊಳ್ಳುತ್ತಾ ಬಂದಿತ್ತು. ಆತನ ಮಗನಾದ ಒಂದನೆಯ ಮಹೇಂದ್ರಾಧಿರಾಜನು ಸಿಂಹಾಸನಾರೋಹಣ ಮಾಡುವುದರಲ್ಲಿದ್ದನು. ಇದರಿಂದಾಗಿ ಕರ್ನಾಟಕದ ಈ ಮೂರು ರಾಜ್ಯಗಳಲ್ಲೂ ರಾಜಕೀಯವಾಗಿ ದೃಢವಾದ ವಾತಾವರಣವಿರಲಿಲ್ಲ.

ಇದಕ್ಕೆ ಕೂಡಿದಂತೆ ಪಲ್ಲವರ ರಾಜಧಾನಿಯಲ್ಲಿ ಮೂರನೆಯ ನಂದಿವರ್ಮನ (ಕ್ರಿ.ಶ. 846–69) ಮರಣಾನಂತರ ಆತನ ಮಕ್ಕಳಾದ ನೃಪತುಂಗವರ್ಮ ಮತ್ತು ಅಪರಾಜಿತ ಇವರುಗಳಲ್ಲಿ ಸಿಂಹಾಸನಕ್ಕಾಗಿ ಹೊಡೆದಾಟ ನಡೆಯುತ್ತಿತ್ತು. ಇದರಿಂದಾಗಿ ರಾಜ್ಯದಲ್ಲಿ ಅನಾಯಕತ್ವ ತಲೆದೋರಿ ಸಾಮಂತ ರಾಜರುಗಳು ಸ್ವತಂತ್ರರಾದರು. ನೃಪತುಂಗವರ್ಮನು ಅಮೋಘವರ್ಷನ ಮಗಳು ಶಂಖ ಎಂಬುವಳ ಮಗನು. ಇದರಿಂದಾಗಿ ರಾಷ್ಟ್ರಕೂಟರೂ ಸಹ ಒಂದು ರೀತಿ ಪಲ್ಲವರ ಅಂತರ್ಯುದ್ಧದಲ್ಲಿ ಭಾಗಿಗಳಾಗಿ ನೃಪತುಂಗನ ಪರವಾಗಿದ್ದರು. ಇಷ್ಟಲ್ಲದೆ ನೊಳಂಬರು ಮತ್ತು ಗಂಗರು ಒಂದುಗೂಡಿ ರಾಷ್ಟ್ರಕೂಟರ ಸಾರ್ವಭೌಮತ್ವಕ್ಕೆ ಒಳಪಡದೆ ಸ್ವತಂತ್ರರಾಗಿ ವರ್ತಿಸಿದ್ದರಿಂದ ಈ ಇಬ್ಬರೂ ರಾಷ್ಟ್ರಕೂಟರ ಶತ್ರುಗಳಾಗಿದ್ದರು. ಇಷ್ಟೆಲ್ಲ ಕಾರಣಗಳಿಂದ ಅಮೋಘವರ್ಷನ ರಾಜ್ಯಾಡಳಿತದ ಕೊನೆಯ ವರ್ಷಗಳಲ್ಲಿ ಇಡೀ ದಕ್ಷಿಣ ಭಾರತದ ರಾಜಕೀಯದಲ್ಲಿ ಅಲ್ಲೋಲಕಲ್ಲೋಲವೇರ್ಪಟ್ಟಿತು. ಈ ಕಾಲದ ರಾಜಕೀಯ ಪ್ರಕ್ಷುಬ್ಧತೆ, ಚಾಲುಕ್ಯ ವಂಶದ ಗುಣಗವಿಜಯಾದಿತ್ಯನಿಗೆ ಕರ್ಣಾಟಕದ ದಂಡಯಾತ್ರೆಗೆ ಒಂದು ಅಪೂರ್ವವಾದ ಸಮಯವನ್ನೊದಗಿಸಿಕೊಟ್ಟಿತು.

ಈ ರಾಜಕೀಯ ಪ್ರಕ್ಷುಬ್ಧತೆಯ ಲಾಭ ಪಡೆಯಲು ಹವಣಿಸಿದ ಗುಣಗವಿಜಯಾದಿತ್ಯನು

ತನ್ನ ಶತ್ರುವಾದ ರಾಷ್ಟ್ರಕೂಟರ ಮೇಲೆ ದಂಡಯಾತ್ರೆ ನಡೆಸಲು ಧೈರ್ಯಮಾಡಲಿಲ್ಲ. ನುರಿತ ರಾಜಕಾರಣಿಯಾದ ಈತನು ಮೊದಲು ರಾಷ್ಟ್ರಕೂಟರಷ್ಟು ಪ್ರಬಲರಲ್ಲದ ಗಂಗ ಮತ್ತು ಅವರ ಸಾಮಂತರಾದ ನೊಳಂಬರ ಮೇಲೆ ದಂಡಯಾತ್ರೆಯನ್ನು ಪ್ರಾರಂಭಿಸಿದನು. ಗಂಗರು ಮತ್ತು ನೊಳಂಬರು ಆ ಸಮಯದಲ್ಲಿ ರಾಷ್ಟ್ರಕೂಟರ ವಿರೋಧಿಗಳಾಗಿದ್ದರಿಂದ ವಿಜಯಾದಿತ್ಯನ ಗಂಗರ ಮೇಲಿನ ಈ ದಂಡಯಾತ್ರೆಯನ್ನು ರಾಷ್ಟ್ರಕೂಟರು ತಮಗೆ ಆದ ಅನುಕೂಲವೆಂದೇ ಭಾವಿಸಿದರು. ಅಮೋಘವರ್ಷ ಅಥವಾ ಆತನ ಮಗನಾದ ಯುವರಾಜ ಕೃಷ್ಣನು ವಿಜಯಾದಿತ್ಯನಿಗೆ ತಮ್ಮ ಶತ್ರುಗಳಾದ ಗಂಗರ ಮೇಲೆ ದಂಡಯಾತ್ರೆ ನಡೆಸುವಂತೆ ಹುರಿದುಂಬಿಸಿ ತಮ್ಮ ರಾಜ್ಯದ ಮೂಲಕ ವಿಜಯಾದಿತ್ಯನ ಸೈನ್ಯವು ಹಾದುಹೋಗಲು ಅನುಮತಿಯನ್ನು ಮತ್ತು ಪ್ರಾಯಶಃ ಸೈನ್ಯ ಸಂಪತ್ತನ್ನು ಸಹ ನೀಡಿರಬೇಕು. ಈ ವಿಧವಾದ ಒಂದು ಸಲಹೆ ರಾಷ್ಟ್ರಕೂಟರಿಗೆ ಅನುಕೂಲವಾಗಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ವೆಂಗಿ ಚಾಳುಕ್ಯರು ಮತ್ತು ಗಂಗರು ಇಬ್ಬರೂ ರಾಷ್ಟ್ರಕೂಟರ ಶತ್ರುಗಳು. ಜಯ ಯಾರ ಪರವೇ ಆದರೂ ಪರಸ್ಪರ ಯುದ್ಧ ಇಬ್ಬರನ್ನು ಸತ್ವಹೀನ ಮಾಡುವುದರಲ್ಲಿ ಸಂದೇಹವೇ ಇರಲಿಲ್ಲ ಎಂದು ಡಾ. ಅಲ್ತೇಕರ್‌ರವರು ಈ ವಿಷಯದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಇದರಿಂದಾಗಿ ವಿಜಯಾದಿತ್ಯನು ಪ್ರಾಯಶಃ ರಾಷ್ಟ್ರಕೂಟರಿಂದ ಪ್ರೇರಿತನಾಗಿ ರಾಷ್ಟ್ರಕೂಟರ ವೈರಿಗಳಾದ ಗಂಗ ನೊಳಂಬರನ್ನು ಮೊದಲು ಸೋಲಿಸಿ ತನ್ನ ಸಾಮರ್ಥ್ಯವನ್ನು ವೃದ್ಧಿಪಡಿಸಿಕೊಂಡು ಮತ್ತೆ ರಾಷ್ಟ್ರಕೂಟರ ಮೇಲೆಯೇ ಯುದ್ಧಹೂಡುವ ಆಲೋಚನೆಯಿಂದಲೂ ಗಂಗರ ಮೇಲೆ ದಂಡೆತ್ತಿ ಬಂದನು.

ವೆಂಗಿ ಚಾಳುಕ್ಯರ ಮತ್ತು ಗಂಗರ ರಾಜ್ಯಗಳ ನಡುವೆ ನೊಳಂಬರು ಆಳುತ್ತಿದ್ದುದರಿಂದ ನೊಳಂಬರ ಮೇಲೆಯೇ ವಿಜಯಾದಿತ್ಯನ ದಾಳಿಯು ಮೊದಲ ಪೆಟ್ಟು ಬಿದ್ದದ್ದು. ಮೇಲೆ ಉಕ್ತವಾದ ಎಲ್ಲ ಶಾಸನಗಳಲ್ಲಿಯೂ ವಿಜಯಾದಿತ್ಯನು ಮೊದಲು ನೊಳಂಬರನ್ನು, ನಂತರ ಗಂಗರನ್ನು ಸೋಲಿಸಿ ನಂತರ ರಾಷ್ಟ್ರಕೂಟರ ಮೇಲೆ ಯುದ್ಧಮಾಡಿದನೆಂದು ತಿಳಿದುಬರುವುದರಿಂದ ವಿಜಯಾದಿತ್ಯನು ಮೊದಲು ನೊಳಂಬ ರಾಜನಾದ ಮಂಗಿರಾಜನನ್ನು ಕೊಂದು ಗಂಗರನ್ನು ಸೋಲಿಸಿದ ವಿಚಾರ ನಿಸ್ಸಂದೇಹವಾದದ್ದು. ನಂತರ ಗಂಗ ನೊಳಂಬರ ಮೇಲಿನ ವಿಜಯೋತ್ಸಾಹದಿಂದ ಮತ್ತನಾದ ವಿಜಯಾದಿತ್ಯನು ರಾಷ್ಟ್ರಕೂಟರ ಮೇಲೆ ದಂಡೆತ್ತಿ ಹೋದನು. ರಾಷ್ಟ್ರಕೂಟರ ಮೇಲಿನ ಈ ದಂಡಯಾತ್ರೆಯು ಪ್ರಾಯಶಃ ಅಮೋಘವರ್ಷನ ರಾಜ್ಯಭಾರದ ಕೊನೆಯ ದಿನಗಳಲ್ಲಿ ಅಥವಾ ಆತನ ಮಗನಾದ ಕೃಷ್ಣನು ಪಟ್ಟಕ್ಕೆ ಬಂದ ಮೊದಲ ದಿನಗಳಲ್ಲಿ ನಡೆದಿರಬೇಕೆಂದು ಮೇಲೆಯೇ ಹೇಳಿದೆ ಆದುದರಿಂದ ಗುಣಗವಿಜಯಾದಿತ್ಯನ ಈ ದಾಳಿಯು ಸುಮಾರು ಕ್ರಿ.ಶ. 878–881ರ ಮಧ್ಯದಲ್ಲಿ ನಡೆದಿರಬೇಕು. ಇದಕ್ಕೆ ಮೊದಲು ಗುಣಗವಿಜಯಾದಿತ್ಯನು ನೊಳಂಬರ ಮೇಲೆ ಮತ್ತು ಗಂಗರ ಮೇಲೆ ಯುದ್ಧಮಾಡಿದ್ದರಿಂದ ನೊಳಂಬರ ಮೇಲಿನ ದಾಳಿಯು ಪ್ರಾಯಶಃ ಸು. 875–878ರ ನಡುವೆ ನಡೆದಿರಬೇಕು.

ಮೇಲೆ ಹೇಳಿದಂತೆ ಆ ಸಮಯದಲ್ಲಿ ನೊಳಂಬ ರಾಜ್ಯದಲ್ಲಿ ಪೊಳಲ್ಚೋರ ನೊಳಂಬಾಧಿರಾಜನ ರಾಜ್ಯಭಾರವು ಮುಗಿಯಲು ಬಂದಿದ್ದು ಆತನ ಮಗ ಮಹೇಂದ್ರಾಧಿರಾಜನು ನೊಳಂಬ ಸಿಂಹಾಸನವನ್ನೇರಲಿದ್ದನು. ಆದುದರಿಂದ ವಿಜಯಾದಿತ್ಯನಿಂದ ಹತನಾದ ನೊಳಂಬ ರಾಷ್ಟ್ರದ ಮಂಗಿರಾಜನು ಈ ಇಬ್ಬರು ನೊಳಂಬ ರಾಜರಲ್ಲಿ ಒಬ್ಬನಿರಬೇಕು. ಈತನು ನೊಳಂಬಾಧಿರಾಜ ಮಹೇಂದ್ರನಾಗಿರಲು ಖಂಡಿತ ಸಾಧ್ಯವಿಲ್ಲ. ಏಕೆಂದರೆ ಮಹೇಂದ್ರನು ಕ್ರಿ. ಶ. 878ರಿಂದ 897ರವರೆಗೆ ರಾಜ್ಯವಾಳಿದ್ದಕ್ಕೆ ನಿಖರವಾದ ದಾಖಲೆಗಳಿವೆ.[5] ಆದುದರಿಂದ ಮಂಗಿರಾಜನು ಮಹೇಂದ್ರನ ತಂದೆಯೂ ಎರಡನೆಯ ರಾಚಮಲ್ಲನ ಮಿತ್ರನೂ ಆದ ಪೊಳಲ್ಚೋರ ನೊಳಂಬಾಧಿರಾಜನಾಗಿರಬೇಕು. ಒಂದು ಪಕ್ಷ ಮಂಗಿರಾಜನು ಪೊಳಲ್ಚೋರನಾಗಿ

ದ್ದಲ್ಲಿ ವಿಜಯಾದಿತ್ಯನು ಮಂಗಿರಾಜನನ್ನು ಕ್ರಿ.ಶ. 878ರ ಮೊದಲೇ ಕೊಂದಿರಬೇಕು. ಪೊಳಲ್ಚೋರನ ರಾಜ್ಯಭಾರಕಾಲದ ಕಡೆಯ ವರ್ಷಗಳ ವಿವರಗಳು ನಮಗೆ ಹೆಚ್ಚಾಗಿ ತಿಳಿದಿಲ್ಲ ಮತ್ತು ಈತನ ರಾಜ್ಯಭಾರ ಕ್ರಿ.ಶ. ಸು 875ರ ಹೊತ್ತಿಗೆ ಕೊನೆಗೊಂಡಿತ್ತೆಂಬುದು ನಿಸ್ಸಂದೇಹ.

ಗುಣಗ ವಿಜಯಾದಿತ್ಯನಿಂದ ಹತನಾದ ಮಂಗಿರಾಜನು ಮೇಲೆ ಹೇಳಿದ ನೊಳಂಬರಾಜನಲ್ಲದೆ ನೊಳಂಬರಾಷ್ಟ್ರದ ಇತರ ಬೇರೆ ವ್ಯಕ್ತಿಯಾಗಿರುವ ಸಾಧ್ಯತೆಯಿಲ್ಲವೆಂದು ಹೇಳಬಹುದು. ಏಕೆಂದರೆ ಪೂರ್ವ ಚಾಳುಕ್ಯ ಶಾಸನಗಳು ಸ್ಪಷ್ಟವಾಗಿ ಮಂಗಿಯನ್ನು ನೊಳಂಬ ರಾಷ್ಟ್ರದ ರಾಜನೆಂದು ಹೇಳುತ್ತವೆ. ಈತನು ಬಹಳ ಪರಾಕ್ರಮಶಾಲಿಯಾಗಿದ್ದು ಈತನನ್ನು ಕೊಲ್ಲುವುದು ಸುಲಭವಾದ ಕಾರ್ಯವಾಗಿರಲಿಲ್ಲವೆಂಬುದು ಖಚಿತ. ಏಕೆಂದರೆ ಮಚಲೀಪಟ್ಟಣ ತಾಮ್ರಶಾಸನದಲ್ಲಿ[6] ಹೇಳಿರುವಂತೆ ವಿಜಯಾದಿತ್ಯನು ಈತನನ್ನು ಕೊಲ್ಲುವ ಯುಕ್ತಿಯನ್ನು ವಿನಯಾದಿಶರ್ಮನೆಂಬ ಬ್ರಾಹ್ಮಣನಿಂದ ತಿಳಿದುಕೊಂಡನೆಂದು ಹೇಳಿದೆ. ಆದ್ದರಿಂದ ಮಂಗಿಯು ನೊಳಂಬ ರಾಷ್ಟ್ರದ ಅತ್ಯಂತ ಪರಾಕ್ರಮಿ ರಾಜನೆಂಬುದು ಖಚಿತ.

ನೊಳಂಬರ ವಂಶದಲ್ಲಿ ಆ ಸಮಯದಲ್ಲಿ ಆಳುತ್ತಿದ್ದ ರಾಜನೆಂದರೆ ಒಂದನೆಯ ಪೊಳಲ್ಚೋರನೆಂದು ಮತ್ತು ಈತನ ರಾಜ್ಯಭಾರವೂ ಅದೇ ಸಮಯಕ್ಕೆ ಸರಿಯಾಗಿ ಕೊನೆಗೊಂಡಿತೆಂದು ಮೇಲೆ ಹೇಳಿದೆ. ನೊಳಂಬಾಧಿರಾಜ ಪೊಳಲ್ಚೋರನು ಗಂಗರ ದೊರೆ ಎರಡನೆಯ ರಾಜಮಲ್ಲನ ಮಹಾಸಾಮಂತನಾಗಿದ್ದನು. ಆದ್ದರಿಂದ ಈತನು ಗಂಗರ ಪರವಾಗಿ ಯುದ್ಧದಲ್ಲಿ ಭಾಗವಹಿಸಿದ್ದನೆಂಬುದು ನಿಸ್ಸಂದೇಹ. ತಿಪಟೂರು ತಾಲ್ಲೂಕಿನ ಆಲಬೂರು ಎಂಬಲ್ಲಿ ದೊರೆತಿರುವ ಶಾಸನದಲ್ಲಿ[7] ರಾಜಮಲ್ಲ ಪೆರ್ಮಾನಡಿಯು ರಾಜ್ಯವಾಳುತ್ತಿರುವಾಗ ಪೊಳಲ್ಚೋರನೆಂಬ ಮಹಾಸಾಮಂತನು ಕೋಟೆಯನ್ನು ಕೈವಶಮಾಡಿಕೊಳ್ಳಲು ದಂಡೆತ್ತಿಹೋದನೆಂದು ಉಕ್ತವಾಗಿದೆ. ಶಾಸನದಲ್ಲಿ ಕಾಲವನ್ನು ನಮೂದಿಸಿಲ್ಲವಾದ್ದರಿಂದ ಲಿಪಿಯ ಆಧಾರದ ಮೇಲೆ ಕ್ರಿ.ಶ. ಸುಮಾರು 880ರ ವೇಳೆಗೆ ಈ ಶಾಸನವು ಸೇರಿದ್ದೆಂದು ಹೇಳಬಹುದು. ಆದ್ದರಿಂದ ಈ ಶಾಸನದಲ್ಲಿ ಉಕ್ತನಾದ ರಾಜಮಲ್ಲನು ಎರಡನೆಯ ರಾಜಮಲ್ಲನೆಂದು ಮತ್ತು ಪೊಳಲ್ಚೋರನು ನೊಳಂಬಾಧಿರಾಜ ಪೊಳಲ್ಚೋರನೆಂದು ಊಹಿಸಬಹುದು. ಈ ಶಾಸನದಿಂದ ಪೊಳಲ್ಚೋರನು ಯಾರ ಮೇಲಾಗಲಿ ದಂಡೆತ್ತಿ ಹೋದನೆಂದು ತಿಳಿದುಬರುವುದಿಲ್ಲ. ಆ ಸಮಯದಲ್ಲಿ ನೊಳಂಬರಿಗೂ ರಾಷ್ಟ್ರಕೂಟರಿಗೂ ಅಂತಹ ಯಾವ ಮುಖ್ಯವಾದ ಯುದ್ಧವೂ ನಡೆದುದಕ್ಕೆ ದಾಖಲೆ ಇಲ್ಲದಿರುವುದರಿಂದ, ಈ ಯುದ್ಧವು ಪ್ರಾಯಶಃ ಗಂಗ–ನೊಳಂಬರಿಗೆ ಮತ್ತು ಪೂರ್ವ ಚಾಳುಕ್ಯರಿಗೂ ನಡೆದ ಯುದ್ಧವಾಗಿರಲು ಸಾಧ್ಯ. ಪ್ರಾಯಶಃ ಪೊಳಲ್ಚೋರನು ಈ ಯುದ್ಧದಲ್ಲಿ ಹತನಾಗಿರಬೇಕು ಏಕೆಂದರೆ ಇದಾದನಂತರ ಪೊಳಲ್ಚೋರನ ವಿಚಾರ ನಮಗೆ ತಿಳಿಯದು. ಒಂದುವೇಳೆ ಇದು ನಿಜವಾದಲ್ಲಿ ನೊಳಂಬಾಧಿರಾಜ ಪೊಳಲ್ಚೋರನೇ ಗುಣಗವಿಜಯಾದಿತ್ಯನಿಂದ ಹತನಾದ ಮಂಗಿರಾಜನೆಂದು ಹೇಳಬಹುದು.

ಮಲಿಯಪೂಂಡಿ ಶಾಸನದಲ್ಲಿ ವಿಜಯಾದಿತ್ಯನು ಘೋರ ಕಾಳಗದಲ್ಲಿ ನೊಳಂಬರಾಷ್ಟ್ರದ ಪ್ರಬಲ ದೊರೆಯಾದ ಮಂಗಿಯನ್ನು ಕೊಂದು, ಗಂಗ ಕೂಟದಲ್ಲಿ ಆಶ್ರಯ ಪಡೆದಿದ್ದ ಗಂಗರನ್ನು ಸೋಲಿಸಿದನೆಂದು ಹೇಳಿದೆ. ಇದರಿಂದಾಗಿ ನೊಳಂಬರ ಮತ್ತು ಗಂಗರಾಜ್ಯದ ಕೆಲವು ಭಾಗವು ಸ್ವಲ್ಪ ಕಾಲವಾದರೂ ಪೂರ್ವ ಚಾಳುಕ್ಯರ ಕೈವಶದಲ್ಲಿತ್ತೆಂದು ಹೇಳಬಹುದು. ಗಂಗರ ಮೇಲಿನ ವಿಜಯದ ನಂತರ ವಿಜಯಾದಿತ್ಯನು ರಾಷ್ಟ್ರಕೂಟರ ಮೇಲೆ ತಿರುಗಿಬಿದ್ದು ಕಿರಣಪುರವನ್ನು ಸುಟ್ಟನೆಂದೂ ನಮ ಮೇಲೆ ವಿವರಿಸಿದ ಪೂರ್ವ ಚಾಳುಕ್ಯ ಶಾಸನಗಳಿಂದ ತಿಳಿದುಬರುತ್ತದೆ.

ಪ್ರಾಯಶಃ ವಿಜಯಾದಿತ್ಯನ ಸೈನ್ಯವು ರಾಷ್ಟ್ರಕೂಟರ ಮೇಲೆ ಹೋದಾಗ ನೊಳಂಬರು

ಮತ್ತು ಗಂಗರು ತಮ್ಮ ರಾಜ್ಯವನ್ನು ಪುನಃ ವಶಪಡಿಸಿಕೊಂಡರೆಂದು ತೋರುತ್ತದೆ. ಪೊಳಲ್ಚೋರನ ಮಗನಾದ ಮಹೇಂದ್ರಾಧಿರಾಜನ ಕ್ರಿ.ಶ. 878ರ ಬರಗೂರು ಮತ್ತು ಹೇಮಾವತಿ ಶಾಸನಗಳಲ್ಲಿ[8] ಮಹೇಂದ್ರನು ಚೋರ ಮೊದಲಾದ ದಾಯಿಗರನ್ನು ನಿರ್ಮೂಲಗೊಳಿಸಿ ರಾಜ್ಯವಾಳುತ್ತಿದ್ದನೆಂದು ತಿಳಿದುಬರುತ್ತದೆ. ಇದರಿಂದಾಗಿ ಪೊಳಲ್ಚೋರನ ಮರಣಾನಂತರ ರಾಜ್ಯವು ಶತ್ರುಗಳ ಕೈವಶವಾಗಿತ್ತೆಂದು ತಿಳಿಯಬಹುದು. ಈ ಶತ್ರುಗಳು ಪೂರ್ವಚಾಲುಕ್ಯರಾಗಿರಲೂ ಸಾಧ್ಯ.

ಮೇಲೆ ವಿವರಿಸಿದ ಎಲ್ಲ ಚಾರಿತ್ರಿಕ ಆಧಾರಗಳಿಂದ ಪೂರ್ವ ಚಾಳುಕ್ಯ ವಂಶದ ಗುಣಗ ವಿಜಯಾದಿತ್ಯನು ಕ್ರಿ.ಶ. ಸು. 875ರಲ್ಲಿ ನೊಳಂಬರ ಮೇಲೆ ಮತ್ತು ಗಂಗರ ಮೇಲೆ ದಂಡೆತ್ತಿ ನೊಳಂಬ ರಾಷ್ಟ್ರದ ಅತ್ಯಂತ ಪರಾಕ್ರಮಿ ದೊರೆಯಾದ ಮಂಗಿರಾಜನನ್ನು ಯುದ್ಧದಲ್ಲಿ ಕೊಂದನೆಂದೂ ಪ್ರಾಯಶಃ ಈ ಮಂಗಿರಾಜನು ನೊಳಂಬಾಧಿರಾಜ ಒಂದನೆಯ ಪೊಳಲ್ಚೋರನೇ ಆಗಿರಬೇಕೆಂದೂ ಹೇಳಬಹುದು.

ಅಡಿ ಟಿಪ್ಪಣಿಗಳು

1. ಎಪಿಗ್ರಾಫಿಯ ಇಂಡಿಕ, ಸಂಪುಟ IX ಪು. 51
2. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ I, ಪು. 39-42
3. ಎ. ಇ., ಸಂ. IV, ಪು. 239
4. *Rashtrakutas and Their Times*, Poona, 1967, p. 76
5. *The Political and Cultural History of the Nolamba Pallavas* (Ph. D. Thesis of the author, unpublished) p. 47.
6. ಎ. ಇ., ಸಂ. V, p, 125
7. ಎಪಿಗ್ರಾಫಿಯ ಕರ್ನಾಟಿಕ ಸಂ. XII, TP 47
8. ಅದೇ Si, 24 ಮತ್ತು 37

ನೊಳಂಬಾಧಿರಾಜನು ಒಬ್ಬ ಮಹತ್ವಾಕಾಂಕ್ಷಿ ದೊರೆ. ಈತನು ಕೇವಲ ಒಂದು ಸಣ್ಣ ರಾಜ್ಯದ ಅಧಿಪತಿಯಾಗಿ ಬಂದು, ಆ ಕಾಲದಲ್ಲಿ ಬಹಳ ಶಕ್ತಿಶಾಲಿಯಾಗಿದ್ದ ಗಂಗರ ಕುಲವನ್ನೇ ಧ್ವಂಸಮಾಡಲು ಹೊರಟ ವೀರ. ಇವನ ಕಾಲ ದಕ್ಷಿಣ ಭಾರತದ ರಾಜಕೀಯದಲ್ಲಿ ಒಂದು ನಿರ್ಣಾಯಕ ಕಾಲ. ಏಕೆಂದರೆ ನೊಳಂಬರಿಗೂ ಬಾಣರಿಗೂ ಗಂಗರುಸಾಸಿರಕ್ಕಾಗಿ ಒಂದೇಸಮನೆ ನಡೆಯುತ್ತಿದ್ದ ಯುದ್ಧಗಳು ಕೊನೆಗೊಂಡು, ಗಂಗರು ಸಾಸಿರ ಪ್ರಾಂತ್ಯದ ಅಧಿಪತ್ಯ ನೊಳಂಬರಿಗೆ ಸೇರಿತು. ಮಹೇಂದ್ರನ ಈ ಹೊಡೆತದಿಂದ ಬಾಣರು ಪುನಃ ಚೇತರಿಸಿಕೊಳ್ಳಲೇ ಇಲ್ಲ. ಇವರ ಪತನಾನಂತರ ಬಾಣರಾಜ್ಯವು ಚೋಳರ ಕೈಸೇರಿಹೋಯಿತು. ಆದ್ದರಿಂದ ಮಹೇಂದ್ರನ ಮಹಾಬಲಿಕುಲವಿಧ್ವಂಸಕನೆಂಬ ಬಿರುದು ಕೇವಲ ಉತ್ಪ್ರೇಕ್ಷೆಯಾಗಿರದೆ, ಅವನ ಮಹಾಸಾಧನೆಯೊಂದರ ಚಿಹ್ನೆಯಾಗಿ ಉಳಿಯಿತು.

ನೊಳಂಬ ಇತಿಹಾಸದರ್ಶನ—ಪು. 34

ಎಂ. ಮಾದಯ್ಯ
ಸಿ. ಕೆ. ರೇಣುಕಾರ್ಯ

ಗುನ್ನಾರ್ ಕೆ. ಮಿರ್ಡಾಲ್ ಮತ್ತು ಫ್ರೆಡ್ರಿಕ್ ವಾನ್‌ಹೈಕ್

1974ರ ಅರ್ಥಶಾಸ್ತ್ರದ ನೊಬೆಲ್ ಬಹುಮಾನ ಸ್ವೀಡನ್ನಿನ ಮಿರ್ಡಾಲ್ ಮತ್ತು ಆಸ್ಟ್ರಿಯಾದ ಹೈಕ್‌ರವರಿಗೆ ಸಂಯುಕ್ತವಾಗಿ ದೊರೆಯಿತು. ಈ ಇಬ್ಬರು ಅರ್ಥವಿಜ್ಞಾನಿಗಳೂ ಆರ್ಥಿಕ ಚಿಂತನೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಬಹುಮಾನವನ್ನು ನೀಡಿರುವ ಸ್ವೀಡನ್ನಿನ ರಾಯಲ್ ಅಕೆಡಮಿ, 1969ರಲ್ಲಿ ಅರ್ಥಶಾಸ್ತ್ರಕ್ಕೆ ನೊಬೆಲ್ ಬಹುಮಾನ ನೀಡಿಕೆ ಪ್ರಾರಂಭವಾದಾಗಿನಿಂದಲೂ ಇವರಿಬ್ಬರ ಹೆಸರನ್ನು ಪರಿಗಣಿಸಲಾಗಿದ್ದು, ಈ ವರ್ಷ ಅವರಿಗೆ ಬಹುಮಾನವನ್ನು ನೀಡಲಾಗಿದೆ ಎಂದು ಘೋಷಿಸಿದೆ. ಅರ್ಥವಿಜ್ಞಾನದ ಈ ಇಬ್ಬರು ವಿದ್ವಾಂಸರನ್ನು ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ.

ಗುನ್ನಾರ್ ಮಿರ್ಡಾಲ್

ಮಿರ್ಡಾಲ್ 1898ರಲ್ಲಿ ಸ್ವೀಡನ್ನಿನ ಗುಸ್ತಾಫ್ಸ್‌ನಲ್ಲಿ ಜನಿಸಿದ. 1925 ಮತ್ತು 1930ರ ನಡುವೆ ಈತ ಇಂಗ್ಲೆಂಡ್, ಫ್ರಾನ್ಸ್. ಜರ್ಮನಿ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಉನ್ನತ ವ್ಯಾಸಂಗ ನಡೆಸಿದ. 1930-31ರ ಅವಧಿಯಲ್ಲಿ ಮಿರ್ಡಾಲ್, ಜಿನೀವಾದ ಪೋಸ್ಟ್‌ಗ್ರಾಜುಯೇಟ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಸ್ಟಡೀಸ್‌ನಲ್ಲಿ ಉಪಪ್ರಾಧ್ಯಾಪಕನಾಗಿದ್ದ. 1933ರಲ್ಲಿ ಸ್ಟಾಕ್ ಹೋಂ ವಿಶ್ವವಿದಾನಿಲಯ ಮಿರ್ಡಾಲ್‌ನನ್ನು 'ರಾಜಕೀಯ ಅರ್ಥವಿಜ್ಞಾನ' ಮತ್ತು 'ಸಾರ್ವಜನಿಕ ಹಣಕಾಸಿನ' ಲಾರ್ಸ್ ಹೇರಿಟಾ ಪೀಠಕ್ಕೆ ಪ್ರಾಧ್ಯಾಪಕನನ್ನಾಗಿ ನೇಮಕ ಮಾಡಿತು. 1930ರ ದಶಕದಲ್ಲಿ ಮಿರ್ಡಾಲ್, ಪ್ರಾಧ್ಯಾಪಕತನದ ಜೊತೆಗೆ ರಾಜಕೀಯ ಕ್ಷೇತ್ರವನ್ನು ಸಹ ಪ್ರವೇಶಿಸಿದ. ಸರ್ಕಾರಕ್ಕೆ ಈತ ಹಣ–ಕಾಸು ವಿಷಯಗಳ ಸಲಹೆಗಾರನಾಗಿದ್ದ. ಮಿರ್ಡಾಲ್‌ನ ಪತ್ನಿ ಆಲ್ವ ಮಿರ್ಡಾಲ್ ಸಹ ಸಮಾಜಶಾಸ್ತ್ರಜ್ಞೆ. ಇವರಿಬ್ಬರೂ ಒಟ್ಟಾಗಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. ಸ್ವೀಡನ್ನಿನ ಸೆನೆಟ್‌ನಲ್ಲಿ, ಮಿರ್ಡಾಲ್, ಸೋಷಿಯಲ್ ಡೆಮೊಕ್ರಾಟ್ ಸದಸ್ಯನಾಗಿ ಸಹ ಸೇವೆ ಸಲ್ಲಿಸಿದ. ಈತ 1945-47ರ ಅವಧಿಯಲ್ಲಿ ವಾಣಿಜ್ಯ ಮಂತ್ರಿಯೂ ಆಗಿದ್ದ. ಎರಡನೇ ಮಹಾಯುದ್ಧದ ನಂತರ ಯುನೈಟೆಡ್ ನೇಷನ್ಸ್ ಎಕನಾಮಿಕ್ ಕಮಿಷನ್ ಫಾರ್ ಯೂರೋಪ್‌ನ ಕಾರ್ಯಕಾರಿ ಸೆಕ್ರೆಟರಿಯಾಗಿದ್ದ ಕೂಡ. ಅಂದರೆ ಮಿರ್ಡಾಲ್‌ನದು ಬಹುಮುಖ ಪ್ರತಿಭೆ ಎನ್ನುವುದು ಸ್ಪಷ್ಟವಾಗುತ್ತದೆ.

ಮಿರ್‌ಡಾಲ್ ವಿವಿಧ ಕ್ಷೇತ್ರಗಳ ಬಗ್ಗೆ ಬರವಣಿಗೆಗಳನ್ನು ನಡೆಸಿದ್ದಾನೆ. ಇವನ ಆಸಕ್ತಿಗಳು ಹಲವಾರು. ಅರ್ಥವಿಜ್ಞಾನ ತತ್ವಗಳು, ಅಮೆರಿಕಾ ಸಂಯುಕ್ತ ಸಂಸ್ಥಾನದ ನಿಗ್ರೋ ಸಮಸ್ಯೆ, ವಿಶ್ವದ ಆರ್ಥಿಕ ಅಭಿವೃದ್ಧಿ, ವಿಶ್ವಸಂಸ್ಥೆಯ ಆರ್ಥಿಕ ಹಾಗೂ ಸಾಮಾಜಿಕ ನೀತಿಗಳು ಇವುಗಳಲ್ಲಿ ಮುಖ್ಯವಾದವು.

ಮಿರ್ಡಾಲ್‌ನ ಚಿಂತನೆಗಳು ಅವನ ಪ್ರಮುಖ ಗ್ರಂಥಗಳು ಮತ್ತು ನಿಯತಕಾಲಿಕ ಹಾಗೂ ಇತರ ಪತ್ರಿಕೆಗಳಲ್ಲಿ ಅವನು ಪ್ರಕಟಿಸಿರುವ ಲೇಖನಗಳ ಮೂಲಕ ವ್ಯಕ್ತವಾಗಿವೆ. ಅವನ ಮುಖ್ಯ ಕೃತಿಗಳೆಂದರೆ, An American Dilemma, The Negro Problem. and Modern Democracy [1944], Monetary Equalibrium [1931]. The Political element in the Development of Economic Theory [1953], Population a Problem of Democracy [1940]. An International Economy [1956]. Rich Lands and Poor [1957]. Beyond the Welfare State [1960]. Challenge to Affluenence [1963], Asian Drama: An Enquiry into the Poverty of Nations (3 ಸಂಪುಟಗಳು) (1968), Objectivty In Social Research (1969). The Challenge of Wold Poverty World Anti Poverty Programme in Outline[1970]. Against the Stream: Critical Essays on Economics]1973].

ಅರ್ಥ ವಿಜ್ಞಾನದ ವ್ಯಾಪ್ತಿ ತುಂಬಾ ಹಿರಿದಾಗಬೇಕೆಂದು ಮಿರ್ಡಾಲ್ ವಾದಿಸುತ್ತಾನೆ. ಈ ದೃಷ್ಟಿಯಿಂದ ಅವನು ಸಂಪ್ರದಾಯ ಪಂಥವನ್ನು ಟೀಕಿಸುತ್ತಾನೆ. ಮಿರ್ಡಾಲ್‌ನ ಪ್ರಕಾರ ಅರ್ಥವಿಜ್ಞಾನ ಒಂದು ಸಾಂಸ್ಕೃತಿಕ ವಿಜ್ಞಾನ. ಇದು ಸಾರ್ವಜನಿಕರ ಆಸಕ್ತಿಯಿಂದ ಮತ್ತು ಐತಿಹಾಸಿಕ ಅಂಶಗಳಿಂದ ಬೆಳಕಿಗೆ ಬಂದಿರುವ ವಿರಳವಾದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಅಭ್ಯಾಸ ಮಾಡಬೇಕು. ಈ ಅಭ್ಯಾಸಕ್ರಮದಲ್ಲಿ ಅರ್ಥವಿಜ್ಞಾನಿಗಳು ಮನೋವಿಜ್ಞಾನ, ಸಮಾಜಶಾಸ್ತ್ರ, ಐತಿಹಾಸಿಕ ಹಾಗೂ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಯಾವುದೇ ವಿಷಯ ಮಾಹಿತಿಯನ್ನು ಬಳಸಿಕೊಳ್ಳಲು ಹಿಂಜರಿಯಬಾರದು. ಆರ್ಥಿಕ ತತ್ವಗಳು ವಿಶಾಲ ವ್ಯಾಪ್ತಿಯುಳ್ಳವಾಗಿದ್ದು ಸಮಾಜದ ಸಂಸ್ಥೆಗಳ ವಿಶ್ಲೇಷಣೆಯನ್ನೂ ಅವು ಒಳಗೊಳ್ಳಬೇಕು.

ಮಿರ್ಡಾಲ್ ಸಾಮಾಜಿಕ ಮೌಲ್ಯಗಳಿಗೆ ಮತ್ತು ಅರ್ಥಶಾಸ್ತ್ರದ ಅನ್ವೇಷಣೆಗೆ ಇರುವ ಸಂಬಂಧವನ್ನು ಸಹ ಚರ್ಚಿಸುತ್ತಾನೆ. ಪ್ರತಿಯೊಂದು ಸಮಾಜಕ್ಕೂ ಮೌಲ್ಯಗಳಿರುತ್ತವೆ. ಇವುಗಳ ಸಾಧನೆಗಾಗಿ ಜನರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಈ ಮೌಲ್ಯಗಳು ಯಾವುವಾಗಿರುತ್ತವೆ ಎನ್ನುವುದು ಆ ಸಮಾಜದ ಸಂಸ್ಕೃತಿಯನ್ನು ಅವಲಂಬಿಸುತ್ತದೆ. ಉದಾಹರಣೆಗೆ ಆಧುನಿಕ ಕಲ್ಯಾಣ ರಾಜ್ಯದ ಮೌಲ್ಯಗಳೆಂದರೆ, ಉತ್ಪಾದನೆಯಲ್ಲಿ ಹೆಚ್ಚಳ, ಆರ್ಥಿಕ ಸಮಾನತೆ, ರಾಜಕೀಯ ಹಾಗೂ ಸಾಮಾಜಿಕ ಸಮಾನತೆ ಇತ್ಯಾದಿ. ಈ ಮೌಲ್ಯಗಳ ಸಾಧನೆಗಾಗಿ ಜನರು ಕೆಲಸ ಮಾಡುತ್ತಾರೆ. ಸರ್ಕಾರ ಆರ್ಥಿಕ ಚಟುವಟಿಕೆಯನ್ನು ಪ್ರವೇಶಿಸಿ ಈ ಮೌಲ್ಯಗಳ ಸಾಧನೆಗೆ ಅವಕಾಶ ಮಾಡಿಕೊಡುತ್ತದೆ.

ಮಿರ್ಡಾಲ್‌ನ ಅತ್ಯಂತ ಮಹತ್ವ ಕೃತಿಯೆಂದರೆ Asian Drama. ಈ ಮೂರು ಸಂಪುಟಗಳ ಬೃಹತ್‌ಕೃತಿಯಲ್ಲಿ ಮತ್ತು ಅದರ ಸಂಕ್ಷಿಪ್ತ ಸ್ವರೂಪದ ಕೃತಿಯಾದ The Challenge of World Poverty ಗ್ರಂಥದಲ್ಲಿ, ಮಿರ್ಡಾಲ್ ದಕ್ಷಿಣ ಏಷ್ಯಾದ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಚಟುವಟಿಕೆಗಳನ್ನು ಅತ್ಯಂತ ಕೂಲಂಕಷವಾಗಿ ಚರ್ಚಿಸಿ, ಅವುಗಳು

ಆರ್ಥಿಕ ಬೆಳವಣಿಗೆಯನ್ನು ಅನುಭವಿಸಲು ಕೈಗೊಳ್ಳಬೇಕಾದ ಅಗತ್ಯ ಮಾರ್ಗೋಪಾಯಗಳನ್ನು ಸೂಚಿಸುತ್ತಾನೆ. ಈ ಗ್ರಂಥಗಳು ಮಿರ್ಡಾಲ್‌ಗೆ ಅಪಾರ ಯಶಸ್ಸನ್ನು ತಂದು ಕೊಟ್ಟಿವೆ. ಈ ಕೃತಿಗಳಲ್ಲೇ ಅವನು ಸಾಂಪ್ರದಾಯಿಕ ಆರ್ಥಿಕ ವಿಶ್ಲೇಷಣ ಕ್ರಮದ ನಿರರ್ಥಕತೆ ಮತ್ತು ಅರ್ಥಶಾಸ್ತ್ರ ಕೈಗೊಳ್ಳಬೇಕಾಗಿರುವ ಹೊಸ ವಿಶ್ಲೇಷಣ ಕ್ರಮವನ್ನು ಸಹ ಚರ್ಚಿಸುತ್ತಾನೆ.

ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಪ್ರತಿಯೊಂದೂ ತನ್ನದೇ ವಿಶಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದು, ಪ್ರತಿಯೊಂದು ರಾಷ್ಟ್ರವೂ ನಿರ್ದಿಷ್ಟವಾದ ಮೌಲ್ಯಗಳ ಸಾಧನೆಯಲ್ಲಿ ತೊಡಗಿದೆ. ಈ ಮೌಲ್ಯಗಳನ್ನು ಮಿರ್ಡಾಲ್ 'ಆಧುನೀಕರಣದ ಗುರಿ' ಎಂದು ಕರೆಯುತ್ತಾನೆ. ಈ ಮೌಲ್ಯಗಳೆಂದರೆ, ಕಾರ್ಮಿಕರ ಉತ್ಪಾದಕತೆಯನ್ನು ಹೆಚ್ಚಿಸುವುದು, ಎತ್ತರದ ಜೀವನ ಮಟ್ಟದ ಸಾಧನೆ, ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ಸಾಧನೆ, ಪ್ರಜಾಪ್ರಭುತ್ವವನ್ನು ಕೆಳಮಟ್ಟದಿಂದಲೂ ಉಳಿಸಿಕೊಂಡು ರಾಷ್ಟ್ರೀಯ ಸ್ವಾತಂತ್ರ್ಯತೆಯನ್ನು ಸಾಧಿಸುವುದು.

ಈ ರಾಷ್ಟ್ರಗಳಲ್ಲಿ ಕಾರ್ಯ – ಕಾರಣ ಸಂಬಂಧವಿರುವ ಆರು ಪ್ರಮುಖ ಅಂಶಗಳನ್ನು ಮಿರ್ಡಾಲ್ ಗುರುತಿಸುತ್ತಾನೆ. ಅವುಗಳೆಂದರೆ (1) ಉತ್ಪಾದನೆ ಮತ್ತು ಆದಾಯ (2) ಉತ್ಪಾದನೆಯ ಪರಿಸ್ಥಿತಿ (3) ಜೀವನಮಟ್ಟ (4) ಜೀವನ ಮತ್ತು ಕೆಲಸದ ಬಗ್ಗೆ ಜನರ ಮನೋಭಾವ (5) ಸಂಸ್ಥೆಗಳು ಮತ್ತು (6) ಸಾಮಾಜಿಕ ಹಾಗೂ ಆರ್ಥಿಕ ನೀತಿಗಳು. ಈ ಆರು ಅಂಶಗಳು, ಈ ರಾಷ್ಟ್ರಗಳ ಸಾಮಾಜಿಕ ವಿಧಾನಗಳಲ್ಲಿ ಮೇಲ್ಮುಖವಾಗಿ ಚಲಿಸುವ ಅಥವಾ ಕೆಳಮುಖವಾಗಿ ಚಲಿಸುವ ಸಂಚಯ ವಿಧಾನವನ್ನು ಉಂಟುಮಾಡಬಲ್ಲವು. ಇಡೀ ಸಾಮಾಜಿಕ ವಿಧಾನವೇ ಮೇಲ್ಮುಖವಾಗಿ ಚಲಿಸುವುದನ್ನು ಮಿರ್ಡಾಲ್ 'ಆರ್ಥಿಕ ಅಭಿವೃದ್ಧಿ' ಎಂದು ಕರೆಯುತ್ತಾನೆ. ಈ ಕಾರ್ಯಕಾರಣ ಸಂಬಂಧವನ್ನುಂಟುಮಾಡುವ ಅಂಶಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ದಕ್ಷಿಣ ಏಷ್ಯಾದ ರಾಷ್ಟ್ರಗಳು ಅಭಿವೃದ್ಧಿ ಪಥವನ್ನು ಇನ್ನೂ ಹಿಡಿದಿಲ್ಲ. ಇಷ್ಟೇ ಅಲ್ಲ, ಮಿರ್ಡಾಲ್‌ನ ದೃಷ್ಟಿಯಲ್ಲಿ, ಅಭಿವೃದ್ಧಿಯ ಜಾಡಿಗೆ ಈ ರಾಷ್ಟ್ರಗಳು ಬರುವುದು ಸಹ ತುಂಬಾ ಕಷ್ಟ. ಪಾಶ್ಚಾತ್ಯ ರಾಷ್ಟ್ರಗಳ ಸಾಮಾಜಿಕ ಪರಿಸ್ಥಿತಿಗಳು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಪೋಷಕವಾಗಿದ್ದರೆ, ಏಷ್ಯಾದ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿಗಳು ಅಭಿವೃದ್ಧಿಗೆ ತುಂಬಾ ಅಡೆ–ತಡೆಯನ್ನೊಡ್ಡುತ್ತಿವೆ.

ಮಿರ್ಡಾಲ್ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ, ಭಾರತದ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತಾನೆ. ಈ ರಾಷ್ಟ್ರ ವ್ಯಾಪಕವಾದ ಆರ್ಥಿಕ ಯೋಜನೆಯನ್ನು ಅನುಸರಿಸುತ್ತಾ ಬಂದಿದ್ದರೂ ತೀರ ಹಿಂದುಳಿದ ರಾಷ್ಟ್ರವಾಗಿದೆ. ಇದರ ತಲಾ ನಿವ್ವಳ ಉತ್ಪನ್ನ ಕೇವಲ ಶೇ. 1ರ ದರದಲ್ಲಿ ಮಾತ್ರ ಏರುತ್ತಾ ಬಂದಿದೆ. ಭಾರತವನ್ನು ಮಿರ್ಡಾಲ್ "ಮೃದುರಾಜ್ಯ" (Soft State ಎಂದು ಕರೆಯುತ್ತಾನೆ. ಇದನ್ನು 'ಬಲಿಷ್ಠ ರಾಜ್ಯ' (Strong State)ವನ್ನಾಗಿ ಪರಿವರ್ತಿಸಬೇಕಾದುದು ಅಗತ್ಯ.

ಸರ್ಕಾರ ತುಂಬಾ ವ್ಯಾಪಕವಾದ ಯೋಜನೆಯನ್ನು ಅನುಸರಿಸುವುದರಿಂದ ಮಾತ್ರ ಇದು ಸಾಧ್ಯವೆಂದು ಮಿರ್ಡಾಲ್ ಅಭಿಪ್ರಾಯ ಪಡುತ್ತಾನೆ. ನವ ಭಾರತದ ನಿರ್ಮಾಣವಾಗಬೇಕಾದರೆ, ತೀವ್ರವಾದ ಭೂಸುಧಾರಣೆ, ಕುಟುಂಬ ನಿಯಂತ್ರಣ, ಆಡಳಿತ ಕ್ರಮದಲ್ಲಿ ಸುಧಾರಣೆಗಳು ನಡೆಯಬೇಕು. ಭ್ರಷ್ಟಾಚಾರ ಎಲ್ಲ ಮಟ್ಟಗಳಿಂದ ಮಾಯವಾಗಬೇಕು. ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯಾಗಬೇಕು. ಆಗ ಮಾತ್ರ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯವೆಂಬ ಭಾವನೆಯನ್ನು ಮಿರ್ಡಾಲ್ ವ್ಯಕ್ತಪಡಿಸುತ್ತಾನೆ. ಆದರೆ ಈ ಕ್ರಾಂತಿಯ ಸ್ವರೂಪ

ಯಾವುದಾಗಿರಬೇಕು ಎಂಬುದರ ಬಗ್ಗೆ ಮಿರ್ಡಾಲ್ ಮೌನ ತಾಳುತ್ತಾನೆ. ಆದರೆ ಇಂತಹ ತೀವ್ರತರ ಬದಲಾವಣೆಗಳು, ಅಭಿವೃದ್ಧಶೀಲ ರಾಷ್ಟಗಳಲ್ಲಿ ಉಂಟಾಗಬೇಕಾದರೆ, ಸ್ವಲ್ಪಮಟ್ಟಿಗೆ ಅದರ ಜವಾಬ್ದಾರಿಯನ್ನು, ಮುಂದುವರಿದಿರುವ ರಾಷ್ಟ್ರಗಳು ವಹಿಸಿಕೊಳ್ಳಬೇಕೆಂದು ಮಿರ್ಡಾಲ್ ಕರೆ ನೀಡುತ್ತಾನೆ.

ಮಿರ್ಡಾಲ್‌ನ ಸಿದ್ಧಾಂತಗಳನ್ನು ಟೀಕಿಸುವವರು ಕಡಿಮೆಯೇನಲ್ಲ. ಅವನ ಸಿದ್ಧಾಂತ ಅಲ್ಪಕಾಲದ ಆರ್ಥಿಕ ಚಟುವಟಿಕೆ ಮತ್ತು ದೀರ್ಘಕಾಲದ ಚಟುವಟಿಕೆಗಳನ್ನು ಸಂಯೋಜಿಸುವುದಿಲ್ಲ ಎನ್ನುವುದು ಒಂದು ಟೀಕೆ. ಹಾಗೆಯೇ ಮಿರ್ಡಾಲ್ ಯಾವ 'ಸಾಮಾನ್ಯತತ್ವ'ವನ್ನೂ ನಿರೂಪಿಸುವುದಿಲ್ಲ. ಬದಲಿಗೆ ಅಭಿವೃದ್ಧಿಗಾಗಿ ತೀವ್ರತರವಾದ ಸಾಂಸ್ಥಿಕ ಬದಲಾವಣೆಗಳಾಗಬೇಕು ಎಂದು ಸೂಚಿಸುತ್ತಾನೆ. ಇಂತಹ ಸೂಚನೆಗಳಿಂದ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಮಟ್ಟದ ನೆರವು ದೊರೆಯುವುದಿಲ್ಲ ಎಂದು ಸಹ ಹೇಳಲಾಗುತ್ತದೆ. ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ, ಮನೋವಿಜ್ಞಾನ, ಅರ್ಥಶಾಸ್ತ್ರದ ಅಂಶಗಳನ್ನೆಲ್ಲಾ ಪರಿಶೀಲಿಸಬೇಕೆಂಬ ಮಿರ್ಡಾಲ್‌ನ ವಾದ ಅನೇಕ ತೊಡಕುಗಳಿಗೆ ಅರ್ಥವಿಜ್ಞಾನಿಯನ್ನು ಗುರಿಮಾಡುತ್ತದೆ. ಇಷ್ಟೇ ಅಲ್ಲದೆ, ಮಿರ್ಡಾಲ್ ಸಾಂಪ್ರದಾಯಿಕ ಅರ್ಥವಿಜ್ಞಾನ ವಿಶ್ಲೇಷಣ ಕ್ರಮವನ್ನು ಖಂಡಿಸುತ್ತಾನೆ. ಆದರೆ ಇದಕ್ಕೆ ಪರ್ಯಾಯವಾದ ಯಾವ ವಿಶ್ಲೇಷಣ ಕ್ರಮವನ್ನೂ ಅವನು ಸೂಚಿಸುವುದಿಲ್ಲ.

ಆದರೆ, ಮೇಲಿನ ಮಿತಿಗಳು, ಮಿರ್ಡಾಲ್‌ನ ಹಿರಿಮೆಯನ್ನು ಕಡಿಮೆ ಮಾಡುವುದಿಲ್ಲ. ಆತ ಕ್ರಾಂತಿಕಾರಕ ವಿಚಾರಗಳನ್ನು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಂಡಿಸಿದ್ದಾನೆ. ಇಂದೂ ಸಹ ಅವನು ಆರ್ಥಿಕ ಅಭಿವೃದ್ಧಿಯನ್ನು ಕುರಿತು ಪ್ರಖರವಾಗಿ ತನ್ನ ವಾದಗಳನ್ನು ಮಂಡಿಸುತ್ತಿದ್ದಾನೆ ಮತ್ತು ಅನೇಕ ಬರಹಗಳ ಮೂಲಕ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದಾನೆ. ಅವನ "Asian Drama" ಗ್ರಂಥ, ಅರ್ಥಶಾಸ್ತ್ರದ ಇತರ ಪ್ರಮುಖ ಗ್ರಂಥಗಳಾದ, Wealth of Nations, Das Kapital ಮತ್ತು General Theory ಸಾಲಿನಲ್ಲಿ ನಿಲ್ಲಲು ಯೋಗ್ಯವಾಗಿದೆ ಎಂದು ಸಹ ಹೇಳಲಾಗುತ್ತಿದೆ.

ಫ್ರೆಡ್ರಿಕ್ ವಾನ್ ಹೈಕ್

1899ರ ಮೇ 8ರಂದು, ಹೈಕ್, ವಿಯನ್ನಾದಲ್ಲಿ ಜನಿಸಿದ. ವಿಯನ್ನಾ ವಿಶ್ವವಿದ್ಯಾನಿಲಯದಿಂದ ಈತ ನ್ಯಾಯಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರಗಳಲ್ಲಿ ಪದವಿ ಪಡೆದ. ಈತ 1927 ಮತ್ತು 31ರ ಅವಧಿಯಲ್ಲಿ ಆಸ್ಟ್ರಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ರಿಸರ್ಚ್‌ನ ಮುಖ್ಯಸ್ಥನಾಗಿದ್ದ. 1931ರಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥವಿಜ್ಞಾನ ಮತ್ತು ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕನಾದ. ಅಲ್ಲಿಯೇ ಆತ 1949ರವರೆಗೆ ಸೇವೆ ಸಲ್ಲಿಸಿದ. 1950ರಿಂದ 1962ರವರೆಗೆ ಅಮೇರಿಕಾದ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ವೃತ್ತಿಯನ್ನು ಕೈಗೊಂಡ. 1962 ರಿಂದ 1968ರವರೆಗೆ, Freidburg eisgiul ವಿಶ್ವವಿದ್ಯಾನಿಲಯದಲ್ಲಿ ಅರ್ಥವಿಜ್ಞಾನದ ಪ್ರಾಧ್ಯಾಪಕನಾದ. ಹೈಕ್ ಅಂತರ್-ರಾಷ್ಟ್ರೀಯ ಪ್ರೊಫೆಸರ್ ಎಂದು ಹೇಳಬಹುದು. ಏಕೆಂದರೆ ಆತ ಆಸ್ಟ್ರಿಯಾ, ಇಂಗ್ಲೆಂಡ್, ಅಮೆರಿಕಾ, ಜಪಾನ್‌ಗಳಲ್ಲಿ ಸಾಕಷ್ಟು ವ್ಯಾಪಕವಾಗಿ ಉಪನ್ಯಾಸಗಳನ್ನು ನೀಡಿದ್ದಾನೆ.

ಹೈಕ್‌ನ ಮುಖ್ಯ ಕೃತಿಗಳೆಂದರೆ: Prices and Production (1931) Monetry Theory and Trade Cycle (1933). Collectivist Economic Planning (1935). Profit. Interest and Investment (1939). Monetary Nationalism and International Stability (1937).

The Pure Theory of Capital [1941]. The Road to Serfdom [1944]. The Counter Revolution of Science [1952], John Stuart Mill and Harriet Taylor [1951]. The Sensory Order [1952], The Constitution of Liberty [1960]. Capitalism and Historian [1954], The Intellectuals and Socialism[1960]. Great Depression [1934] Studies in Philosophy, Politics and Economics [1907], Individualism and Economic Order [1967].

ಈ ಕೃತಿಗಳಲ್ಲದೆ, ಹೈಕ್, ವಿಶ್ವದ ನಾನಾ ನಿಯತಕಾಲಿಕಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾನೆ. ಈತನ The Road to Serfdom ಕೃತಿ ವಿಶ್ವವಿಖ್ಯಾತವಾಗಿದೆ. ಇದು ವಿಶ್ವದ 12 ಭಾಷೆಗಳಿಗೆ ತರ್ಜುಮೆಯಾಗಿದೆ.

ಹೈಕ್‌ನ ಚಿಂತನೆ ತುಂಬಾ ಭಾವನಾ ಸ್ವರೂಪದ್ದು (abstract). ಇವನ ಚಿಂತನೆಯಲ್ಲಿ ವಿಶ್ಲೇಷಣಕ್ರಮ, ತಟಸ್ಥ ಹಣ ಮತ್ತು ಉತ್ಪಾದನ ಮೀಮಾಂಸೆ, ಆರ್ಥಿಕ ಆವರ್ತ ಸಿದ್ಧಾಂತ ಮತ್ತು ವ್ಯಕ್ತಿ ಸ್ವಾತಂತ್ರ್ಯವಾದಗಳು ಮುಖ್ಯವಾದವು.

ಅರ್ಥಶಾಸ್ತ್ರದ ವಿಶ್ಲೇಷಣ ಕ್ರಮದ ಬಗ್ಗೆ ಕೆಲವು ಖಚಿತವಾದ ಭಾವನೆಗಳನ್ನು ಹೈಕ್ ವ್ಯಕ್ತಪಡಿಸುತ್ತಾನೆ. ಆರ್ಥಿಕ ತತ್ವಗಳ ವಿಶ್ಲೇಷಣೆಗೆ ಗಣಿತದ ಬಳಕೆ ಅವನಿಗೆ ಸೇರದು. ಇಷ್ಟೇ ಏಕೆ ವೈಜ್ಞಾನಿಕತೆ (Scientism) ಅರ್ಥವಿಜ್ಞಾನಕ್ಕೆ ಅಪಾಯಕಾರಿಯಾದದ್ದು ಎಂದು ಅವನು ಭಾವಿಸುತ್ತಾನೆ. ಅರ್ಥಶಾಸ್ತ್ರ ಮಾನವರ ಪರಸ್ಪರ ಸಂಬಂಧದ ವಿಶ್ಲೇಷಣೆಯಾದುದರಿಂದ, ಭೌತಿಕ ವಿಧಾನದ ವಿಶ್ಲೇಷಣೆ ಅದಕ್ಕೆ ಯುಕ್ತವಾದುದಲ್ಲ. ಆದ್ದರಿಂದ 'ಸಮಾಜ' 'ಬಂಡವಾಳಶಾಹಿ ಮಾರುಕಟ್ಟೆ' 'ಏಕಸ್ವಾಮ್ಯ' ಮುಂತಾದ ಪರಿಭಾವನೆಗಳನ್ನು ನಾವು ತಿರಸ್ಕರಿಸಬೇಕು ಎಂದು ಅವನು ಅಭಿಪ್ರಾಯಪಡುತ್ತಾನೆ. ಸಾಮಾಜಿಕ ವಿಧಾನವನ್ನು ವೈಯಕ್ತಿಕ ಬೌದ್ಧಿಕ ಕ್ರಿಯೆಯ ಭಾಗವಾಗಿ ವಿಶ್ಲೇಷಿಸಬೇಕೆಂಬ ವಿಚಿತ್ರ ವಾದಕ್ಕೆ ಹೈಕ್ ಅಂಟಿಕೊಳ್ಳುತ್ತಾನೆ. ಅವನು ಹೇಳುವಂತೆ ಬೌದ್ಧಿಕ ಕ್ರಿಯೆಗಳಿಗೆ ಸಾಮಾಜಿಕ ಆಯಾಮ (Socials Dimension)ವಿದೆ. ಸಮಾಜ ವಿಜ್ಞಾನ ಈ ಆಯಾಮ ಯಾವುದೆಂಬುದನ್ನು ವಿಶ್ಲೇಷಿಸಬೇಕು. ಅವನ ಪ್ರಕಾರ ಅರ್ಥಶಾಸ್ತ್ರದ ತತ್ವದ ಗುರಿ "ಪೂರ್ವನಿಯೋಜಿತವಾಗಿಲ್ಲದಿರುವ ಸಮಾಜದ ಜನರ ಗುಂಪಿನ ಆರ್ಥಿಕ ಚಟುವಟಿಕೆಗಳಲ್ಲಿರುವ ಸಮಾನತೆಯನ್ನು ವಿಶ್ಲೇಷಿಸುವುದಲ್ಲ. ಬದಲಿಗೆ ವ್ಯಕ್ತಿಗಳು, ಗುಂಪುಗಳು ಪರಸ್ಪರ ಸ್ವತಂತ್ರ ತೀರ್ಮಾನಗಳಿಂದ ಫಲಿತಾಂಶಗೊಂಡಿರುವ ಚಟುವಟಿಕೆಗಳನ್ನು ವಿಶ್ಲೇಷಿಸುವುದಾಗಿರಬೇಕು."

• 'ತಟಸ್ಥ ಹಣ' ಪರಿಭಾವನೆ ಹೈಕ್‌ನ ಉತ್ಪಾದನೆ ಹಾಗೂ ಆವರ್ತ ಸಿದ್ಧಾಂತಗಳ ವಿವರಣೆಗೆ ಮೂಲ ಬಿಂದು. ತಟಸ್ಥ ಹಣವೆಂದರೆ, ಸಾಪೇಕ್ಷ ಬೆಲೆಗಳ ಮೇಲೆ ಯಾವ ಪ್ರಭಾವವನ್ನೂ ಬೀರದಿರುವ ಹಣ. ಹೈಕ್‌ನ ದೃಷ್ಟಿಯಲ್ಲಿ, ಉತ್ಪಾದನ ಸಮತೋಲನ ಕೆಲವು ಆರ್ಥಿಕ ಪ್ರಮಾಣಗಳ ನಡುವಣ ಸಮಾನತೆಯಾಗಿರುತ್ತದೆ. ಉತ್ಪಾದನಾ ಸ್ವರೂಪವಾದರೋ, ಉತ್ಪಾದಕ ಸರಕು ಮತ್ತು ಅನುಭೋಗ ಸರಕುಗಳ ಬೇಡಿಕೆಯ ಸಂಬಂಧವನ್ನು ನಿರ್ದಿಷ್ಟ ರೂಪದಲ್ಲಿ ಹೊಂದಿರುವ ಸ್ಥಿತಿ. ಸರಕುಗಳ ಬೇಡಿಕೆ, ಈ ಬೇಡಿಕೆಯನ್ನು ಕಾಪಾಡಿಕೊಂಡು ಹೋಗಲು ಬೇಕಾದ ಹಣ ಪ್ರಮಾಣ, ಸರಕುಗಳ ನೀಡಿಕೆ, ಇವುಗಳ ನಡುವೆ ಸಮ ಪ್ರಮಾಣತೆ ಏರ್ಪಟ್ಟಿರುವಾಗ ಮಾತ್ರ ಉತ್ಪಾದನೆಯಲ್ಲಿ ಸಮತೋಲನ ಸಾಧ್ಯ. ಹೀಗಿದ್ದಾಗ ಮಾತ್ರ, ಸಂಪನ್ಮೂಲಗಳು ಪೂರ್ಣೋದ್ಯೋಗ ಸ್ಥಿತಿಯಲ್ಲಿರುವುದು ಸಾಧ್ಯ. ಸಮತೋಲನ ಸ್ಥಿತಿಯಿಂದ, ಉತ್ಪಾದನೆ ವಿಚಲಿತವಾದಾಗ, ಮತ್ತೆ ಅನೇಕ ಹೊಂದಾಣಿಕೆಗಳು ಏರ್ಪಟ್ಟು ಸಮತೋಲನ ಸ್ಥಿತಿಗೆ ಉತ್ಪಾದನೆ ಹಿಂದಿರುಗುವುದು ಸಾಧ್ಯವಾಗುತ್ತದೆ.

ಹೈಕ್‌ನ ಆವರ್ತ ಸಿದ್ಧಾಂತ, ಅಧಿಕ ಹೂಡಿಕೆ ಆವರ್ತ ಸಿದ್ಧಾಂತವೆಂದು ಪ್ರಖ್ಯಾತವಾಗಿದೆ. ಹೈಕ್‌ನ ಪ್ರಕಾರ, ಸಮತೋಲನ ಬಡ್ಡಿದರವಿರುವಾಗ ಅಥವಾ 'ಸಹಜ ಬಡ್ಡಿ' (natural rate of interest) ದರವಿರುವಾಗ ಉದ್ಯಮಿಗಳು ಬೇಡುವ ಸಾಲ ಮತ್ತು ನೀಡಿಕೆಯಾಗುವ ಸಾಲದ ಹಣ ಪರಸ್ಪರ ಸಮನಾಗಿರುತ್ತದೆ. ಆದರೆ ಮಾರುಕಟ್ಟೆ ಬಡ್ಡಿದರ ಮತ್ತು ಸಹಜ ಬಡ್ಡಿದರಗಳ ನಡುವೆ ವ್ಯತ್ಯಾಸ ಏರ್ಪಟ್ಟಾಗ ಆರ್ಥಿಕ ದೃಢತೆ ವಿಚಲಗೊಳ್ಳುತ್ತದೆ. ಉದಾಹರಣೆಗೆ ಸಹಜ ಬಡ್ಡಿದರ ಮಾರುಕಟ್ಟೆ ಬಡ್ಡಿದರಕ್ಕಿಂತ ಕಡಿಮೆ ಇದ್ದರೆ, ಹೂಡಿಕೆ ತುಂಬಾ ಪ್ರಚುರಗೊಳ್ಳುತ್ತದೆ. ಹೂಡಿಕೆ ಹೆಚ್ಚಾದಾಗ ವ್ಯಾಪಾರ ಚಟುವಟಿಕೆ ತೇಜಿಗೊಂಡು ಅರ್ಥವ್ಯವಸ್ಥೆಯ ಚಟುವಟಿಕೆಗಳು ಮೇಲ್ಮುಖವಾಗಿ ಹೊರಳುತ್ತವೆ. ಸಹಜ ಬಡ್ಡಿದರಕ್ಕಿಂತ, ಮಾರುಕಟ್ಟೆ ಬಡ್ಡಿದರ ಹೆಚ್ಚಾಗಿದ್ದರೆ, ಹೂಡಿಕೆ ಕಡಿಮೆಯಾಗುತ್ತದೆ. ಆರ್ಥಿಕ ಚಟುವಟಿಕೆಗಳು ಹಿಂಜರಿತವನ್ನನುಭವಿಸಿ, ಆರ್ಥಿಕ ಕುಸಿತಕ್ಕೆ ದಾರಿಮಾಡಿಕೊಡುತ್ತವೆ. ಬ್ಯಾಂಕಿನ ಸಾಲ ಹಣ ನೀಡಿಕೆ, ಹೂಡಿಕೆಯನ್ನು ವಿಸ್ತರಿಸಿ, ಆವರ್ತಗಳನ್ನು ಉಂಟುಮಾಡುವುದರಿಂದ, ಬ್ಯಾಂಕು ಹಣ ನೀಡಿಕೆಯನ್ನು ಸ್ಥಿರವಾಗಿಡಬೇಕೆಂದು, ಹೈಕ್ ಪ್ರತಿಪಾದಿಸುತ್ತಾನೆ.

ಹೈಕ್ ವ್ಯಕ್ತಿಸ್ವಾತಂತ್ರ್ಯವಾದವನ್ನು ಎತ್ತಿ ಹಿಡಿಯುತ್ತಾನೆ. 18ನೇ ಶತಮಾನದ 'ಲೆಸೆ ಫೇರ್' ವ್ಯವಸ್ಥೆ ಅತ್ಯುತ್ತಮವಾದುದೆಂಬುದು ಅವನ ಭಾವನೆ. ಸರ್ಕಾರ ಆರ್ಥಿಕ ಚಟುವಟಿಕೆಗಳಲ್ಲಿ ಪ್ರವೇಶಿಸಬಾರದು. ಇಂತಹ ಪರಿಸ್ಥಿತಿಯಲ್ಲಿ ಮಾತ್ರ 'ಆರ್ಥಿಕ ಯೋಜನೆ' ಯಶಸ್ಸನ್ನು ಸಾಧಿಸುವುದು ಸಾಧ್ಯವೆಂಬುದು ಹೈಕ್‌ನ ನಂಬಿಕೆ.

ಮಿರ್ಡಾಲ್ ಮತ್ತು ಹೈಕ್, ಇಬ್ಬರೂ, ತುಂಬಾ ವಿವಾದಕ್ಕೊಳಗಾಗಿರುವ ಅರ್ಥವಿಜ್ಞಾನಿಗಳು. ಇವರಿಬ್ಬರ ವಿಚಾರಧಾರೆಗಳನ್ನು ಒಪ್ಪದಿರುವ ಅನೇಕ ಅರ್ಥವಿಜ್ಞಾನಿಗಳಿದ್ದಾರೆ. ಕೇನ್ಸ್, ಹೈಕ್‌ನ ಪ್ರಸಿದ್ಧ ಗ್ರಂಥವಾದ 'Prices and Productions' ಅನ್ನು ಅರ್ಥಶೂನ್ಯ ಗ್ರಂಥವೆಂದು ಕರೆದಿದ್ದಾನೆ. ಮಿರ್ಡಾಲ್ 'ಅರ್ಥವಿಜ್ಞಾನ'ವನ್ನು ಸಾಂಸ್ಕೃತಿಕ ವಿಜ್ಞಾನದ (Culttural Science) ಮಟ್ಟಕ್ಕೆ ಇಳಿಸಿದ್ದಾನೆ ಎನ್ನುವ ಅಭಿಪ್ರಾಯವೂ ಇದೆ. ಆದರೂ ಇವರಿಬ್ಬರ ಆಲೋಚನೆಗಳು ಬಹಳ ಗಹನವಾದವು ಮತ್ತು ಇವರು ಆಲೋಚನಾ ಶಕ್ತಿಯಿಂದ, ಹಲವಾರು ಕ್ಷೇತ್ರಗಳಲ್ಲಿ, ವ್ಯಾಪಕ ಸಂಶೋಧನೆ ನಡೆಯುವುದಕ್ಕೆ ಕಾರಣಕರ್ತರಾಗಿದ್ದಾರೆ, ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇವರಿಬ್ಬರೂ ಪಡೆದಿರುವ ನೊಬೆಲ್ ಬಹುಮಾನಕ್ಕೆ ಅವರು ತೀರ ಅರ್ಹರು ಎಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ.

ಮೋಹನ ಹೆಗ್ಗಡೆ

ಶಿವಮೊಗ್ಗ ಜಿಲ್ಲೆಯ ಪತ್ರಿಕೆಗಳು—ಒಂದು ಸಮೀಕ್ಷೆ

ಪತ್ರಿಕಾ ಪ್ರಪಂಚ–ಪತ್ರಿಕೆಗಳು ಸರಕಾರದ ನಾಲ್ಕನೆಯ ಅಂಗ ಎನಿಸಿಕೊಂಡಿವೆ. ಬೆಳಿಗ್ಗೆ ಏಳುವಾಗಲೇ ಬಿಸಿ ಬಿಸಿ ಸುದ್ದಿ ತರುವ ಪತ್ರಿಕೆಗಳಿಗಾಗಿ ಚಡಪಡಿಸುತ್ತೇವೆ. ಇಂದಿನ ಜೀವನದಲ್ಲಿ ಪತ್ರಿಕೆ ಹಾಸುಹೊಕ್ಕಾಗಿದೆ. ಸ್ವತಂತ್ರ ಭಾರತದ ಮೂಲಭೂತ ಹಕ್ಕುಗಳಲ್ಲಿ ವಾಕ್–ಸ್ವಾತಂತ್ರ್ಯದೊಂದಿಗೇ ಪತ್ರಿಕಾ ಹಕ್ಕನ್ನೂ ಸೇರಿಸಲಾಗಿದೆ. ಸಂಸ್ಕೃತಿಯ ಪ್ರತಿಬಿಂಬವಾಗಿದೆ ಈ ಪತ್ರಿಕೆ. ಇದು ಮಾಡಬಲ್ಲ ಸಾಹಿತ್ಯ–ಸಂಸ್ಕೃತಿಯ ಪ್ರಸಾರ ಕಾರ್ಯ ಹಾಗೂ ಪ್ರಭಾವವನ್ನು ಇನ್ನಾವ ಪ್ರಸಾರ ಮಾಧ್ಯಮವೂ ಕೂಡ ಮಾಡಲಾರದು. ಪತ್ರಿಕಾ ಸ್ವಾತಂತ್ರ್ಯವಿಲ್ಲದಾಗಿನ ಪ್ರಜೆಯ ಅಸ್ತವ್ಯಸ್ತ ಜೀವನ ಹಾಗೂ ಮನಸ್ಸನ್ನು ಗಮನಿಸಿದಾಗ ಅದರ ಮಹತ್ವದ ಸ್ಥಾನ ಅರಿವಾಗದಿರದು. ಇತ್ತೀಚೆಗೆ ಸಾರ್ವಜನಿಕ ಸಭೆ–ಸಮಾರಂಭಗಳಲ್ಲೆಲ್ಲ ಪತ್ರಕರ್ತನಿಗೊಂದು ಸ್ಥಾನ ಕಾಯ್ದಿರಿಸಲ್ಪಟ್ಟಿರುತ್ತದೆ. ಈ ಎಲ್ಲ ಕಾರಣಗಳಿಂದ ಖಡ್ಗಕ್ಕಿಂತ ಲೇಖನಿಯ ಹರಿತ ತೀಕ್ಷ್ಣ ಎನಿಸಿದೆ.

ಶೈಕ್ಷಣಿಕ, ಧಾರ್ಮಿಕ,ರಾಜಕೀಯ, ಕಲೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಸಂಶೋಧನೆ, ಕ್ರೀಡೆ, ಸಂಗೀತ–ಎಲ್ಲ ಕ್ಷೇತ್ರಗಳಲ್ಲೂ ಪತ್ರಿಕಾ ಕಾರ್ಯ ಹಿರಿದಾಗಿದೆ. ಅಕ್ಷರಸ್ಥರಿಗೆ ಪತ್ರಿಕೆಯನ್ನು ಓದುವುದು ಒಂದು ಹವ್ಯಾಸವಾಗಿದ್ದರೆ, ಅನಕ್ಷರಸ್ಥರು ಪುಟ ತಿರುವಿಹಾಕಿ, ಚಿತ್ರವನ್ನು ನೋಡಿ ವಿಷಯ ಗ್ರಹಿಸಬಲ್ಲರು. ಏಳುತ್ತಲೇ ಪತ್ರಿಕೆಯನ್ನು ಓದುವ ತವಕ ಕೆಲವರಿಗಾದರೆ ಅದೊಂದು ಬಿಡಲಾಗದ ಓದಿನ ಚಟ ಹಲವರಿಗೆ. ಪ್ರಾತರ್ ಕಾಫಿ ಯಾ ಚಹದೊಂದಿಗೆ ಆ ದಿನದ ಬಿಸಿ ಬಿಸಿ ವರ್ತಮಾನವನ್ನು ಮೆಲುಕಾಡಿಸುವ ಆಸೆ ಇನ್ನು ಕೆಲವರದು. ಕ್ರೀಡಾವಾರ್ತೆಗಾಗಿ ಕಾಯುವವರು ಹಲವರು, ಸಿನಿಮಾ ಪ್ರಪಂಚವನ್ನು ದರ್ಶಿಸುವವರು ಕೆಲವರು. ಹೀಗೆ ಪತ್ರಿಕೆಗಳು ಜನಪ್ರಿಯವಾಗುತ್ತಾ ನಡೆದಿವೆ. ಈ ಆಧುನಿಕ ಪ್ರಪಂಚದಲ್ಲಿ ಇವುಗಳದೇ ಒಂದು ವಿಶಿಷ್ಟ ಸ್ಥಾನ. "ಪ್ರತಿಪಕ್ಷವಿಲ್ಲದ ಸರಕಾರದಲ್ಲಿ ಪತ್ರಿಕೆಗಳೇ ಪ್ರತಿಪಕ್ಷದ ಸ್ಥಾನವನ್ನು ಆಕ್ರಮಿಸಬಲ್ಲವು" ಎಂದೊಬ್ಬರು ಹೇಳಿದ್ದಾರೆ ನಿಜ. ೩೦೦–೪೦೦ ವರ್ಷಗಳ ಇತಿಹಾಸ ಹೊಂದಿದ ಪತ್ರಿಕೋದ್ಯಮದ ಮಹತ್ವ ವರ್ಣಿಸಲಸಾಧ್ಯ.

ಕನ್ನಡ ಪತ್ರಿಕೋದ್ಯಮದ ಆರಂಭ–ಕನ್ನಡ ಪತ್ರಿಕೋದ್ಯಮ ಆರಂಭವಾದುದು ಮಂಗಳೂರಿನಲ್ಲಿ ಕ್ರಿ.ಶ. ೧೮೪೩ರಲ್ಲಿ. ಕನ್ನಡಿಗರಲ್ಲಿ ಅಲ್ಲಿಯವರೆವಿಗೂ ಪತ್ರಿಕಾಪ್ರಜ್ಞೆ ಮೂಡಿರಲಿಲ್ಲ. ಕಲಿತವರೂ ಕೂಡ ಇಂಗ್ಲಿಷ್ ಪತ್ರಿಕೆಯನ್ನೇ ಓದುವ ಆಸಕ್ತಿ ತೋರಿಸುತ್ತಿದ್ದರು. ಕನ್ನಡಿಗರಲ್ಲಿ ಈ ಪ್ರಜ್ಞೆಯ ಪ್ರಚೋದನೆಗೆ ಜರ್ಮನ್ ಕ್ರೈಸ್ತ ಪಾದ್ರಿಯೋರ್ವ ಬಂದನು. (ಪ್ರಪಂಚದಲ್ಲಿ

ಪ್ರಪ್ರಥಮ ಪತ್ರಿಕೆಯನ್ನು ಆರಂಭಿಸಿದವರೂ ಕೂಡ ಜರ್ಮನರು ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ). ಜರ್ಮನಿಯ ಡಾ॥ ಹರ್ಮನ್ ಮೋಗ್ಲಿಂಗನೇ ನಮ್ಮ ಕನ್ನಡ ಪತ್ರಿಕೋದ್ಯಮದ ಬೀಜವನ್ನು ನೆಟ್ಟವನು.[1] ಈತ "ಮಂಗಳೂರ ಸಮಾಚಾರ" ಎಂಬ ಪಾಕ್ಷಿಕ ಪತ್ರಿಕೆಯನ್ನು ೧೮೪೩ ಜುಲೈ ೧ರಂದು ಮಂಗಳೂರಿನಿಂದ ಆರಂಭಿಸಿದನು. ತನ್ಮೂಲಕ ಕನ್ನಡ ಪತ್ರಿಕಾ ಪ್ರಪಂಚ ಬ್ರಹ್ಮ ಎನಿಸಿಕೊಂಡನು. ಮುಂದೆ ಮುದ್ರಣ ಪ್ರಸಾರದ ದೃಷ್ಟಿಯಿಂದ ಪತ್ರಿಕೆಯ ಹೆಸರನ್ನು ಬದಲಾಯಿಸಿ "ಕಂನಡ ಸಮಾಚಾರ" (Canarese Newspaper) ಎಂದೆನಿಸಿ ಬಳ್ಳಾರಿಯಿಂದ ೧೮೪೪ ಫೆಬ್ರವರಿಯಿಂದ ಹೊರಡಿಸತೊಡಗಿದ. ಅದೇ ವರ್ಷದ ಕೊನೆಯವರೆಗೆ ನಡೆಸಿದ.[2]

ಅಂದು ಆತ ನೆಟ್ಟ ಕನ್ನಡ ಪತ್ರಿಕೋದ್ಯಮದ ಸಸಿ ಇಂದು ೧೩೫ ವರ್ಷಗಳ ಅವಧಿಯಲ್ಲಿ ಬೆಳೆದು ಹೆಮ್ಮರವಾಗಿದೆ.[3] ೧೯ನೇ ಶತಕದ ಪೂರ್ವಾರ್ಧದ ಕೊನೆಯಲ್ಲಿ ಕೇವಲ ೩ ಪತ್ರಿಕೆಗಳು ಇದ್ದರೆ ೨೦ನೇ ಶತಕದ ಉತ್ತರಾರ್ಧದಲ್ಲಿ ಈ ಸಂಖ್ಯೆ ೧೫೦೦ನ್ನೂ ದಾಟುತ್ತಿದೆ ಎಂದರೆ ಕನ್ನಡ ಪತ್ರಿಕೋದ್ಯಮದ ಸಮೃದ್ಧಿ–ವೈಶಾಲ್ಯವನ್ನು ಕುರಿತು ಹೆಚ್ಚು ವಿವರಿಸುವುದು ಅನಗತ್ಯ.

ಕರ್ನಾಟಕದ ೧೯ ಜಿಲ್ಲೆಗಳಲ್ಲೂ ಇಂದು ಅನೇಕಾನೇಕ ಪತ್ರಿಕೆಗಳು ಹುಟ್ಟಿಕೊಂಡಿವೆ. ಸದೃಢ, ನಿರೋಗಿ ಹಾಗೂ ಸರ್ವಾಂಗ ಸುಂದರವೆನಿಸಬಲ್ಲ, ಸ್ವಸಾಮರ್ಥ್ಯವುಳ್ಳ, ಶಕ್ತಿಶಾಲಿ, ಪ್ರಭಾವೀ ಪತ್ರಿಕೆಗಳು ಮಾತ್ರ ಬದುಕಿ ಬಾಳುತ್ತಿವೆ; ಬಾಳಿ ಬೆಳೆಯುತ್ತಿವೆ. ರೋಗಿಷ್ಠ, ದುರ್ಬಲ, ಸ್ವಾರ್ಥ ಹಾಗೂ ಪರಪುಟ್ಟ (ಬರಿಯ ಜಾಹಿರಾತುಗಳ ಬಲದಿಂದ ನಡೆಯಬಹುದಾದ) ಪತ್ರಿಕೆಗಳು ಸತ್ತಿವೆ. ಕೆಲವು ದಾರಿ ಹಿಡಿದಿವೆ.

ಈ ಕನ್ನಡ ಪತ್ರಿಕೋದ್ಯಮಕ್ಕೆ ದಕ್ಷಿಣ ಕನ್ನಡದ ಕೊಡುಗೆ ಪ್ರಥಮ, ಅಮೂಲ್ಯ ಹಾಗೂ ಅಪಾರ. ಪ್ರಥಮ ಶ್ರೀಗಣವೂ ಇದೇ ಜಿಲ್ಲೆಯಲ್ಲಾಗಿದೆ. ಪತ್ರಿಕೆಗಳ ಸಂಖ್ಯೆ (ಇತ್ತೀಚೆಗೆ ಬೆಂಗಳೂರು ಜಿಲ್ಲೆಯ ಪತ್ರಿಕೆಗಳ ಸಂಖ್ಯೆ ಬೆಳೆಯುತ್ತಿದೆ) ಹಾಗೂ ಮಟ್ಟ, ಪ್ರಸಾರ ವಿಷಯದಲ್ಲಿ ಯಾರಿಗೂ ಬಿಟ್ಟುಕೊಟ್ಟಿಲ್ಲ. ಇಲ್ಲಿಯ ವರೆಗೆ ದಕ್ಷಿಣ ಕನ್ನಡದಲ್ಲಿಂದ ಹೊರಟ ಪತ್ರಿಕೆಗಳ ಸಂಖ್ಯೆ ೨೦೦ಕ್ಕೂ ಹೆಚ್ಚು. ಮುಳಿಯ ತಿಮ್ಮಪ್ಪಯ್ಯ "ಕನ್ನಡ ಕೋಗಿಲೆ" (೧೯೧೬); ಬೆನಗಲ್ ರಾಮರಾಯರು "ಸುವಾಸಿನಿ" (೧೯೦೦); ಶಿವರಾಮ ಕಾರಂತರು "ವಸಂತ" ಪಾಕ್ಷಿಕ (೧೯೨೬) ಕಡೆಂಗೋಡ್ಲು ಶಂಕರಭಟ್ಟ "ರಾಷ್ಟ್ರಬಂಧು" ಸಾಪ್ತಾಹಿಕ (೧೯೨೮)ರಂತಹ ಹೆಸರಾಂತ ಪತ್ರಿಕೋದ್ಯಮಿಗಳನ್ನು ನಾಡಿಗೆ ನೀಡಿದೆ.

ಇದರ ನಂತರದ ಸ್ಥಾನ ಮಲೆನಾಡಿನ ಮಡಿಲು ಶಿವಮೊಗ್ಗೆಗೆ ಸಲ್ಲುತ್ತದೆ. ಇಲ್ಲಿಯ ಪತ್ರಿಕೋದ್ಯಮದ ಇತಿಹಾಸ ೭೫–೮೦ ವರ್ಷಗಳದ್ದು. ೯ ತಾಲ್ಲೂಕುಗಳ ಈ ಜಿಲ್ಲೆಯಲ್ಲಿ ಅಕ್ಷರಸ್ಥರ ಪ್ರಮಾಣ ಹೆಚ್ಚಾಗಿದ್ದರೂ ಪತ್ರಿಕಾ ಪ್ರಜ್ಞೆ ಮಾತ್ರ ಮೂಡಿದುದು ಶಿವಮೊಗ್ಗೆ, ಸಾಗರ, ಸೊರಬ, ತೀರ್ಥಹಳ್ಳಿಗಳಲ್ಲಿ ಮಾತ್ರ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಉಳಿದೆಡೆ ಪತ್ರಿಕಾಪ್ರಜ್ಞೆ ಮೂಡಲಾರಂಭಿಸಿದೆ. ಸ್ವಾತಂತ್ರ್ಯಪೂರ್ವದ ಇಲ್ಲಿಯ ಪತ್ರಿಕಾ ಸಂಖ್ಯೆ ಕೇವಲ ೧೨. ಸ್ವಾತಂತ್ರ್ಯೋತ್ತರದ ಕೇವಲ ೩೦–೩೧ ವರ್ಷಗಳಲ್ಲಿ ಈ ಸಂಖ್ಯೆ ೭೫ನ್ನು (೧೯೭೭ರ ಡಿಸೆಂಬರವರೆಗೆ ಸಮೀಕ್ಷೆಯ ಕಾಲಕ್ಕೆ ಗಣಿಸಿದೆ) ತಲುಪಿದೆ ಎಂದರೆ, ಇಲ್ಲಿಯ ಪತ್ರಿಕೋದ್ಯಮದ ಬೃಹತ್ ವಿಕಾಸ ಯಾರನ್ನು ತಾನೇ ಅಚ್ಚರಿ ಪಡಿಸದು!

ನಡಹಳ್ಳಿ ವೆಂಕಪ್ಪ (ಶ್ರೀಮದ್ವರ್ಮನಿದಾನಂ–೧೯೧೨), ಕೂಡಲಿ ಚಿದಂಬರಂ (ವಿಚಾರವಾಹಿನಿ–೧೯೩೯). ಪತ್ರಿಕೋದ್ಯಮಭೀಷ್ಮ ಭೂಪಾಳಂ ಚಂದ್ರಶೇಖರಯ್ಯ (ಮಲೆನಾಡವಾರ್ತಾ-

೧೯೫೬) ಮತ್ತು ನಾಡಿಗಕೃಷ್ಣಮೂರ್ತಿಯವರಂತಹ ಶ್ರೇಷ್ಠ ಪತ್ರಿಕೋದ್ಯಮಿಗಳನ್ನೂ ಈ ಜಿಲ್ಲೆ ನೀಡಿದೆ.

ಶಿವಮೊಗ್ಗೆಯ ಈ ೮೦ ವರುಷಗಳ ಪತ್ರಿಕೋದ್ಯಮದ ಸಮೀಕ್ಷೆ ನಡೆಸಿದರೆ ಇದರ ಸತ್ಯಾಸತ್ಯತೆಯ ಅರಿವಾಗದಿರದು. ಈ ಪತ್ರಿಕಾ ಸಮೀಕ್ಷೆಗೆ ಇಂದು ಯಾವ ಗ್ರಂಥಾಧಾರಗಳೂ ವಿಶೇಷವಾಗಿ ಸಿಕ್ಕುತ್ತಿಲ್ಲ. ಈ ವರೆಗಿನ ಎಲ್ಲ ಪತ್ರಿಕೆಗಳನ್ನು ಕಾಯ್ದಿರಿಸುವ ಹೊಣೆಯ ಕಾರ್ಯವನ್ನು ಯಾರೂ ಮಾಡಿಲ್ಲ. ನಾಡಿನ ಕೈಬೆರಳಿನಿಂದ ಎಣಿಸಬಹುದಾದಷ್ಟು ವ್ಯಕ್ತಿಗಳು ಇಂಥ ಪತ್ರಿಕಾ ಸಂಗ್ರಹ ಕಾರ್ಯ ಹಾಗೂ ಪ್ರದರ್ಶನ ನಡೆಸುತ್ತಿದ್ದರೂ ಅವರಿಗೆ ಸರಿಯಾದ ಪ್ರೋತ್ಸಾಹ ಸಹಕಾರಗಳನ್ನು ನೀಡುವವರಿಲ್ಲ. ಅದ್ದರಿಂದ ಸಿಕ್ಕಷ್ಟು ಪತ್ರಿಕಾಧಾರದ ಮೇಲೆ ಈ ಕಾರ್ಯವನ್ನು ಸಾಗಿಸಬೇಕಾಗಿದೆ. ಜಿಲ್ಲೆಯ ಪ್ರಪ್ರಥಮ ಪತ್ರಿಕೆ :—ಶಿವಮೊಗ್ಗೆಯಲ್ಲಿ ಬ್ಯಾಡಗಿ ಶೇಷಗಿರಿ ರಾಯರಿಂದ ಆರಂಭಿಸಲಾದ ಮಾಸಪತ್ರಿಕೆ "ಜ್ಞಾನೋದಯ" (ಕ್ರಿ.ಶ. ೧೮೯೬)ಕ್ಕೆ ಜಿಲ್ಲೆಯ ಪ್ರಥಮ ಪತ್ರಿಕಾ ಗೌರವ ಸಲ್ಲುತ್ತದೆ.[3] ಸಂಪಾದಕ, ಮಾಲೀಕನೆಲ್ಲವೂ ಆತನೇ ಆಗಿದ್ದನು. ಶಿವಮೊಗ್ಗೆಯ ಚಿದಾನಂದತತ್ವ ಪ್ರೆಸ್‌ನಲ್ಲಿ ಮುದ್ರಿಸಲ್ಪಡುತ್ತಿತ್ತು. ೨೦ ಪುಟಗಳ ಈ ಪತ್ರಿಕೆಯಲ್ಲಿ ಧಾರ್ಮಿಕ, ರಸಿಕ ಮನೋರಂಜನ ಕಥೆ, ಸ್ಥಾನಿಕ, ದೇಶೀಯ—ವಿದೇಶೀಯ ಸಮಾಚಾರಗಳಿರುತ್ತಿದ್ದವು. ೩–೪ ವರ್ಷಕಾಲ ಮಾತ್ರ ನಡೆದ ಈ "ಜ್ಞಾನೋದಯ"ವು ೧೯ನೇ ಶತಮಾನದೊಂದಿಗೇ ಕಣ್ಮುಚ್ಚಿತು.

ಇಲ್ಲಿಯ ಪತ್ರಿಕೆಗಳು ವಿವಿಧ ಕ್ಷೇತ್ರಗಳಲ್ಲಿ ಹರಡಿವೆ. ಪ್ರಥಮ ಹಂತದಲ್ಲಿ ಜನರಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡುವುದೇ ಪತ್ರಿಕೆಗಳ ಕಾರ್ಯವೆನಿಸಿತ್ತು. ಧಾರ್ಮಿಕ ಪ್ರಜ್ಞೆಯನ್ನು ತಮ್ಮ ಅಗಾಧ ಪಾಂಡಿತ್ಯ, ಜ್ಞಾನಗಳಿಂದ ಪತ್ರಿಕೆಗಳ ಮೂಲಕ ಮೂಡಿಸಿದವರು ಕೆಲವರು.

ಧಾರ್ಮಿಕ ಕ್ಷೇತ್ರದಲ್ಲಿ—೨೦ನೇ ಶತಮಾನದ ಆದಿ ಭಾಗದಲ್ಲಿ ಸೊರಬ, ಸಾಗರ, ಶಿವಮೊಗ್ಗೆಗಳಿಗೇ ಹೆಸರಾಂತ ಚತುರ, ಧಾರ್ಮಿಕ ಪುರುಷ, ಕ್ರಾಂತಿಕಾರಿ ಸಾಹಿತಿ ನಡಹಳ್ಳಿ ವೆಂಕಪ್ಪನವರು "ಶ್ರೀಮದ್ಧರ್ಮನಿದಾನಂ" ಧಾರ್ಮಿಕ ಮಾಸಪತ್ರಿಕೆಯನ್ನು ೧೯೧೨ರಲ್ಲಿ ಆರಂಭಿಸಿ ೧–೨ ವರ್ಷ ಕಾಲ ನಡೆಸಿದರು. ಧಾರ್ಮಿಕ ಸಾಹಿತ್ಯ ಜ್ಞಾನವುಳ್ಳ ಇವರು ತಮ್ಮ ಪತ್ರಿಕೆಯ ೨೪ ಪುಟಗಳಲ್ಲಿ ಅತಿ ಕ್ಲಿಷ್ಟವಾದ "ಯಾಜ್ಞವಲ್ಕ್ಯಸ್ಮೃತಿ" ಹಾಗೂ "ಧರ್ಮಸಿಂಧೂ"ಗಳ ಶ್ಲೋಕ ಹಾಗೂ ಟೀಕೆ ಬರೆಯುತ್ತಿದ್ದರು.[4] ವಾರ್ಷಿಕ ಚಂದಾ ಕೇವಲ ೨ರೂ ಇದ್ದು ಈ ಭಾಗ (ಸಾಗರ–ಸೊರಬ)ದಲ್ಲಿ ಜನಪ್ರಿಯ ಪತ್ರಿಕೆಯಾಗಿತ್ತು.

ಇಷ್ಟಕ್ಕೇ ತಮ್ಮ ಪ್ರಯತ್ನ ಬಿಡದೇ ವೆಂಕಪ್ಪನವರು "ಆರ್ಯಧರ್ಮ ಪ್ರಕಾಶ" (೧೯೧೮) "ಹವ್ಯಕೋದಯ" (೧೯೨೮) ಮಾಸ ಪತ್ರಿಕೆಗಳನ್ನು ನಡೆಸಿದರು. ಇವು ಆಗ ಸಾಗರ–ಸೊರಬಗಳಿಗೇ ಏಕೈಕವಾದ ಅವರ ನಡಹಳ್ಳಿಯ "ಶ್ರೀ ಲಕ್ಷ್ಮೀ ವಿಲಾಸ" ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಿ ಪ್ರಕಟಿಸುತ್ತಿದ್ದರು. ಹವ್ಯಕಧರ್ಮ, ನೀತಿ - ತತ್ವಗಳ ಪ್ರಸಾರವೇ ಇವುಗಳ ಉದ್ದೇಶವಾಗಿತ್ತು. ಆದರೆ ಇವಾವುವೂ ೩–೪ ವರ್ಷಗಳಿಗೂ ಹೆಚ್ಚು ಕಾಲ ನಡೆಯಲಿಲ್ಲ.

ಇದೇ ವೇಳೆಗೆ ತೀರ್ಥಹಳ್ಳಿಯಿಂದ ಚಿನ್ನ ಭಂಡಾರದ ಸುಬ್ಬರಾವ್ ಎಂಬುವರು "ಜನ್ಮಭೂಮಿ" (೧೯೨೮) ಎಂಬ ಪತ್ರಿಕೆಯನ್ನು ಕೆಲಕಾಲ ನಡೆಸಿದರು. "ಪ್ರಬೋಧ" ಮಾಸಿಕವು (೧೯೪೨) ಧಾರ್ಮಿಕ, ಸಾಹಿತ್ಯಕ, ಸಾಮಾಜಿಕ ಉದ್ದೇಶ ಹೊಂದಿ ಉತ್ತಮ ಸ್ಥಿತಿಯಲ್ಲಿ ೪–೬ ವರ್ಷ ನಡೆಯಿತು. ಹೊಂಬುಜದ ಜೈನಮಠದ ಮುಖಪತ್ರ ಮಾಸಿಕ "ಗುರುದೇವ" (೧೯೫೬) ಶ್ರೀ ದೇವೇಂದ್ರಕೀರ್ತಿಸ್ವಾಮೀಜಿಯವರ ಹಿರಿತನದಲ್ಲಿ ಅಚ್ಚಾಗುತ್ತಿದ್ದು ಜೈನಧರ್ಮ, ಪುರಾಣ, ನೀತಿಕತೆ ಸಮಾಚಾರಗಳನ್ನು ಹರಡುತ್ತಿದೆ. ಹೆಚ್ಚಿನ ಸಂಖ್ಯೆಯ ಚಂದಾದಾರರಲ್ಲದೇ ಉದಾರಿ ಅಭಿಮಾನಿಗಳ ಆಶ್ರಯವೂ ಇದಕ್ಕಿದೆ.

ಸಾಗರ ತಾಲ್ಲೂಕು ದೈವಜ್ಞ ಮಹಾಸಭೆಯ ಪೋಷಣೆಯಲ್ಲಿ ನಡೆಯುತ್ತಿದ್ದ ಮಾಸಿಕ "ದೈವಜ್ಞ ಸಂದೇಶ" (೧೯೬೩) ಯಶಸ್ವಿಯಾಗಲಿಲ್ಲ. ಪ್ರಸಿದ್ಧ ಕ್ಷೇತ್ರ ವರದಪುರದಿಂದ "ಶ್ರೀಧರ ಸಂದೇಶ" ಮಾಸಪತ್ರಿಕೆ ೧೯೬೭ರಲ್ಲಿ ಪ್ರಾರಂಭವಾಯಿತು. ಶ್ರೀ ಕೆ. ವಿ. ಶಂಕರನಾರಾಯಣ ರಾವ್ ಹಾಗೂ ಈ ಭಾಗದ ಜನಪ್ರಿಯ ವ್ಯಕ್ತಿ ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆಯವರು ಸಂಪಾದಕರಾಗಿದ್ದರು. ಹೊರ ನಾಡುಗಳಾದ ಮಹಾರಾಷ್ಟ್ರ, ಗುಜರಾಥಗಳಿಂದಲೂ ಭಕ್ತ ಜನರ, ಆಸ್ತಿಕರ ಸಹಾಯ, ಸಹಕಾರ ಗಳಿಸಿದ್ದರೂ ೧೯೭೨ರಲ್ಲಿ ಇದು ಅಳಿಯಿತು. ಇದೇ ದಿಶೆಯಲ್ಲಿ ಶ್ರೀ ಎಚ್. ಎಂ. ಶಿವರಾಮಶರ್ಮರ "ಸನಾತನ ಸಾರಥಿ" ಮಾಸಿಕ (೧೯೭೧), ಬಸವಾಪಟ್ಟಣದ ಶ್ರೀರಾಘವೇಂದ್ರ ಕೃಪಾಶ್ರಮದಿಂದ ಬಿ. ಜಿ. ಛಬ್ಬಿಯವರ ಸಂಪಾದಕತ್ವದಲ್ಲಿ ಹೊರಡುವ "ಅನುಗ್ರಹ" (೧೯೭೩), ಯು. ವಿ. ಮಂಜುನಾಥ ಐತಾಳರ "ತಮಸೋಮಾ" (೧೯೭೬) ಮುಂತಾದ ಪತ್ರಿಕೆಗಳು ಧರ್ಮ ಪ್ರಜ್ಞೆಯನ್ನು ಉಂಟುಮಾಡುವ ಕಾರ್ಯ ನಡೆಸಿವೆ.

ಸಾಹಿತ್ಯ ಕ್ಷೇತ್ರದಲ್ಲಿ—ಸಾಹಿತ್ಯೋದ್ದೇಶದ ಕೆಲವೇ ಪತ್ರಿಕೆಗಳು ಇದ್ದರೂ ಅವುಗಳ ಗುಣಮಟ್ಟ ಗಣನೀಯ. ಇವುಗಳಲ್ಲಿ ಪಿ. ವೆಂಕಪ್ಪಯ್ಯನವರ ಮಾಸಪತ್ರಿಕೆ "ಮಲೆನಾಡ ಸಮಾಚಾರ" (೧೯೧೭) ಉಲ್ಲೇಖನೀಯ. ಇದರಲ್ಲಿ ಸ್ಥಾನಿಕ ಸಮಾಚಾರಗಳ ಜೊತೆಗೆ ಸಾಹಿತ್ಯಕ ವಿಷಯ, ಕೆಲವು ನೀತಿಕಥೆಗಳೂ ಇರುತ್ತಿದ್ದವು. ಇವು ೨-೩ ವರ್ಷಕ್ಕೂ ಹೆಚ್ಚು ಕಾಲ ಬದುಕಲಿಲ್ಲ. ಜಿಲ್ಲೆಯ ಪ್ರಸಿದ್ಧ ಪತ್ರಕರ್ತ ಶ್ರೀ ಕೂಡಲಿ ಚಿದಂಬರಂ ಅವರ ಸಂಪಾದಕತ್ವದ "ವಿಚಾರವಾಹಿನಿ" (೧೯೩೯) ಗಂಭೀರ ಸಾಹಿತ್ಯಕ ವಿಷಯವನ್ನು ತೀರ್ಥಹಳ್ಳಿಯಿಂದ ಹರಡತೊಡಗಿತು. ಅನೇಕ ವಿದ್ವಾಂಸರಿಂದ ಪ್ರಬುದ್ಧ ಲೇಖನಗಳು ಬರೆಯಲ್ಪಡುತ್ತಿದ್ದವು. ಶಿವಮೊಗ್ಗದ ಹಿರಿಯ ವಕೀಲ ಶ್ರೀ ಮಹೇಂದ್ರನಾಥ ಪಾಟೀಲರು "ಪ್ರಜಾಹಿತ" ಸಾಪ್ತಾಹಿಕದಲ್ಲಿ ಕಥೆ, ಕವನ ತುಂಬಿ ಜೈಹಿಂದ್ ಪ್ರೆಸ್‌ನಲ್ಲಿ ಮುದ್ರಿಸಿ ಪ್ರಕಟಿಸುತ್ತಿದ್ದರು (೧೯೪೭–೫೫). ಜಿ. ಆರ್. ಸುಬ್ಬರಾವ್ ಹಾಗೂ ಕೇಶವಮೂರ್ತಿಯವರು "ನಂದಿನಿ" (೧೯೫೫) ತ್ರೈಮಾಸಿಕವನ್ನು ಶಿವಮೊಗ್ಗೆಯಿಂದ ಆರಂಭಿಸಿದರು. ಸಾಮಾನ್ಯ ಆಕಾರದ ೨೦–೩೦ ಪುಟಗಳಲ್ಲಿ ವೈಚಾರಿಕ ಪ್ರಬುದ್ಧ ಲೇಖನಗಳು ಇರುತ್ತಿದ್ದವು. ಸಾಗರದ ಉಳ್ಳೂರು ಸುಬ್ಬರಾಯರ ಸಂಪಾದಕತ್ವದ "ಉದಯರಾಗ" ತ್ರೈಮಾಸಿಕ (೧೯೫೭) ಇದೇ ವರ್ಗಕ್ಕೆ ಸೇರಿದೆ. ಜಿಲ್ಲೆಯ ಪತ್ರಿಕೋದ್ಯಮ ಭೀಷ್ಮರೆನಿಸಿಕೊಂಡ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು "ಮಲೆನಾಡ ವಾರ್ತಾ" (೧೯೫೬) ಸಾಪ್ತಾಹಿಕವನ್ನು ಶಿವಮೊಗ್ಗೆಯಲ್ಲಿ ಹೊರಡಿಸತೊಡಗಿದರು. ಮಲೆನಾಡಿನ ಅಭಿವೃದ್ಧಿ ಸಾಹಿತ್ಯ, ಸಂಸ್ಕೃತಿ, ಹಾಗೂ ಜಿಲ್ಲೆಯ ವಿವಿಧ ಸಮಸ್ಯೆ, ಭೂಸುಧಾರಣಾ ಕಾಯಿದೆಗಳ ಕುರಿತಾದ ಚರ್ಚೆಯೇ ಇದರ ಮಹೋದ್ದೇಶವಾಗಿದೆ. ೪ ಪುಟಗಳ ಈ ಸಾಪ್ತಾಹಿಕವು ರೇಣುಕಾ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿತವಾಗುತ್ತಿದ್ದು, ಇಂದಿಗೂ ಸಾವಿರ ಪ್ರತಿಗಳ ಪ್ರಸಾರ ಹೊಂದಿದ ಈ ಪತ್ರಿಕೆ ತನ್ನ ಮಟ್ಟವನ್ನು ಕಾಯ್ದಿರಿಸಿಕೊಂಡು ನಡೆದು ಬರುತ್ತಿದೆ. ಜಿಲ್ಲೆಗಾಗಿ ಶ್ರಮಿಸುತ್ತಿರುವ ಹಳೆಯ ಪತ್ರಿಕೆಗಳಲ್ಲಿ ಹಿರಿದಾದ ಸ್ಥಾನ ಹೊಂದಿದೆ.

ನವ್ಯ ಸಾಹಿತ್ಯಬ್ರಹ್ಮ ಶ್ರೀ ಗೋಪಾಲಕೃಷ್ಣ ಅಡಿಗರ "ಸಾಕ್ಷಿ" (೧೯೬೭) ಒಳ್ಳೆಯ ಗಟ್ಟಿ ಸಾಹಿತ್ಯವನ್ನು ಮೂರು ತಿಂಗಳಿಗೊಮ್ಮೆ ನೀಡುತ್ತಿದೆ. ಮೊದಲು ಧಾರವಾಡದಿಂದ ಆರಂಭವಾಗಿದ್ದರೂ ಶ್ರೀಬಾಲಕೃಷ್ಣರ "ಕವಿತಾ" (೧೯೬೭) ತ್ರೈಮಾಸಿಕವು ಸಾಗರದ "ಸಾಕ್ಷಿ"ಯ ಜೊತೆಗೇ ಪ್ರಕಟವಾಗುತ್ತಿದ್ದರೂ ೧ ವರ್ಷದಲ್ಲೇ ಚರಮಗೀತೆ ಹಾಡಿತು. ಸಾಗರದ "ಉದಯರವಿ" (೧೯೬೦), ಶಿವಮೊಗ್ಗದ "ವಿದ್ಯಾಸಾಗರ" (ತ್ರೈ. ೧೯೬೬–೬೭), ಮಂಜುನಾಥ ಐತಾಳರ ಶಿವಮೊಗ್ಗೆಯ "ತಮಸೋಮಾ" ಮಾಸಿಕ (೧೯೭೬), ಪ. ದೇವಣ್ಣರಾವ್ ಸಂಪಾದಕರಾಗಿರುವ "ಬೃಹಸ್ಪತಿ ವಾಣಿ" ಸಾಪ್ತಾಹಿಕ (೧೯೭೭), ಶಿವಮೊಗ್ಗೆಯಲ್ಲಿ ಹುಟ್ಟಿ ೧ವರ್ಷ ಕಳೆದು ಬಾಳಿ

ಹೊನ್ನೂರನ್ನು ಸೇರಿ ಹೊರಡುತ್ತಿರುವ ಎಸ್. ಜಿ. ಕೃಷ್ಣಮೂರ್ತಿಯವರ "ಶಿರೋರತ್ನ" (೧೯೭೭) ಕೆಲಮಟ್ಟಿಗೆ ಸಾಹಿತ್ಯಸೇವೆ ಸಲ್ಲಿಸುತ್ತಿವೆ.

ಸುದ್ದಿ ಸಮಾಚಾರ ಕ್ಷೇತ್ರ—ಜಿಲ್ಲೆಯಲ್ಲಿ ಪತ್ರಿಕೋದ್ಯಮವನ್ನು ಪ್ರಾರಂಭಿಸಿದ "ಜ್ಞಾನೋದಯ" (೧೮೯೭) ಬ್ಯಾಡಗಿ ಶೇಷಗಿರಿರಾಯನೇ "ವೃತ್ತಾಂತ ಮಂಜರಿ" (೧೮೯೮) ಹಾಗೂ "ಶಿವಮೊಗ್ಗ ವೃತ್ತಾಂತ" (೧೯೧೭) ಸುದ್ದಿಪತ್ರಿಕೆಗಳ ಪ್ರಾರಂಭಿಕನು. ಪಿ. ವೆಂಕಪ್ಪಯ್ಯನವರ "ಮಲೆನಾಡ ಸಮಾಚಾರ" (೧೯೧೭) ಉತ್ತಮ ಮಾಸಿಕ ಸುದ್ದಿ ಪತ್ರಿಕೆಯಾಗಿದ್ದರೂ ಬಹು ಕಾಲ ಉಳಿಯಲಿಲ್ಲ. ಶಿರಸಿಯವರಾದ ರಾಮಚಂದ್ರ ವೆ. ಪಾಲಗಳ್ಳಿಯವರು ಶಿರಸಿಯಲ್ಲಿಯ ತಮ್ಮ "ನವಚೇತನ" (೧೯೫೩) ಸಾಪ್ತಾಹಿಕವನ್ನು ಸಾಗರಕ್ಕೆ ಸ್ಥಳಾಂತರಿಸಿದರು (೧೯೫೪). ಇಲ್ಲಿಯೂ ಒಂದು ವರ್ಷ ಪೂರ್ತಿ ನಡೆಯದೇ ಸೊರಬದಲ್ಲಿ ಕೆಲ ಸಂಚಿಕೆಗಳ ಪ್ರಕಟಣೆ ನಡೆಸಿ ಅಲ್ಲಿಯೇ ಅದೃಶ್ಯವಾಯಿತು (೧೯೫೫). "ಶಿವಮೊಗ್ಗೆ ಗೆಝೆಟ್" ರಾಮಕೃಷ್ಣರಾಯರ (ಭಗವಾನ್ ಆಶ್ರಮ ಶಿವಮೊಗ್ಗ) ಸಂಪಾದಕತ್ವದ ಉತ್ತಮ ಪತ್ರಿಕೆಯಾಗಿತ್ತು (೧೯೫೪ ೫೬). ಇದು ಮೊದಲು ಸಾಪ್ತಾಹಿಕವಾಗಿದ್ದು ಒಂದು ವರ್ಷದ ಅವಧಿಯಲ್ಲಿ ದೈನಿಕವಾಯಿತು. ಎ. ವಿ. ಶ್ರೀನಿವಾಸರ ದೈನಿಕ "ಮಿಂಚು" (೧೯೫೭), ಎನ್. ಕೆ. ಸೀತಾರಾಮರವರ ಸಾಪ್ತಾಹಿಕ "ಜಾಗೃತಿ" (೧೯೬೨-೬೬), ಕೆ. ಶ್ರೀನಿವಾಸ ಅಯ್ಯಂಗಾರ್‌ರ ದೈನಿಕ "ಸಹ್ಯಾದ್ರಿ" (೧೯೬೨), ಶಿವಮೊಗ್ಗ ಎಂ. ನಾಗೇಂದ್ರರಾವ್‌ರವರ "ಎಚ್ಚರಿಕೆ" (೧೯೬೨) ದೈನಿಕ, ಚನ್ನಗಿರಿಯಿಂದ ಹೊರಟ ಶ್ರೀ ಸುಬ್ರಹ್ಮಣ್ಯರ "ತಾಲೂಕು ವಾರ್ತಾ" (೧೯೬೨–೬೩) (ಇದು ಪಾಕ್ಷಿಕವಾಗಿತ್ತು.), ಎಚ್.ಆರ್. ಮಲ್ಲಾರಾಧ್ಯರ ದೈನಿಕ "ಶರಾವತಿ" (೧೯೬೩ ಡಿಸೆಂಬರ) (ಮೊದಲು ಸಾಪ್ತಾಹಿಕವಾಗಿತ್ತು.), ಕೆ. ಬಿ. ರಾಮಪ್ಪನವರ "ಶಿವಮೊಗ್ಗ ಟೈಮ್ಸ್" (೧೯೭೪ ಆಗಸ್ಟ್) ಇತ್ಯಾದಿ ದೈನಿಕಗಳು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಕೆಲವು ಪ್ರಮುಖ ಪತ್ರಿಕೆಗಳು.

ವಿವಿಧ ಕ್ಷೇತ್ರಗಳಲ್ಲಿ—ಜಿಲ್ಲೆಯ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಪತ್ರಿಕಾ ಕಾರ್ಯ ನಡೆಯುತ್ತಿದೆ. ತೀರ್ಥಹಳ್ಳಿಯಿಂದ ಸೂರ್ಯನಾರಾಯಣ ಶಾಸ್ತ್ರೀಯವರು ಹೊರಡಿಸುತ್ತಿದ್ದ "ಆಯುರ್ವೇದ" ಮಾಸಿಕ (೧೯೨೫), ಡಾ. ವಿ ಪಾರ್ಥನಾರಾಯಣ ಪಂಡಿತರು ಹಾಗೂ ಪ್ರಾಣಾಚಾರ್ಯ ವೈದ್ಯರಿಬ್ಬರೂ ಸೇರಿ ಸಂಪಾದಿಸುತ್ತಿದ್ದ "ಆಯುರ್ವೇದ ಮಾರ್ತಾಂಡ" (೧೯೩೫) ಪತ್ರಿಕೆಗಳು ಜಿಲ್ಲೆಯ ಪ್ರಮುಖ ವೈದ್ಯಕೀಯ ಪತ್ರಿಕೆಗಳು.

ಸಿ. ಟಿ. ನಾಜೋಯಿಸರ ಸಂಪಾದಕತ್ವದ "ಜೋತಿಷ್ಯ ವಿದ್ಯಾಸಾಗರ" (೧೯೩೨ ಶಿವಮೊಗ್ಗ) ಏಕಮೇವ ಜ್ಯೋತಿಷ್ಯಸಂಬಂಧೀ ಮಾಸಿಕ ಪತ್ರಿಕೆಯು.

ಸೊರಬದ ಎ. ವಿ. ಕದಂರನವರ "ನ್ಯಾಯವಾಣಿ" (೧೯೫೩) ಕಾನೂನಿಗೆ ಸಂಬಂಧಿಸಿದ ಏಕಮೇವ ಪತ್ರಿಕೆಯು.

ಕ್ರಾಂತಿಕಾರೀ ವೈಚಾರಿಕ "ಸಿಡಿಲಮರಿ" (೧೯೭೨) ದೈನಿಕ, ಭದ್ರಾವತಿಯ ಎ. ವಿ. ಕೃಷ್ಣಪ್ಪನವರ ಸಂಪಾದಕತ್ವದ್ದು. ನಾಗೇಂದ್ರರಾಯರ "ವಿಕೇಂದ್ರ" ಪಾಕ್ಷಿಕ (೧೯೭೬), ಇದೇ ವರ್ಗಕ್ಕೆ ಸೇರಿದ ನವ್ಯ ವಿಚಾರ ಕ್ರಾಂತಿಯದು

ಭದ್ರಾವತಿಯ ಕಬ್ಬಿಣ–ಉಕ್ಕು ಕಾರ್ಖಾನೆಯ ಮಾಸಿಕ ಮುಖಪತ್ರವಾದ "ಉಕ್ಕಿನ ವಾರ್ತೆ" (೧೯೬೧) ಜಿಲ್ಲೆಯ ಏಕೈಕ ಔದ್ಯಮಿಕ ಪತ್ರಿಕೆಯು. ಇಷ್ಟೆಲ್ಲ ಕ್ಷೇತ್ರಗಳಲ್ಲಿ ಪತ್ರಿಕೆಗಳು ಕಾರ್ಯ ಸಾಗಿಸುತ್ತಿದ್ದರೂ, ಶೈಕ್ಷಣಿಕ ಪತ್ರಿಕೆ ಒಂದೂ ಇಲ್ಲದುದು ಒಂದು ಮಹಾ ಕೊರತೆಯೆನಿಸದೇ ?

ಇಷ್ಟೆಲ್ಲ ಪ್ರಕಾರಗಳಲ್ಲಿ, ಕ್ಷೇತ್ರಗಳಲ್ಲಿ, ದೈನಿಕ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ, ತ್ರೈಮಾಸಿಕಗಳ ರೂಪಗಳಲ್ಲಿ ಪತ್ರಿಕೆಗಳೇನೋ ಸಾಕಷ್ಟು ಹೇಳಿಕೊಳ್ಳುವಂತಹ ಸಂಖ್ಯೆಯಲ್ಲಿವೆ. ಆದರೆ ಪತ್ರಿಕೆಗಳ ಮಟ್ಟ ಆ ಹಂತಕ್ಕೇರಿಲ್ಲ ಎಂಬುದು ಇದನ್ನೋದಿದಾಗ ವೇದ್ಯವಾಗದಿರದು. ಇದ್ದ ಬಹುಪಾಲು ಪತ್ರಿಕೆಗಳು, ರಾಜ್ಯವಿಸ್ತಾರದ ಇತರ ಪತ್ರಿಕೆಗಳ ಸಮಾಚಾರವನ್ನೇ ನೀಡುವಂತಹವಾಗಿವೆ. ಕೆಲವು ಪತ್ರಿಕೆಗಳು ಪ್ರಕಟವಾಗುವ ವೈಖರಿ ಕಂಡರೆ ಇದೂ ಒಂದು ಪತ್ರಿಕೆಯೇ? ಎನಿಸುತ್ತದೆ. ಇಂಥವು ಎರಡು ಅಥವಾ ನಾಲ್ಕು ಪುಟಗಳದ್ದಾಗಿದ್ದು ಕೈಬೆರಳಿನಿಂದೆಣಿಸುವಷ್ಟು ಮಾತ್ರ ಸುದ್ದಿಗಳಿದ್ದು ಉಳಿದ ಬಹುಭಾಗವನ್ನೆಲ್ಲ ಜಾಹೀರಾತುಗಳು ಹಾಗೂ ಸಿನಿಮಾ ಪ್ರಕಟಣೆಗಳೇ ಆವರಿಸಿರುತ್ತವೆ. ಜಾಹೀರಾತೇ ಈ ಪತ್ರಿಕೆಗಳ ಬೆನ್ನೆಲುಬಾಗಿದೆ.

“ಹೊಸ ಪತ್ರಿಕೆಯೊಂದು ಆರಂಭವಾಗಿದೆ” ಎಂಬ ಸಂಗತಿ ಎಲ್ಲರಿಗೂ ತಿಳಿಯುವ ಪೂರ್ವವೇ ಸಾಯುವ ಪತ್ರಿಕೆಗಳೆಷ್ಟೋ! ಒಂದೇ ಸಂಚಿಕೆ ಮಾತ್ರ ಹೊರಟು ನಿಂತ ಪತ್ರಿಕೆಯೂ ಇಲ್ಲದಿಲ್ಲ. ಪತ್ರಿಕೋದ್ಯಮ ತುಂಬಾ ಸಾಹಸೀ ವೃತ್ತಿಯು. ಸಂಪಾದಕ, ಪ್ರಕಾಶಕರೆಲ್ಲ ಬಹಳ ಕಷ್ಟನಷ್ಟಗಳನ್ನು ಎದುರಿಸಬೇಕಾಗುವುದು. ಆದರೂ ಪತ್ರಿಕೆ ಯಶಸ್ವಿಯಾದೀತೆಂಬ ಧೈರ್ಯವಿಲ್ಲ.

ಒಟ್ಟಿನ ದೃಷ್ಟಿಯಲ್ಲಿ ಹಲವಾರು ಜನರಿಗೆ ತಾನೂ ಹೊಸ ಪತ್ರಿಕೆಯೊಂದರ ಸಂಪಾದಕನಾಗಬೇಕು, ಪತ್ರಿಕೆಯನ್ನು ಹೊರಡಿಸಬೇಕೆಂಬ ಆತುರವಿದೆ–ಉತ್ಸಾಹವಿದೆ. ಆದರೆ ಅದನ್ನು ಮೇಲ್ಮಟ್ಟದಲ್ಲಿಟ್ಟು ಬಹುಕಾಲ ನಡೆಸಬೇಕೆಂಬ ಗುರಿ ಈವರೆಗಿನ ನಮ್ಮ ಪತ್ರಿಕಾ-ಸಮೀಕ್ಷೆಯಲ್ಲಿ ಕಂಡುಬಂದುದು ಕಡಿಮೆ. ಇಂದು ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೧೫-೨೦ ದೈನಿಕಗಳು, ೧ ಪಾಕ್ಷಿಕ, ೧೮ ಸಾಪ್ತಾಹಿಕಗಳು, ೩ ಮಾಸಪತ್ರಿಕೆಗಳು, ಹಾಗೂ ೧ ತ್ರೈಮಾಸಿಕವೂ ಹೊರಡುತ್ತಿವೆ. ಇವು ಪ್ರಸಾರ ಸಂಖ್ಯೆಯತ್ತ ಲಕ್ಷ್ಯಕೊಡುವುದರ ಜೊತೆಗೆ ತಮ್ಮ ಮಟ್ಟವನ್ನೂ ಎತ್ತರಿಸಿಕೊಳ್ಳಬೇಕು. ಜೊತೆಗೆ ಜನಪ್ರಿಯತೆಯನ್ನು ಗಳಿಸಿ ಬಹುಕಾಲ ಬಾಳಬೇಕು. “ಪತ್ರಿಕೆಯೆಂದರೆ ಹೀಗಿರಬೇಕು” ಎಂಬ ಉಕ್ತಿಗೆ ಪಾತ್ರವಾಗಬೇಕು.

ಅಡಿಟಿಪ್ಪಣಿಗಳು

೧. ಕನ್ನಡ ಪತ್ರಿಕಾ ಬ್ರಹ್ಮ ಹೆರ್ಮನ್ ಮೋಗ್ಲಿಂಗ್, ಕಸ್ತೂರಿ, ಜುಲೈ ೧೯೭೮

೨. ಅದೇ.,

೩. ಅದೇ.,

೪. ಹೊಸಗನ್ನಡದ ಅರುಣೋದಯ, ಪುಟ ೫೧೧. ಲೇ. ಶ್ರೀ. ಹಾವನೂರ

೫. ಶ್ರೀಮದ್ಧರ್ಮನಿದಾನಂ, ೧೯೧೨, ಸಂಪುಟ : ೧ ಸಂಚಿಕೆ : ೭

ಆಧಾರಗಳು

೧. ಹೊಸಗನ್ನಡದ ಅರುಣೋದಯ, ಲೇ: ಶ್ರೀನಿವಾಸ ಹಾವನೂರ

೨. ಕರ್ನಾಟಕ ಪತ್ರಿಕೋದ್ಯಮ, ಚಿರಂಜೀವಿ, ಐ. ಬಿ. ಎಚ್. ಪ್ರಕಾಶನ

೩. ಶಿವಮೊಗ್ಗ ಗೆಜೆಟಿಯರ್, ೧೯೭೫

೪. ''ಅವಲೋಕನ'', ಸ್ಮರಣ ಸಂಚಿಕೆ, ೧೯೭೧ ಬಿ. ವಿ. ಕೆ. ಮೂರ್ತಿ

೫. ಸ್ವಂತ ಸಂಗ್ರಹದ ಪತ್ರಿಕೆಗಳು.

ಅನುಬಂಧ

ಸಂ	ಪತ್ರಿಕೆಗಳು	ಸ್ವರೂಪ	ಊರು	ಸಂಪಾದಕರು	ಕಾಲ
೧	ಜ್ಞಾನೋದಯ	ಮಾ	ಶಿವಮೊಗ್ಗ	ಬ್ಯಾಡಗಿ ಶೇಷಗಿರಿರಾವ್	೧೮೯೭
೨	ವೃತ್ತಾಂತ ಮಂಜರೀ	ಸಾ	”	”	೧೮೯೮
೩	ಶ್ರೀಮದ್ಧರ್ಮನಿಧಾನಂ	ಮಾ	ಸೊರಬ	ನಡಹಳ್ಳಿ ವೆಂಕಪ್ಪನವರು	೧೯೧೨–೧೫
೪	ಭಾಗ್ಯೋದಯ	ಸಾ	ಶಿವಮೊಗ್ಗ	(ಗೊತ್ತಾಗಿಲ್ಲ)	೧೯೧೪–೧೫
೫	ಶಿವಮೊಗ್ಗ ವೃತ್ತಾಂತ	”	”	ಬ್ಯಾಡಗಿ ಶೇಷಗಿರಿರಾವ್	೧೯೧೭
೬	ಮಲೆನಾಡ ಸಮಾಚಾರ	ಮಾ	”	ಪಿ. ವೆಂಕಪ್ಪಯ್ಯ	೧೯೧೬
೭	ಆರ್ಯಧರ್ಮಪ್ರಕಾಶ	”	ನಡಹಳ್ಳಿ	ನಡಹಳ್ಳಿ ವೆಂಕಪ್ಪನವರು	೧೯೨೦–೨೩
೮	ಆಯುರ್ವೇದ	”	ತೀರ್ಥಹಳ್ಳಿ	ಸೂರ್ಯನಾರಾಯಣಶಾಸ್ತ್ರಿ	೧೯೨೫
೯	ಜನ್ಮಭೂಮಿ	ಪಾ	”	ಚಿನ್ನ ಭಂಡಾರದ ಸುಬ್ಬರಾವ್	೧೯೨೮
೧೦	ಹವ್ಯಕೋದಯ	”	ನಡಹಳ್ಳಿ	ನಡಹಳ್ಳಿ ವೆಂಕಪ್ಪನವರು	೧೯೩೦–೩೧
೧೧	ಜ್ಯೋತಿಷ ವಿಚಾರ ಸಾಗರ	ಮಾ	ಶಿವಮೊಗ್ಗ	ಲಿಂಗಾಜೋಯಿಸ್	೧೯೩೨
೧೨	ಆಯುರ್ವೇದ ಮಾರ್ತಾಂಡ	”	”	ಡಾ. ವಿ. ಪಾರ್ಥನಾರಾಯಣಪಂಡಿತ; ಪ್ರಾಣಾಚಾರ್ಯ ವೈದ್ಯ.	೧೯೩೫
೧೩	ವಿಚಾರವಾಹಿನಿ	ಪಾ	ತೀರ್ಥಹಳ್ಳಿ	ಕೂಡಲಿ ಚಿದಂಬರಂ	೧೯೩೯
೧೪	ಪ್ರಬೋಧ	ಮಾ	”	ಗುಂಡ್ಮಿ ಮಹಾಬಲ ಭಟ್ಟ	೧೯೪೨
೧೫	ಪ್ರಜಾಹಿತ	ಸಾ	ಶಿವಮೊಗ್ಗ	ಮಹೇಂದ್ರನಾಥ ಪಾಟೀಲ	೧೯೪೭
೧೬	ನವಜ್ಯೋತಿ	ಪಾ	”	ಬ್ರಹ್ಮಾವರ ಅಂತಯ್ಯಶೆಟ್ಟಿ	೧೯೪೯
೧೭	ವೈದಿಕ ಸನಾತನ ಧರ್ಮ	ಮಾ	”	ವಿ॥ ಎಸ್. ಸುಬ್ರಹ್ಮಣ್ಯ ಜೋಯ್ಸ	೧೯೫೧
೧೮	ನಂದಿನಿ	ತ್ರೈ	”	ಜಿ. ಆರ್. ಸುಬ್ಬರಾವ್; ಕೇಶವಮೂರ್ತಿ	೧೯೫೧–೫೩
೧೯	ನವಚೇತನ	ಸಾ	ಸಾಗರ—ಸೊರಬ	ರಾ. ವೆ. ವಾಲಗಳ್ಳಿ	೧೯೫೩

೨೦	ನ್ಯಾಯವಾಣಿ	ಮಾ ಸೊರಬ	ಎ. ವಿ. ಕದಂ	೧೯೫೩
೨೧	ಶಿವಮೊಗ್ಗ ಗೆಝೆಟ್	ಸಾ—ದೈ ಶಿವಮೊಗ್ಗ	ರಾಮಕೃಷ್ಣರಾವ್	೧೯೫೪–೫೬
೨೨	ಗುರುದೇವ	ಮಾ ಹೊಂಬುಜ	ಶ್ರೀ ದೇವೇಂದ್ರಕೀರ್ತಿಸ್ವಾಮಿಜಿ	೧೯೫೬
೨೩	ಉದಯರಾಗ	ತ್ರೈ ಸಾಗರ	ಉಳ್ಳೂರು ಸುಬ್ಬರಾವ್	೧೯೫೭
೨೪	ಮಿಂಚು	ದೈ ಶಿವಮೊಗ್ಗ	ಎ ವಿ. ಶ್ರೀನಿವಾಸ	,,
೨೫	ಮಲೆನಾಡ ವಾರ್ತಾ	ಸಾ ,,	ಭೂಪಾಳಂ ಆರ್. ಚಂದ್ರಶೇಖರಯ್ಯ	೧೯೫೯
೨೬	ಉಕ್ತಿನವಾರ್ತೆ	ಮಾ ಭದ್ರಾವತಿ	ಟಿ. ಎನ್. ರಘುಚಂದ್ರ	೧೯೬೦
೨೭	ಮಾರ್ಗದರ್ಶಿ	ಮಾ ಶಿವಮೊಗ್ಗ	ಸದಾಶಿವರಾವ್	,,
೨೮	ಸ್ವತಂತ್ರ	,, ,,	ಶ್ರೀನಿವಾಸ ಅಯ್ಯಂಗಾರ್	,,
೨೯	ಜಾಗೃತಿ	,, ,,	ಎನ್. ಕೆ. ಸೀತಾರಾಮ ಅಯ್ಯಂಗಾರ್	೧೯೬೨
೩೦	ಸಹ್ಯಾದ್ರಿ	ದೈ ,,	ಕೆ. ಶ್ರೀನಿವಾಸ ಅಯ್ಯಂಗಾರ್	,,
೩೧	ತಾಲೂಕು ವಾರ್ತಾ	ಸಾ ಚನ್ನಗಿರಿ	ಜಿ ಸುಬ್ರಹ್ಮಣ್ಯ	೧೯೬೨
೩೨	ವಿಕಾಸವಾಣಿ	ತ್ರೈ ಶಿವಮೊಗ್ಗ	ಜಿ. ಕೆ. ಚೆನ್ನಬಸಪ್ಪ	೧೯೬೩
೩೩	ದೈವಜ್ಞ ಸಂದೇಶ	ಮಾ ಸಾಗರ	ಎಸ್. ಶ್ರೀನಿವಾಸ ಜೋಯಿಸ್	,,
೩೪	ಶರಾವತಿ	ಸಾ ಶಿವಮೊಗ್ಗ	ಎಚ್. ಆರ್. ಮಲ್ಲಾರಾಧ್ಯ	,,
೩೫	ಕನ್ನಡ ಸಂದೇಶ	— ,,	ದೇವೇಂದ್ರ ಅಜಂಪಕುಮಾರ	೧೯೬೪
೩೬	ಪ್ರಶಾಂತಿ	ಮಾ ,,	ಎಚ್. ಎಸ್. ಶಿವರಾಮು	,,
೩೭	ಸುದ್ದಿ	ದೈ ಶಿವಮೊಗ್ಗ-ಸಾಗರ	ಕೆ. ಎಸ್. ರಂಗನಾಥ ಅಯ್ಯರ್	೧೯೬೬–೬೮
೩೮	ವಿದ್ಯಾಸಾಗರ	ತ್ರೈ ಸಾಗರ	ಕೆ. ವಿ. ಸುಬ್ಬಣ್ಣ	,,
೩೯	ಪತ್ರಿಕೆ	ದೈ ಶಿವಮೊಗ್ಗ	ಎಸ್. ನಾಗೇಂದ್ರರಾವ್	೧೯೬೭
೪೦	ಶ್ರೀಧರಸಂದೇಶ	ಮಾ ಸಾಗರ	ಕೆ. ವಿ. ಶಂಕರನಾರಾಯಣರಾವ್	,,
೪೧	ಕವಿತಾ	ತ್ರೈ ,,	ಕೆ. ಎನ್. ಬಾಲಕೃಷ್ಣ	,,
೪೨	ಸನಾತನ–ಸಾರಥಿ	ಮಾ ಶಿವಮೊಗ್ಗ	ಎಚ್. ಎಸ್. ಶಿವರಾಮು	೧೯೭೧
೪೩	ಸಿಡಿಲಮರಿ	ದೈ ಭದ್ರಾವತಿ	ಎ. ವಿ. ಕೃಷ್ಣಪ್ಪ	೧೯೭೨

೪೪	ಮನೋಭೂಮಿ	ದೈ	ಸಾಗರ	ಎಚ್. ರಾಮಚಂದ್ರ ಶೆಟ್ಟಿ	೧೯೭೨
೪೫	ಶಂಕು	ಸಾ ದೈ	ಶಿವಮೊಗ್ಗ	ಎನ್. ಕೆ. ಮಾರುತಿ	,,
೪೬	ಕಂಠೀರವ	ದೈ	,,	ಎನ್. ಮುನಿಸ್ವಾಮಪ್ಪ	,,
೪೭	ಮುಕ್ತಿ	ಸಾ	,,	ಬಿ. ಕೆ. ಶ್ರೀಕಂಠ ಮೂರ್ತಿ	೧೯೭೩ ೭೪
೪೮	ಕರ್ಮಚಾರಿ	ದೈ	ಸಾಗರ	ಟಿ. ಡಿ. ಕೆ. ಪಂಡಿತ	,,
೪೯	ನುಡಿಗಿಡ	,,	ಶಿವಮೊಗ್ಗ	ಎನ್. ಕೃಷ್ಣಾಜಿರಾವ್	,,
೫೦	ಅನುಗ್ರಹ	ಮಾ	ಬಸವಾಪಟ್ಟಣ	ಬಿ. ಜಿ. ಛಬ್ಬಿ	,,
೫೧	ಚಾಟಿ	ದೈ	ಶಿವಮೊಗ್ಗ	ಎಸ್. ಆರ್. ಮಹಾಂತೇಶ	,,
೫೨	ತುಲಾ	ಸಾ	ಹೊಸನಗರ	ಎಚ್. ಎಮ್. ದತ್ತಾತ್ರೇಯ ಅಡಿಗ	,,
೫೩	ಸಾರ್ವಭೌಮ	,,	ಶಿವಮೊಗ್ಗ	ಎಚ್. ಸಿ. ಜಯರಾಮ	೧೯೭೪
೫೪	ಶಿವಮೊಗ್ಗ ಟೈಮ್ಸ್	,,	,,	ಕೆ. ಬಿ. ರಾಮಪ್ಪ	,,
೫೫	ಶಂಖು	ದೈ	,,	ಎನ್. ಕೆ. ಮಾರುತಿ	,,
೫೬	ಸಾಕ್ಷಿ	ತ್ರೈ	ಸಾಗರ	ಶ್ರೀಗೋಪಾಲಕೃಷ್ಣ ಅಡಿಗ	,,
೫೭	ಫಲಗಾರ	ಪಾ	,,	ಎ. ಎಸ್. ಗಣಪತಿ	,,
೫೮	ಹವನ	ಸಾ	ಭದ್ರಾವತಿ	ಕೆ. ಎಸ್. ಶ್ರೀನಿವಾಸಮೂರ್ತಿ	೧೯೭೫
೫೯	ಶಿರೋರತ್ನ	,,	ಶಿವಮೊಗ್ಗ (೧೯೭೭ ರಿಂದ ಬಾಳೇಹೊನ್ನೂರು)	ಎಸ್. ಜಿ. ಕೃಷ್ಣಮೂರ್ತಿ	೧೯೭೬
೬೦	ಹೊಸನೋಟ	,,	ಶಿವಮೊಗ್ಗ	ಕೆ. ಬಿ. ರಾಮಪ್ಪ	,,
೬೧	ತಮಸೋಮಾ	ಮಾ	,,	ಯು. ವಿ. ಮಂಜುನಾಥ ಐತಾಳ	,,
೬೨	ಭದ್ರಾವಾಹಿನಿ	ದೈ	ಭದ್ರಾವತಿ	ಗಣೇಶರಾವ್	,,
೬೩	ಸರ್ವಜ್ಞ	ಸಾ	ಶಿಕಾರಿಪುರ	ಎಸ್. ಬಿ. ಮಠದ	,,
೬೪	ಮರ್ಧಿನಿ	ದೈ	ಭದ್ರಾವತಿ	ಆರ್. ಕೆ. ಮೂರ್ತಿ	,,
೬೫	ವನರಾಜ	,,	ಸಾಗರ	ಎಚ್. ನರಸಿಂಹಪ್ಪ	,,

೬೬	ಮನೋಗತ	”	ಶಿವಮೊಗ್ಗ	ಯು. ಎಸ್. ಶಿವಲಿಂಗ ಮೂರ್ತಿ	೧೯೭೭
೬೭	ಏಕಲವ್ಯ	”	”	ಕೆ. ಎನ್. ರಾಮಪ್ಪ	”
೬೮	ನಾವಿಕ	ದೈ	ಶಿವಮೊಗ್ಗ	ಎಸ್. ಚಂದ್ರಕಾಂತ	೧೯೭೭
೬೯	ಛಲದಂಕಮಲ್ಲ	”	”	ಪಿ. ಜನಾರ್ದನರಾವ್	”
೭೦	ಕಾಳಿದಾಸ	”	”	ಭಂಡಿಗಡಿ ಚೆನ್ನವೀರಪ್ಪ	”
೭೧	ಶಿವಮೊಗ್ಗ ಎಕ್ಸ್‌ಪ್ರೆಸ್	”	”	ಪದ್ಮನಾಭ ಉಡುಪ	”
೭೨	ಪ್ರೇಮದ ನುಡಿ	ಸಾ	”	ಹೆನ್ರಿರಾಜ್	”
೭೩	ಪರಾಗ	”	ಹೊಸನಗರ	ಜಿ. ವಿ. ವೇಣುಗೋಪಾಲ	”
೭೪	ಬೃಹಸ್ಪತಿವಾಣಿ	”	ಶಿವಮೊಗ್ಗ	ಪ. ದೇವಣ್ಣರಾವ್	”
೭೫	ಹೊಂಬಿಸಿಲು	ವಾ	”	ಸಿ. ಎ ಎಡ್ವಿನ್	”
೭೬	ವಿಕೇಂದ್ರ	”	ಭದ್ರಾವತಿ	ನಾಗೇಂದ್ರರಾವ್	”
೭೭	ಸಾಗರ ವಾರ್ತಾ	ದೈ	ಸಾಗರ	ಉಳ್ಳೂರು ಸುಬ್ಬರಾವ್	೧೯೭೮

ಸೂಚನೆ–ಈ ಲೇಖನವು ಶಿವಮೊಗ್ಗ ಜಿಲ್ಲೆಯ ಪತ್ರಿಕೆಗಳ ಪಕ್ಷಿನೋಟವೇ ಹೊರತು, ಪ್ರತಿಯೊಂದು ಪತ್ರಿಕೆಯನ್ನೂ ವಿಮರ್ಶೆಗೆ ಒಳಪಡಿಸಿಲ್ಲ. ನಾನು ನೀಡಿದ ಅಂಕಿ–ಸಂಖ್ಯೆಗಳೇ ಅಂತಿಮವಲ್ಲ. ಹೆಚ್ಚಿನ ಮಾಹಿತಿಯನ್ನು ಯಾರಾದರೂ ನನಗೆ ಒದಗಿಸಿದಲ್ಲಿ ತುಂಬಾ ಉಪಕೃತನಾಗಿರುತ್ತೇನೆ.

ಪಿ. ಆರ್. ತಿಪ್ಪೇಸ್ವಾಮಿ

ದಿಟ್ಟ ಕಲಾವಿದರು

೧. ಮ. ಈ. ಗುರು

1946ರಲ್ಲೇ ಇರಬೇಕು. ಆ ವ್ಯಕ್ತಿಯನ್ನು ನೋಡಿದ ಚಿತ್ರ ಇನ್ನೂ ಸ್ಪಷ್ಟವಾಗಿ ನಿಂತಿದೆ. ಕುಳ್ಳನೆಯ ದಿಟ್ಟ ಶರೀರ, ಹಿಂದೆ ಬಾಚಿದ ಕ್ರಾಪು, ಎಣ್ಣೆಗೆಂಪಿನ ಮುಖದ ಮೇಲೆ ಮಿಂಚುತ್ತಿದ್ದ ಕುಡಿಮೀಸೆ, ತುಂಬಿದ ಮೈಗೆ ಒಪ್ಪುವಂಥ ಬಿಳಿಯ ಜುಬ್ಬ, ಬಳ್ಳಾರಿಯ ಕಚ್ಚೆ, ಒಮ್ಮೆ ಕೇಳಿದರೆ ಮರೆಯಲಾಗದಂಥ ದೊಡ್ಡ ಧ್ವನಿ, ಯಾರಿರಬಹುದು ಈ ವ್ಯಕ್ತಿ? ಒಬ್ಬ ನುರಿತ ಕಲಾವಿದರೊಡನೆ ಅದೂ ಕಲಾಶಿಕ್ಷಕ ದಿ। ಎಸ್. ನಂಜುಂಡಸ್ವಾಮಿಯವರ ಜೊತೆ ಧೈರ್ಯದಿಂದ ವಾದ ಮಾಡುತ್ತಿದ್ದರು. ಆ ವ್ಯಕ್ತಿ ಸ್ವಾಮಿಯವರ ಶಿಷ್ಯರೆಂದೂ ಕಲಾ ವಿಷಯದಲ್ಲಿ ಕೆದಕಿ ಕೆದಕಿ ಕೇಳುವ ಚಟದವರೆಂದೂ ತಿಳಿಯಿತು. ಅವರನ್ನು ಆಗಾಗ ಮೈಸೂರಿನ ದೇವರಾಜ ಮಾರ್ಕೆಟ್ಟಿನ ಒಂದು ಮೂಲೆಯಲ್ಲಿ ನೋಡುತ್ತಿದ್ದೆನು.

ಅಂದು ಮಾರ್ಕೆಟ್ಟಿನಲ್ಲಿ ಜನಜಂಗುಳಿ ಹೆಚ್ಚಾಗಿದ್ದಿತು. ಹಣ್ಣುಹಂಪಲು ಅಂಗಡಿಗಳ ಸಾಲಿನಲ್ಲಿ ನಿಂತು ಶೀಘ್ರ ರೇಖಾಚಿತ್ರಗಳನ್ನು ಬರೆದುಕೊಂಡು ಸಾಗುತ್ತಿದ್ದ ಗುರು ಅವರ ಪರಿಚಯ ಅಲ್ಲೇ ಆದದ್ದು.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಮುದ್ದಾಪುರದಿಂದ ಬಂದವರು ಗುರುಪಾದಯ್ಯ. ಇವರ ತಂದೆ ಮಠದ ಈಶ್ವರಯ್ಯ. 1923ರಲ್ಲಿ ಜನನ. ಹಳ್ಳಿಯ ವಾತಾವರಣದಲ್ಲಿಯೇ ಬಾಲ್ಯ ಕಳೆಯಿತು. ಬಳ್ಳಾರಿ ಸೇಂಟ್ ಜೋಸೆಫ್ ಹೈಸ್ಕೂಲಿನಲ್ಲಿ ಇವರ ವಿದ್ಯಾಭ್ಯಾಸ. ಈ ವೇಳೆಗಾಗಲೇ ಅವರಲ್ಲಿ ಹೇಗೋ ಕಲಾಭಿರುಚಿ ಅಂಕುರಗೊಂಡಿತ್ತು. ಮನೆಗಳ ಗೋಡೆಗಳ ಮೇಲೆ, ಮಾವಿನ ಓಟೆಗಳಲ್ಲಿ ಚಿತ್ರಗಳನ್ನು ಬಿಡಿಸಿ ಹಿರಿಯರಿಂದ ಬೈಗುಳನ್ನು ಕೇಳಿದ್ದರು. ತರಗತಿ ಪುಸ್ತಕಗಳಲ್ಲಿ ನಾನಾ ಪಕ್ಷಿಗಳ, ಹೂಬಳ್ಳಿಗಳ ಮತ್ತು ಮನುಷ್ಯಾಕಾರ ವಕ್ರಚಿತ್ರಗಳೇ ಇಣಿಕಿ ಹಾಕಿದ್ದವು. ಹೈಸ್ಕೂಲ್ ವ್ಯಾಸಂಗ ಮುಗಿಸಿ ಕೆಲಸಕ್ಕೆ ಅರ್ಜಿ ಸಲ್ಲಿಸಿದರು. ಕಾದು ನೋಡಿದರು — ಯಾವ ನೌಕರಿಯೂ ದೊರಕಲಿಲ್ಲ. ಮನೆಯಲ್ಲಿಯೇ ಉತ್ತಮ ವೃತ್ತಿಯೊಂದನ್ನು ಇವರ ಹಿರಿಯರು ಒದಗಿಸಿಕೊಟ್ಟರು. ಮನೆಯ ದನಕರುಗಳನ್ನು ಮೇಯಿಸಿಕೊಂಡು ಬರುವ ಸೌಲಭ್ಯ ಇವರ ಪಾಲಿಗೆ ಕಾದಿತ್ತು. ಹಳ್ಳಿಯ ಇತರ ಗೆಳೆಯರೊಡನೆ ದನ ಕಾಯುವ ಕೆಲಸ, ಆಗ ಜೊತೆಯಲ್ಲಿ ಗಳಗನಾಥರ ಒಂದು ಕಾದಂಬರಿಯೂ ಇರುತ್ತಿತ್ತು. ಇವರ ಚೇತನವನ್ನು ಬಡಿದೆಬ್ಬಿಸಿದ ಪುಸ್ತಕ 'ಮರೆತು ಹೋದ ಸಾಮ್ರಾಜ್ಯ'. ಅದರ ಒಂದೊಂದು ಅಧ್ಯಾಯವೂ ಕಂಬನಿ ಮಿಡಿಸುವಂತೆ ಮನಸ್ಸನ್ನು ಸೂರೆಗೊಂಡವು. ಸಮೀಪದಲ್ಲೇ ಇದ್ದ

ಹಂಪೆಯನ್ನು ಪದೇ ಪದೇ ನೋಡಬೇಕೆಂಬ ಆಸೆ ವೃದ್ಧಿಸಿತು. ಒಂದು ಅಧ್ಯಾಯವನ್ನು ಮುಗಿಸಿ ಸ್ನೇಹಿತರಿಂದ ತಪ್ಪಿಸಿಕೊಂಡು ಹಂಪೆಗೆ ಹೋಗಿ ಅಲ್ಲಿನ ಚಾರಿತ್ರಿಕ ಅವಶೇಷಗಳನ್ನು, ಶಿಲ್ಪ ಕಲಾಕೃತಿಗಳನ್ನು ನೋಡಿ ಬರುತ್ತಿದ್ದರು.

ಒಮ್ಮೆ ಬೈರಾಗಿಗಳ ಒಂದು ತಂಡ ಹಂಪೆಗೆ ಬಂದಿತು. ಅಲ್ಲಿಯೇ ಅಡ್ಡಾಡುತ್ತಿದ್ದ ಗುರು ಅವರ ಬೆನ್ನುಹತ್ತಿದರು. ಆ ಬೈರಾಗಿಗಳು ಹಂಪೆಯ ಒಂದೊಂದು ಕಲಾಪೂರ್ಣವಾದ ನೆಲೆಗಳನ್ನು ನೋಡಿದಂತೆಲ್ಲಾ ಪ್ರಶಂಸೆಯ ಮಾತುಗಳನ್ನು ಆಡುತ್ತಿದ್ದುದೂ ಭಾರತದಲ್ಲಿ ಚಿತ್ರಕಲೆಗೂ ವಾಸ್ತುಶಿಲ್ಪಕ್ಕೂ ಪ್ರಸಿದ್ಧವಾದ ಸ್ಥಳಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದುದೂ ಗುರುರವರ ಕಲಾಭಿರುಚಿಯನ್ನು ಮತ್ತೂ ಮತ್ತೂ ವಿಕಾಸಗೊಳಿಸಿದುವು. ಹಂಪೆಗೆ ಹೋದ ಒಂದೊಂದು ಬಾರಿಯೂ ಒಂದೊಂದು ಬಗೆಯ ಭಾವನೆ ಇವರ ಮನಸ್ಸಿನಲ್ಲಿ ಮೂಡುತ್ತಿತ್ತು. ಮೊದಲೇ ಕಲೆಯ ಗೀಳು ಹತ್ತಿದ್ದ ಇವರು ಉತ್ತಮ ಕಲಾವಿದನಾಗಲು ಶ್ರಮಿಸಬೇಕೆಂದು ಅಲ್ಲಿ ನಿರ್ಧಾರವನ್ನು ಕೈಕೊಂಡರು. ಹೀಗೆ ಹಂಪೆಗೆ ತಪ್ಪಿಸಿಕೊಂಡು ಹೋಗಿ ಸಂಜೆ ಹಿಂತಿರುಗುತ್ತಿದ್ದ ಇವರು ಮನೆಯವರ ಆಕ್ರೋಶಕ್ಕೆ ಅನೇಕ ಬಾರಿ ಗುರಿಯಾದುದೂ ಉಂಟು. ಹುಡುಗನಲ್ಲಿ ಏನೋ ಚಪಲ ಇದೆಯೆಂದು ಅವರೂ ಸುಮ್ಮನಾಗಿದ್ದರು.

ಒಮ್ಮೆ ಹಳ್ಳಿಯ ಬಾಲಕ ಗುರು ಹೊಸಪೇಟೆಯ ಸಂತೆಗೆ ಹೋಗಿದ್ದರು. ಅಲ್ಲಿನ ಒಂದು ಫೋಟೋ ಸ್ಟುಡಿಯೋ ಮುಂದೆ ಹಾಯುವಾಗ ಅಲ್ಲಿದ್ದ ವರ್ಣಚಿತ್ರವೊಂದು ಇವರನ್ನು ಹಿಡಿದು ನಿಲ್ಲಿಸಿತು. ಅದರ ಆಕರ್ಷಣೆಗೆ ಒಳಗಾಗಿ ಇವರು ಫೋಟೋವಿನ ಹತ್ತಿರ ಹೋಗಿ ಬಹು ಸಂಕೋಚದಿಂದ ಅದನ್ನು ಸ್ಪರ್ಶಿಸಿದರು. ಇದನ್ನು ಕಂಡ ಮಾಲೀಕ ರೇಗಾಡಿ ಕೂಗಾಡಿದ. 'ನಾನೂ ಸಹ ಇಂಥ ಚಿತ್ರ ಬರೆಯಲಾರೆನೇ' ಎಂಬ ಕೆಚ್ಚು ಅವರ ಮನಸ್ಸಿನ ಮೇಲೆ ಮೂಡಿತು. ಆ ಘಟನೆ ಮಾತ್ರ ಅಚ್ಚಳಿಯದೆ ನಿಂತು ಎಚ್ಚರಿಸುತ್ತಿತ್ತು.

ಚಿತ್ರದ ಗೀಳು ದಿನದಿನಕ್ಕೆ ಹೆಚ್ಚಾಯಿತು. ಹೈಸ್ಕೂಲಿನಲ್ಲಿ ಡ್ರಾಯಿಂಗ್ ತರಗತಿಗಾದರೂ ಸೇರುವ ಚಪಲ. ಮನೆಯವರಿಗೆ ತಿಳಿಸದೆ ಚಿತ್ರದುರ್ಗಕ್ಕೆ ಬಂದರು. ಅಲ್ಲಿ ಯಾವ ಅನುಕೂಲವೂ ಒದಗದೆ ನೇರ ಬೆಂಗಳೂರಿನ ದಾರಿ ಹಿಡಿದರು. ಅಲ್ಲಿ ಶ್ರೀಮಹಾಂತ ಮಠದಲ್ಲಿ ಆಶ್ರಯ ಪಡೆದು ಬಸವನಗುಡಿ ಕಲಾಮಂದಿರಕ್ಕೆ ಸೇರಿದರು. ಒಂದು ವರ್ಷ ಹಾಗೂ ಹೀಗೂ ಬೆಂಗಳೂರಿನ ಜೀವನ ಕಳೆದು ಮೈಸೂರಿನ ಕಡೆ ಬಂದರು. ಈ ವೇಳೆಗಾಗಲೇ ತಕ್ಕಮಟ್ಟಿಗೆ ಚಿತ್ರಗಳನ್ನು ಬರೆಯಬಲ್ಲ ಯೋಗ್ಯತೆಯನ್ನು ಗಳಿಸಿಕೊಂಡಿದ್ದರು.

ಮೈಸೂರಿನ ಚಿಟ್ಟದಪುರದ ಹಾಸ್ಟಲಿನಲ್ಲಿ ಇವರಿಗೆ ಆಶ್ರಯ ದೊರೆಯಿತು. ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಚಿತ್ರಕಲಾಭ್ಯಾಸಕ್ಕೆ ಸೇರಿಕೊಂಡರು. ಕಲಾಶಾಲೆಯ ಶಿಕ್ಷಣದ ಜೊತೆಗೆ ಸ್ವತಃ ಅಭ್ಯಾಸವೂ ಸಾಗಿತ್ತು. ಪ್ರತಿನಿತ್ಯವೂ ವಿರಾಮ ದೊರೆತಾಗಲೆಲ್ಲಾ ದೊಡ್ಡಕೆರೆ ಮುಂತಾದ ಕಡೆಗಳಲ್ಲಿ ಹೋಗಿ ಹಸು, ಎಮ್ಮೆ ಇತ್ಯಾದಿಗಳನ್ನು ರೇಖೆಗಳಲ್ಲಿ ಬಿಡಿಸುವುದೂ, ಶನಿವಾರ, ಭಾನುವಾರಗಳಲ್ಲಿ ಮೈಸೂರಿನ ನೈಸರ್ಗಿಕ ದೃಶ್ಯಗಳನ್ನು ಆರಿಸಿಕೊಂಡು ಜಲವರ್ಣ ಚಿತ್ರಗಳನ್ನು ಬರೆದು ತರುವುದು—ಹೀಗೆ ಬರೆದು ತಂದವುಗಳನ್ನು ಕಲಾಶಿಕ್ಷಕರಿಗೆ ತೋರಿಸಿ ಸಲಹೆಗಳನ್ನು ಪಡೆಯುವುದೂ ಅವ್ಯಾಹತವಾಗಿ ನಡೆದು ಬಂತು. ಚಿತ್ರಕಲಾ ಶಿಕ್ಷಣದ ಜೊತೆಗೆ ಮಾಡಲಿಂಗ್ ಶಿಕ್ಷಣವನ್ನೂ ಮುಗಿಸಿಕೊಂಡು ಶಾಲೆಯಿಂದ ಹೊರಬಂದರು.

ಈ ಸಂದರ್ಭದಲ್ಲಿ ಇವರ ಪಾಲಿಗೆ ಕಷ್ಟಪರಂಪರೆಗಳು ಕಾದಿದ್ದುವು. ಜೀವನದ ಹೋರಾಟ ಕಟುತರವಾಯಿತು. ಎಂಥ ವಿಷಮ ಸನ್ನಿವೇಶ ಒದಗಿ ಬಂದರೂ ಎದೆಗುಂದದೆ ಕಲಾಸೇವೆಯನ್ನು ಮುಂದುವರಿಸಿಕೊಂಡೇ ಬಂದರು. ಅನೇಕ ಲೇಖಕರ ಪರಿಚಯ ಇವರಿಗಾಯಿತು.

ಅನೇಕ ಪುಸ್ತಕಗಳಿಗೆ ರೇಖಾಚಿತ್ರಗಳನ್ನು ಒದಗಿಸುವ ಸೌಲಭ್ಯ ಇವರಿಗೆ ಉಂಟಾಯಿತು. ಇದರಿಂದಾಗಿ ಗುರು ಅವರ ಹೆಸರು ಅಲ್ಲಲ್ಲಿ ಕೇಳಿಬಂದಿತು. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣ ಶಾಖೆಯ ಕಲಾವಿದರಾದರು. ಅಲ್ಲಿಂದೀಚೆಗೆ ಗುರು ಅವರು ಸಮಿತಿಯ ಪ್ರಕಟಣೆಗಳನ್ನೆಲ್ಲಾ ತಮ್ಮ ಕಲಾಕೃತಿಗಳಿಂದ ಅಲಂಕರಿಸುತ್ತ ಬಂದರು. ಕುವೆಂಪು ಅವರ 'ಜನಪ್ರಿಯ ರಾಮಾಯಣ' ಮತ್ತು 'ಮೋಡಣ್ಣನ ತಮ್ಮ' ಈ ಕೃತಿಗಳಲ್ಲಿ ಗುರು ಅವರ ವಿಶಿಷ್ಟ ಬಗೆಯ ಚಿತ್ರಗಳನ್ನು ನಾವು ಕಾಣುತ್ತೇವೆ. ಇಷ್ಟೇ ಅಲ್ಲದೆ ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಿಂದ ಹೈಸ್ಕೂಲ್ ತರಗತಿಗಳವರೆಗಿನ ಕನ್ನಡ ಇಂಗ್ಲಿಷ್ ಹಾಗೂ ಹಿಂದಿ ಮುಂತಾದ ಭಾಷೆಗಳಲ್ಲಿನ ಎಲ್ಲ ಪಠ್ಯಪುಸ್ತಕಗಳಲ್ಲಿ ಇರುವ ವೈವಿಧ್ಯಪೂರ್ಣವಾದ ರೇಖಾಚಿತ್ರಗಳಿಂದಾಗಿ ಗುರು ಅವರ ಹೆಸರು ರಾಜ್ಯದಲ್ಲಿ ಮನೆಮಾತಾಗಿದೆ.

ಗುರು ಅವರು ರೇಖಾಚಿತ್ರಗಳನ್ನೇ ಹೆಚ್ಚಾಗಿ ಬರೆದಿದ್ದರೂ ಅನೇಕ ವರ್ಣಚಿತ್ರಗಳನ್ನೂ ರಚಿಸಿದ್ದಾರೆ. ಕಾಲ್ಪನಿಕ ಚಿತ್ರದಲ್ಲೂ ನಿಪುಣರು. ಇವರ ಚಿತ್ರಗಳಲ್ಲಿ ಇವರ ಕಲ್ಪನಾಶಕ್ತಿಯೂ, ರೇಖಾ ವೈಖರಿಯೂ, ಮನಮೆಚ್ಚುವಂತಿವೆ. ಗ್ರಾಮೀಣ ಪ್ರಕೃತಿ ಸನ್ನಿವೇಶಗಳನ್ನಂತೂ ಮನೋಹರವಾಗಿ ಬಿಡಿಸುತ್ತಾರೆ. ರೇಖಾಚಿತ್ರಗಳಲ್ಲಿ ಶೀಘ್ರರೇಖಾಚಿತ್ರಗಳ ಅನೇಕ ಸಂಪುಟಗಳೇ ಇವರಲ್ಲಿವೆ. ಅವುಗಳ ಹಾಳೆಗಳನ್ನು ತಿರುವಿ ಹಾಕಿದರೆ ಅನೇಕ ಬಗೆಯ ಸಾಮಾಜಿಕ ಜೀವನದ ಭಾವಭಂಗಿಗಳನ್ನು, ವ್ಯಕ್ತಿವಿನ್ಯಾಸಗಳನ್ನು ನೋಡಬಹುದು. ಈ ಬಗೆಯ ಚಿತ್ರಗಳಲ್ಲಿ ನಾವು ಕಾಣುವ ಒಂದು ವಿಶೇಷವೆಂದರೆ ಶೀಘ್ರತೆ. ಬಹು ಸೂಕ್ಷ್ಮವಾದ ಗೆರೆಗಳಲ್ಲಿ ಅಂಗಾಂಗ ವಿನ್ಯಾಸಗಳನ್ನು ಅರೆಕೊರೆ ಇಲ್ಲದೆ ಸುಲಭವಾಗಿ ರಚಿಸುವ ಕೌಶಲ ಗುರು ಅವರಿಗೆ ಕೈವಶವಾಗಿದೆ. ಗುರು ಅವರು ಐವತ್ತೈದು ವರ್ಷಗಳ ಗಡಿಯನ್ನು ದಾಟುತ್ತಿದ್ದಾರೆ. ತಾವಿನ್ನೂ ಕಲಾವಿದ್ಯಾರ್ಥಿ ಎಂದೂ ತಾವು ಸಾಧಿಸಬೇಕಾದುದು ಬಹಳ ಇದೆಯೆಂದೂ ಇದಕ್ಕಾಗಿ ಹಂಪೆಯ ನೆಲೆಯೇ ಅತ್ಯುತ್ತಮವೆಂದೂ ಗುರುರವರು ಆಗಾಗ ಹೇಳುತ್ತಲೇ ಇರುತ್ತಾರೆ. ಇದು ಅವರ ಸೌಜನ್ಯವನ್ನು, ಕಲೆಯ ಬಗ್ಗೆ ಅವರಿಗಿರುವ ಶ್ರದ್ಧೆಯನ್ನು ವ್ಯಕ್ತಪಡಿಸುತ್ತದೆ. ಇನ್ನೂ ಸಾಧಕನಂತೆ ಇವರು ಸತತವಾಗಿ ಕಲಾರಾಧನೆಯಲ್ಲೇ ತೊಡಗಿದ್ದಾರೆ. ಜೊತೆಜೊತೆಯಲ್ಲೇ ಪುರಾಣ ಪುಣ್ಯಕಥೆಗಳನ್ನು ವ್ಯಾಸಂಗ ಮಾಡುವ ಸದಭಿರುಚಿಯನ್ನು ಬೆಳಸಿಕೊಂಡು ಬಂದಿದ್ದಾರೆ. ತುಂಬ ಉತ್ಸಾಹಿಗಳೂ ಬಿಚ್ಚು ಹೃದಯಿಗಳೂ ಆದ ಇವರು ಸದಾ ಹಸನ್ಮುಖಿಗಳಾಗೇ ಇರುತ್ತಾರೆ.

ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿದ್ದಾಗಲೇ ಮೈಸೂರಿನ ಓರಿಯೆಂಟೇಷನ್ ಸೆಂಟರ್‌ನಲ್ಲಿ ಇವರಿಗೆ ಉತ್ತಮ ಕಲಾವಿಭಾಗದ ಹುದ್ದೆಯೊಂದು ದೊರೆತುದು ಇವರ ಕಲಾಸೇವೆಗೆ ಉತ್ತಮ ನಿದರ್ಶನ. ಇಲ್ಲಿ ಹದಿನೈದು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಆ ಸಂಸ್ಥೆಗೆ ಕೀರ್ತಿತಂದಿದ್ದಾರೆ. ಬಹುಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

ಗುರುವನ್ನು ಸಂಜೆಯ ಸಮಯದಲ್ಲಿ ನೋಡಬೇಕು. ತೂಗುಚೀಲ ಒಂದನ್ನು ಹೆಗಲಿಗೆ ಹಾಕಿಕೊಂಡು ಕಂಕುಳಲ್ಲಿ ಸ್ಕೆಚ್ ಪುಸ್ತಕವನ್ನು ಸಿಕ್ಕಿಸಿಕೊಂಡು ಕೈಬೀಸಿಕೊಂಡು ಸಿಪಾಯಿಯಂತೆ ಹೊರಡುತ್ತಾರೆ. ಒಂದು ನಿಮಿಷವನ್ನೂ ವ್ಯರ್ಥವಾಗಿ ವ್ಯಯ ಮಾಡುವವರಲ್ಲ. ನಾಲ್ಕು ಜನ್ಮಗಳಾದರೂ ಕಲಾಸಾಧನೆಗೆ ಸಾಲದೆಂಬಷ್ಟು ಇವರ ಉತ್ಸಾಹ. ಇವರ ಈ ಉತ್ಸಾಹ ಶ್ರದ್ಧಾಸಕ್ತಿಗಳು ಇವರಿಂದ ಇನ್ನೂ ಉತ್ತಮ ಕಲಾಕೃತಿಗಳನ್ನು ನೀಡುವಂತೆ ಮಾಡಲಿ.

೨. ಎನ್. ಜಿ. ಪಾವಂಜೆ

ಕಲಾವಿದ ಶ್ರೀ ಪಾವಂಜೆಯವರ ವ್ಯಕ್ತಿತ್ವವು ಕನ್ನಡನಾಡಿನ ಎಲ್ಲ ಕಲಾವಿದರ ಮತ್ತು ಕಲಾಭಿಮಾನಿಗಳ ಹೃದಯದಲ್ಲಿ ಮನೆಮಾಡಿರುವುದರಲ್ಲಿ ಅಚ್ಚರಿ ಏನೂ ಇಲ್ಲ. ಶ್ರೀ ಪಾವಂಜೆಯವರು ಕನ್ನಡ ನಾಡಿನ ವರಪುತ್ರರು. ಕಲಾಗುರುವಾಗಿ ಅನೇಕ ಕಲಾವಿದರಿಗೆ ಚೈತನ್ಯವನ್ನು ತುಂಬಿದ ಪುಣ್ಯಶಾಲಿಗಳಿವರು. ಕಲೆಯ ಆಳವಾದ ಪಾಂಡಿತ್ಯವಿಲ್ಲದೆ ಕೇವಲ ಸೋಗಿನಲ್ಲಿ ರಾಜಕೀಯ ನವೆಸಿ ಬೆಳಕಿಗೆ ಬಂದು ಸರ್ಕಾರದ ಮಾನ್ಯತೆಯನ್ನು ಪಡೆಯುವ ದೌರ್ಭಾಗ್ಯ ಇವರ ಪಾಲಿಗೆ ಬರದಿದ್ದುದು ನಮ್ಮ ಪುಣ್ಯ. ಕೀರ್ತಿದಾಹ ಇವರಲ್ಲಿ ಲವಲೇಶವೂ ಇರಲಿಲ್ಲ.

ಉಡುಪಿ ಮಹಾಕ್ಷೇತ್ರದ ಬಳಿಯ ಪಾವಂಜೆ ಗ್ರಾಮದವರಾದ ಶ್ರೀ ನರಹರಿರಾವ್ ಗೋಪಾಲಕೃಷ್ಣ ಪಾವಂಜೆಯವರು ಮೊದಲು ಬೊಂಬಾಯಿಯ ಜೆ. ಜೆ. ಕಲಾಶಾಲೆಯಲ್ಲಿ ಕಲಾಭ್ಯಾಸ ನಡೆಸಿದರು. ಚಿತ್ರಕಲೆಯಲ್ಲಿ ಪರಿಶ್ರಮ ಪಡೆದುಬರಲು ಜರ್ಮನಿಗೆ ತೆರಳಿದರು. ಅಲ್ಲಿ 'ಕಲರ್ ಲಿಥೋಗ್ರಫಿ'ಯ ವಿಶೇಷ ಶಿಕ್ಷಣ ಪಡೆದುಕೊಂಡರು. ಆಗ ಅಲ್ಲಿ ಇವರ ಜೊತೆಯಲ್ಲಿದ್ದ ಆಪ್ತಮಿತ್ರರಲ್ಲಿ ಕೇಂದ್ರದ ಉಪರಾಷ್ಟ್ರಾಧ್ಯಕ್ಷ ಜನಾಬ್ ಜಕೀರ್ ಹುಸೇನರೂ ಒಬ್ಬರು. ಜನಾಬರು ಬೆಂಗಳೂರಿಗೆ ಭೇಟಿಕೊಟ್ಟಾಗಲೆಲ್ಲಾ ಶ್ರೀ ಪಾವಂಜೆಯವರ ಗೃಹಕ್ಕೆ ಭೇಟಿ ಕೊಡುವುದನ್ನು ಮಾತ್ರ ಎಂದೂ ಮರೆತವರಲ್ಲ. ಅವರ ಸ್ನೇಹಪರತೆ ಅಷ್ಟು ಅಪ್ಪಟವಾದುದು.

ಜರ್ಮನಿಯಲ್ಲಿದ್ದ ಏಳು ವರ್ಷಗಳ ಅವಧಿಯಲ್ಲಿ ಇವರು ತೈಲ ಹಾಗೂ ಜಲವರ್ಣಗಳ ಚಿತ್ರರಚನೆಯಲ್ಲಿ ಹೆಚ್ಚಿನ ಪರಿಶ್ರಮವನ್ನು ಗಳಿಸಿಕೊಂಡರು. ಪಾಶ್ಚಿಮಾತ್ಯ ಕಲಾಸಂಪ್ರದಾಯವನ್ನು ಜೀರ್ಣಿಸಿಕೊಂಡು ಪ್ರಾವೀಣ್ಯತೆಯನ್ನು ಸಾಧಿಸಿಕೊಂಡರು. ವಿಖ್ಯಾತಚಿತ್ರಕಾರರಾದ ರೆಂಬ್ರಾಂಟ್, ಟಿಟಿಯನ್ ಮುಂತಾದವರ ಕೃತಿಗಳನ್ನು ಸ್ವಾಭಾವಿಕ ವರ್ಣಗಳಲ್ಲಿ ನಕಲುಮಾಡಿದರು. ಹೀಗೆ ನಕಲುಮಾಡುವಾಗ ಮೂಲಕೃತಿರಚನಾಕಲಾವಿದರ ಸಿದ್ಧಿಯನ್ನೇ ಪಡೆದಿರಬೇಕಾಗುತ್ತದೆ. ಶ್ರೀ ಪಾವಂಜೆಯವರಿಗೆ ದೊರೆತಿರುವ ಸಿದ್ಧಿ ಮತ್ತಾರ ಪಾಲಿಗೂ ದೊರೆಯಲಾರದು. ಪ್ರಕೃತಿಯ ಯಾವುದೇ ವರ್ಣಗಳನ್ನು ಜೀವಂತವಾಗಿ ಮೂಡಿಸುವ ಕುಂಚಕೌಶಲ ಶ್ರೀ ಪಾವಂಜೆಯವರದು. ಇದು ಅವರ ದೈವದತ್ತವಾದ ಶಕ್ತಿ. ಹಾಗೆ ನಕಲುಮಾಡಿದಂಥ ಇವರ 'ಹ್ಯಾಮ್ಲೆಟ್' ತೈಲಕೃತಿಯನ್ನು ನಾನು 1945ರಲ್ಲಿ ನೋಡಿದ್ದೆ. ಅದನ್ನು ಶ್ರೀರಂಗಪಟ್ಟಣದ ಸ್ಕಾಟ್ ಬಂಗಲೋ ಚಿತ್ರಸಂಗ್ರಹಾಲಯದಲ್ಲಿ ಇರಿಸಲಾಗಿದ್ದಿತು. ಇದು ಈಗ ಜಗನ್ಮೋಹನ ಚಿತ್ರಶಾಲೆಯಲ್ಲಿದೆ. ಇವರ ಕಲೆಯ ಮಟ್ಟವನ್ನು ಅಳೆಯಲು ಇದೊಂದು ಕೃತಿ ಸಾಕೆನಿಸುತ್ತದೆ.

1922ರಲ್ಲಿ ಜರ್ಮನಿಯಿಂದ ಬಂದ ಇವರು ಮೊದಲು ಬೆಂಗಳೂರಿನಲ್ಲಿ ನೆಲಸಿದರು. ಅಮೆಚ್ಯೂರ್‌ನಾಟ್ಯರಂಗ ಇವರನ್ನು ಆಕರ್ಷಿಸಿತು. ಇಲ್ಲಿ ತಮ್ಮ ಕಲಾರಾಧನೆಯನ್ನು ವ್ಯಾಪಕಗೊಳಿಸಲು ಆರಂಭಿಸಿದರು. ಅಪೂರ್ವ ಕಲಾಪ್ರೇಮಿಗಳೆನಿಸಿದ್ದ ಶ್ರೀ ಎಸ್. ಜಿ. ಶಾಸ್ತ್ರಿಗಳವರು ಶ್ರೀ ಪಾವಂಜೆಯವರ ಕಲಾಪ್ರತಿಭೆಯನ್ನು ಮೆಚ್ಚಿ ಅವರ ಹಿರಿಮೆಯನ್ನು ಕನ್ನಡರಾಜ್ಯಕ್ಕೆ ಪರಿಚಯಮಾಡಿಕೊಟ್ಟರು.

ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಉಪ ಮುಖ್ಯಾಧಿಕಾರಿಗಳಾಗಿ ಕ್ರಮೇಣ ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ಕೆಲವು ವರ್ಷಗಳ ಕಾಲ ದಸರಾ ವಸ್ತುಪ್ರದರ್ಶನದ ಕಾರ್ಯದರ್ಶಿಗಳಾಗಿದ್ದು ಈ ಪ್ರದರ್ಶನದ ಖ್ಯಾತಿಗೆ ಕಾರಣರಾದರು. ಚಾಮರಾಜೇಂದ್ರ

ಕಲಾಶಾಲೆಯ ಗೌರವ, ಘನತೆ ಹೊರಪ್ರಾಂತಗಳಿಗೂ ಪ್ರಸರಿಸಲು ಕಾರಣರಾದರು. ಮೈಸೂರಿಗೆ ಒಮ್ಮೆ ವೈಸ್‌ರಾಯ್ ಲಾರ್ಡ್ ಇರ್ವಿನ್ನರು ಬಂದಿದ್ದರು. ಆಗ ಶ್ರೀ ಪಾವಂಜೆಯವರ ಎರಡು ನಿಸರ್ಗ ಚಿತ್ರಗಳನ್ನು ಅಂದಿನ ಸರ್ಕಾರ ಅವರಿಗೆ ಕಾಣಿಕೆಯಾಗಿ ಅರ್ಪಿಸಿತು.

1945ರ ಸಮಯ. ನಾನು ಚಾಮರಾಜ ಕಲಾಶಾಲೆಯ ವಿದ್ಯಾರ್ಥಿಯಾಗಿದ್ದೆ; ಅಲ್ಲೇ ಶ್ರೀ ಪಾವಂಜೆಯವರನ್ನು ಮೊದಲಬಾರಿಗೆ ಕಂಡದ್ದು. ಆಗ ಅವರ ಬಳಿ ಸುಳಿಯುವುದೇ ಒಂದು ಬಗೆಯ ಅಂಜಿಕೆ, ದಿಗಿಲು. ಆದರೆ ಅವರ ಎತ್ತರವಾದ ದೇಹಾಕೃತಿ ನೇರವಾದ ಸೂಕ್ಷ್ಮವಾದ ದೃಷ್ಟಿ ಎಂತಹವರನ್ನೂ ಆಕರ್ಷಿಸುತ್ತಿತ್ತು. ಗಂಭೀರ ಮುಖಮುದ್ರೆ ಅವರದು. ಅವರು ವಿವೇಕದ ಕಟ್ಟುನಿಟ್ಟಿನ ಜೀವನಕ್ಕೆ ನಿದರ್ಶನಪ್ರಾಯರಾಗಿದ್ದರು. ಸುಳ್ಳು ಎಂಬುದು ಅವರ ಬಳಿ ಸುಳಿಯುವಂತಿರಲಿಲ್ಲ. ಕಾಯಕವೇ ಕೈಲಾಸವೆಂಬುದನ್ನು ಅನುಷ್ಠಾನಕ್ಕೆ ತಂದು ತಮ್ಮ ಬದುಕಿನಲ್ಲೂ ತೋರಿದರು.

ಕಲಾವಿದರ ಬಗ್ಗೆ ಇವರ ಆತ್ಮೀಯತೆ ಮಮತೆ ಅಪರೂಪವಾದದ್ದು. ಒಮ್ಮೆ ಶ್ರೀ ಪಾವಂಜೆಯವರು ಮೈಸೂರಿನ ರಾಮು ಸ್ಟುಡಿಯೋವಿನಲ್ಲಿ ಕಲಾ ವಿಷಯವಾಗಿ ಮಾತನಾಡುತ್ತ "ಓ ಆ ಸ್ವಾಮಿ ಏನುಮಾಡುತ್ತಿದ್ದಾರೆ?" ಎಂದು ನನ್ನನ್ನು ವಿಚಾರಿಸಿ "ಕನ್ನಡನಾಡಿನಲ್ಲೇ ಏಕೆ, ಇಡೀ ಭಾರತದಲ್ಲೇ ಆ ಮಟ್ಟದ ಕಲಾವಿದರು ತುಂಬಾ ವಿರಳ; ಈ ಮಾತನ್ನು ಕಲಾವಿದನಾದ ನಾನು ಅಭಿಮಾನದಿಂದ ಹೃದಯಪೂರ್ವಕವಾಗಿ ನುಡಿಯುತ್ತಿದ್ದೇನೆ" ಎಂದು ಶ್ರೀ ಎಸ್. ನಂಜುಂಡಸ್ವಾಮಿಗಳ ಕಲಾಪ್ರಾಢಿಮೆಯನ್ನು ಮನಸಾರೆ ಕೊಂಡಾಡಿದ್ದರು. ಶ್ರೀ ಸ್ವಾಮಿಗಳೂ ಅಷ್ಟೇ ಗೌರವದಿಂದ ಇವರನ್ನು ಕಾಣುತ್ತಿದ್ದರು. "ನನ್ನ ನಿಸರ್ಗ ಕೃತಿಗಳಿಗೆ ಶ್ರೀ ಪಾವಂಜೆಯವರ ಸ್ಫೂರ್ತಿಯನ್ನು ಎಂದೂ ಮರೆಯಲಾರೆ" ಎಂದು ಶ್ರೀ ನಂಜುಂಡಸ್ವಾಮಿಗಳು ಹೇಳುತ್ತಿದ್ದುದು ಸಹಜವೇ ಆಗಿತ್ತು.

ಒಂದು ಮಾರ್ಗ ದೊರೆತರೆ ಎಲ್ಲೋ ಮರೆಯಲ್ಲಿ ಇದ್ದುಕೊಂಡು ಕಲಾಸೇವೆಯನ್ನು ನಡೆಸಬೇಕೆನ್ನುವ ಹಂಬಲ ಇವರದಾಗಿತ್ತು. ಈ ನಿವೃತ್ತ ಪ್ರತಿಭಾವಂತ ಕಲಾಶಿಕ್ಷಕರ ಕಡೆ ನಾಡು ಕಣ್ಣು ತೆರೆಯಲಿಲ್ಲ. ಬೆಂಗಳೂರಿಗೆ ಬಂದಮೇಲೆ ಈ ಕಲಾಯೋಗಿಗೆ "ಗಣೇಶಬೀಡಿ" ಏಜೆಂಟರಾಗಿ ಜೀವನ ಹೊರೆಯುವ ಸ್ಥಿತಿ ಬರಬಾರದಿತ್ತು; ಇಂತಹ ಹೆಮ್ಮೆಯ ಕಲಾವಿದರ ಕಲಾಪ್ರತಿಭೆ ತೆರೆಮರೆಯಲ್ಲಿಯೇ ಬತ್ತಿಹೋಗುವ ಸ್ಥಿತಿಯನ್ನು ಕಂಡ ನಮ್ಮ ಅಭಿಮಾನ ಶೂನ್ಯತೆಗೆ ನಾಚಿ ತಲೆತಗ್ಗಿಸಬೇಕಾಗಿದೆ.

ಮೈಸೂರು ಚಿತ್ರಕಲಾ ಪರಿಷತ್ತಿನವರು ಶ್ರೀಯುತರನ್ನು ಗೌರವಿಸಿದ್ದು ಒಂದು ಸಮಾಧಾನದ ಸಂಗತಿ. ಅನಾರೋಗ್ಯ ನಿಮಿತ್ತ ಶ್ರೀ ಪಾವಂಜೆಯವರು ಬರಲಾಗಲಿಲ್ಲ. ಸಮಾರಂಭಕ್ಕೆ ಅವರ ಪರ ಅವರ ಪುತ್ರಿಯವರೇ ಬಂದು ತಮ್ಮ ತಂದೆಯವರ ವ್ಯಕ್ತಿತ್ವವನ್ನು ಬಣ್ಣಿಸಿದ ಸನ್ನಿವೇಶವಂತೂ ಹೃದಯಸ್ಪರ್ಶಿಯಾಗಿತ್ತು. ಶ್ರೀ ಪಾವಂಜೆಯವರು ನಮ್ಮನ್ನಗಲುವ ಒಂದು ದಿನದ ಮುಂಚೆ 1965ರ ಸೆಪ್ಟಂಬರ್ 3ರಂದು ನಮಗೆ ಶ್ರೀಯುತರ ದರ್ಶನಲಾಭ ಕೊನೆಯ ಬಾರಿಗೆ ದೊರೆತ್ತಿತ್ತು.

ನಿತ್ರಾಣದಿಂದ ನರಳುತ್ತಿದ್ದರೂ ಅವರು ನಮ್ಮನ್ನು ಕಣ್ಣುತುಂಬಿ ನೋಡಿದರು. ಅವರ ತುಟಿಗಳು ಏನನ್ನೋ ನುಡಿದು ಹರಸುವಂತಿತ್ತು. ಅದನ್ನು ಕಂಡ ನಮ್ಮ ಕಣ್ಣುಗಳು ಮಂಜಾದುವು. ಮತ್ತೆ ಇಂಥ ಕಲಾಯೋಗಿಯನ್ನು ಪಡೆಯಲಾದೀತೇ ?

ಚಿತ್ರಕಲೆಯಲ್ಲಿ ಎರಡು ವಿಧ—ವರ್ಣಚಿತ್ರ ಮತ್ತು ರೇಖಾಚಿತ್ರ ಎಂದು. ವರ್ಣಚಿತ್ರದ ತಂತ್ರ ನಿರೂಪಣೆಗೆ ಉಪಯೋಗಿಸುವ ಆಧಾರತಲ (ಗ್ರೌಂಡ್] ಬಣ್ಣ ಮತ್ತು ಉಪಕರಣಗಳಿಗೆ ಅನುಸಾರವಾಗಿರುತ್ತದೆ. ಆಧಾರತಲವಾಗಿ ಗೋಡೆ, ಹಲಗೆ, ಕಾಗದ ಅಥವಾ ಬಟ್ಟೆ ಹಿಂದಿನಿಂದಲೂ ಬಳಕೆಯಲ್ಲಿವೆ. ನಶಿಸದೆ ಉಳಿಯಬಹುದಾದ ಯಾವ ಘನಪದಾರ್ಥವನ್ನಾದರೂ ಉಪಯೋಗಿಸುವ ಹವ್ಯಾಸ ಈಚೆಗೆ ಬೆಳೆಯುತ್ತಿದೆ. ಬಣ್ಣಗಳಲ್ಲಿ ಹಿಂದೆ ಪ್ರಾಕೃತಿಕ ಖನಿಜ ಅಥವಾ ಸಸ್ಯಮೂಲ ಬಣ್ಣಗಳಷ್ಟೇ ಉಪಯೋಗವಲ್ಲಿದ್ದುವು. ಈಗ ಅನೇಕ ರೀತಿಯ ರಾಸಾಯನಿಕ ಬಣ್ಣಗಳು ಹೆಚ್ಚು ಬಳಕೆಯಲ್ಲಿವೆ. ಬಣ್ಣವನ್ನು ಬಂಧಿಸಲು ಒಂದು ಅಂಟೂ ಬೇಕು........

ವರ್ಣಚಿತ್ರಗಳಿಗೆ ಹೋಲಿಸಿದರೆ ರೇಖಾ ಚಿತ್ರದ ತಂತ್ರ ಬಹು ಸುಲಭವಾದುದು. ಆದರೆ ಅದು ಎಲ್ಲ ವಿಧಾನಗಳಿಗೂ ಮೂಲಭೂತವಾದುದು. ರೇಖಾ ಚಿತ್ರಣದಲ್ಲಿ ಮುಖ್ಯವಾಗಿ ಎರಡು ವಿಧ. ಬರಹ (ಡ್ರಾಯಿಂಗ್) ಮತ್ತು ಕೊರೆತ (ಎನ್‌ಗ್ರೇವಿಂಗ್). ಯಾವುದೇ ಗಟ್ಟಿ ಪದಾರ್ಥದ ಆಧಾರತಲದ ಮೇಲೆ ಅದಕ್ಕಿಂತ ಹಗುರವಾದ ಪದಾರ್ಥದಿಂದ ಆಧಾರತಲ ಬಾಧಿತವಾಗದಂತೆ ರೂಪಿಸುವುದೇ ಬರಹ ವಿಧಾನ. ಆಧಾರತಲವಾಗಿ ಕಲ್ಲು, ಮಣ್ಣು, ಮರದ ಫಲಕಗಳನ್ನಾಗಲೀ, ಕಾಗದ, ಬಟ್ಟೆಗಳನ್ನಾಗಲೀ ಉಪಯೋಗಿಸಬಹುದು. ಬರಹಕ್ಕೆ ಸೀಸದ ಕಡ್ಡಿ, ಲೇಖನಿ, ಸೀಮೆ ಸುಣ್ಣ, ಇದ್ದಲು, ಅಥವಾ ಬಣ್ಣವನ್ನು ಉಪಯೋಗಿಸಬಹುದು. ಕೊರೆತ ವಿಧಾನದಲ್ಲಿ ಆಧಾತಲಕ್ಕಿಂತ ಗಟ್ಟಿಯಾದ ಉಪಕರಣದಿಂದ ಆಧಾರತಲವನ್ನೇ ಕೊರೆದು ಗೆರೆಗಳನ್ನು ಮೂಡಿಸಲಾಗುತ್ತದೆ.

ಕನ್ನಡ ವಿಶ್ವಕೋಶ, ಸಂಪುಟ ೩, ಪು. ೨೫೨

ವಿ. ಎನ್. ಶೇಷಗಿರಿರಾವ್
ಅನಂತರಾಮು

ವಿಶಿಷ್ಟಾದ್ವೈತ ಮತ್ತು ಶಕ್ತಿ ವಿಶಿಷ್ಟಾದ್ವೈತ*

೧

ತತ್ತ್ವಶಾಸ್ತ್ರ ಬಹಳ ಪುರಾತನವಾದುದು ; ಅದು ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ತನ್ನ ಸುತ್ತಮುತ್ತ ಆವರಿಸಿರುವ ನಿಗೂಢವಿಶ್ವವನ್ನು ನೋಡಿ ಮಾನವ ಚಕಿತನಾಗಿದ್ದಾನೆ. ಈ ವಿಶ್ವಕ್ಕೆ ಒಂದು ಮೂಲವಿರಬೇಕು. ಹಾಗಾದರೆ ಆ ಮೂಲ ಯಾವುದು ? ಎಂಬ ಮೂಲಭೂತ ಪ್ರಶ್ನೆಯನ್ನು ಕುರಿತು ಅವನಿಗಿರುವ ತಾತ್ತ್ವಿಕ ಜಿಜ್ಞಾಸೆ ಸಹಜವಾದುದು. ಬಾಹ್ಯ ವಿಶ್ವದ ಮಾತು ಹೀಗಾದರೆ ಇನ್ನು ಆ ಚೌಕಟ್ಟಿನಲ್ಲಿ ಸುಖಭೋಗ ದುಃಖಾದಿಗಳನ್ನು ಅನುಭವಿಸಿ, ಸಂಸಾರದ ಜಂಜಾಟದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ 'ನಾನು' ಯಾರು ? 'ನಾನು' ಎಲ್ಲಿಂದ ಬಂದೆ ? 'ನನ್ನ' ಗುರಿ ಯಾವುದು ? ಅದರ ಮಾರ್ಗವೇನು ? ಮುಂತಾದ ಆಂತರಿಕ ರೂಢಮೂಲ ಸಮಸ್ಯೆ, ಸಂದೇಹಗಳಿಗೆ ಮಾನವ ಉತ್ತರಗಳನ್ನು ಕಂಡು ಹಿಡಿಯಲು ತತ್ತ್ವಶಾಸ್ತ್ರದ ಮೊರೆ ಹೊಕ್ಕಿದ್ದಾನೆ. ಈ ಸಮಸ್ಯೆ ಸಂದೇಹಗಳನ್ನು ಉತ್ತರಿಸಲು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಜೈನ, ಬೌದ್ಧ ದರ್ಶನಗಳೂ, ಪೂರ್ವ ಮೀಮಾಂಸ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ದ್ವೈತಾದ್ವೈತ, ಶಕ್ತಿವಿಶಿಷ್ಟಾದ್ವೈತ, ಶುದ್ಧಅದ್ವೈತ ಮುಂತಾದ ಪ್ರಮುಖ ಸಿದ್ಧಾಂತಗಳೂ ಭಾರತದಲ್ಲಿ ಪ್ರಯತ್ನಪಟ್ಟಿವೆ.

೨

ವಿಶಿಷ್ಟಾದ್ವೈತ ದರ್ಶನದ ಪ್ರಧಾನ ಆಚಾರ್ಯರು ರಾಮಾನುಜರು. ವಿಶಿಷ್ಟಾದ್ವೈತ ದರ್ಶನವನ್ನು 'ಉಭಯ ವೇದಾಂತ' ಎಂದೂ ಕರೆಯುತ್ತಾರೆ. ಏಕೆಂದರೆ ಈ ದರ್ಶನದ ಮೂಲಾಂಶಗಳಿಗೆ ಆಧಾರವಾಗಿ ಎರಡು ಮೂಲಗಳನ್ನು ರಾಮಾನುಜರು ಉಪಯೋಗಿಸಿಕೊಂಡಿದ್ದಾರೆ. ಒಂದು, ಸಂಸ್ಕೃತ ಮೂಲವಾದ 'ಪ್ರಸ್ಥಾನ ತ್ರಯ': ಮತ್ತೊಂದು ಭಗವದ್ಭಕ್ತರಾದ ಆಳ್ವಾರರುಗಳ ಭಗವದ್‌ಉನ್ಮಾದದ ಉಪದೇಶಾಮೃತ. ಆಳ್ವಾರರ ಈ ದಿವ್ಯೋಪದೇಶಗಳು ತಮಿಳು ಭಾಷೆಯಲ್ಲಿವೆ.

ಶಕ್ತಿ ವಿಶಿಷ್ಟಾದ್ವೈತ ದರ್ಶನದಲ್ಲೂ ಎರಡು ವಿಧದ ಆಧಾರಗಳಿಗೆ ಮಾನ್ಯತೆ ನೀಡಲಾಗಿದೆ.

---

* ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಉಪಯುಕ್ತ ಸಲಹೆಗಳನ್ನಿತ್ತು ಉಪಕರಿಸಿದ ಗುರುಗಳಾದ ಪ್ರೊ॥ ಎಸ್. ಎಸ್. ರಾಘವಾಚಾರ್ಯರಿಗೆ ನಮ್ಮ ಕೃತಜ್ಞತೆಗಳು.

ಶಕ್ತಿವಿಶಿಷ್ಟಾದ್ವೈತಕ್ಕೆ ಶ್ರೀಪತಿಪಂಡಿತರು ಬಾದರಾಯಣರ ಬ್ರಹ್ಮಸೂತ್ರಗಳನ್ನು ಕುರಿತು ಬರೆದಿರುವ ಶ್ರೀಕರ ಭಾಷ್ಯವು ಒಂದು ಆಧಾರ. ಇದಲ್ಲದೆ, ಇದಕ್ಕಿಂತ ಪುರಾತನವಾದ ಶ್ರೀ ಶಿವಯೋಗಿ ಶಿವಾಚಾರ್ಯರ 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥದಲ್ಲಿ, ಶಕ್ತಿವಿಶಿಷ್ಟಾದ್ವೈತ ದರ್ಶನದ ಮೂಲ ಅಂಶಗಳನ್ನು ಬಹಳ ಚೆನ್ನಾಗಿ ಮನೋಜ್ಞವಾಗಿ ವಿಶದಪಡಿಸಲಾಗಿದೆ. ಶಕ್ತಿವಿಶಿಷ್ಟಾದ್ವೈತಕ್ಕೆ ಮೂಲ ಆಚಾರ್ಯರು ಒಬ್ಬರಲ್ಲ: ಅನೇಕ ಮಹಾಮಹಿಮರು. ಆದರೂ ಶಕ್ತಿವಿಶಿಷ್ಟಾದ್ವೈತ ದರ್ಶನ ಕ್ರಮಬದ್ಧವಾಗಿ, ಕ್ರಾಂತಿಕಾರಕವಾಗಿ ರೂಪಗೊಂಡುದು ಹನ್ನೆರಡನೇ ಶತಮಾನದ ಶಿವಶರಣರ ಕೈಯಲ್ಲಿ: ವಿಶೇಷತಃ ಬಸವಣ್ಣನವರ ಮುಂದಾಳತ್ವದಲ್ಲಿ. ಶ್ರೀಪತಿ ಪಂಡಿತರ ಸಂಸ್ಕೃತ ಮೂಲದ ಜೊತೆಗೆ ಪೂರಕವಾಗಿ ನಿಂತ ಮತ್ತೊಂದು ಮೂಲ ಅನುಭಾವೀ ಶಿವಶರಣರ ವಚನಾಮೃತ ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲು. 28 ಶೈವಾಗಮ ಹಾಗೂ ಉಪಾಗಮಗಳಲ್ಲೂ ಶಕ್ತಿವಿಶಿಷ್ಟಾದ್ವೈತ ದರ್ಶನದ ಮೂಲಾಂಶಗಳನ್ನು ಕಾಣಬಹುದು. ಹೀಗೆ ಎರಡೂ ದರ್ಶನಗಳು—ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ—ವೇದ ಮತ್ತು ಆಗಮಗಳಿಗೆ ಗೌರವವನ್ನು ತೋರಿವೆ. ಹಾಗೆಯೇ ಯಾವ ವೇದೋಪನಿಷತ್ತುಗಳನ್ನೂ ಅರಿಯದ ಆದರೆ ತಮ್ಮ ನಿಸ್ವಾರ್ಥ ಸೇವಾ ಬುದ್ಧಿಯಿಂದ ಪರಮಾತ್ಮನಲ್ಲಿ ಅನನ್ಯ ಭಕ್ತಿಯನ್ನು ಹೊಂದಿ ಜೀವನದ ಸಾರಸರ್ವಸ್ವವೆಲ್ಲಾ ಪರಮಾತ್ಮನಿಗೆ ಶರಣುಹೋಗುವುದರಲ್ಲಿ ಅಡಗಿದೆಯೆಂದು ಪ್ರಪಂಚದ ಉನ್ನತಿಗೆ ಒಂದು ದೆಸೆಯನ್ನು ತೋರಿಸಿದ ಆಳ್ವಾರರುಗಳನ್ನು ವಿಶಿಷ್ಟಾದ್ವೈತ ದರ್ಶನ ಬಹುವಾಗಿ ಕೊಂಡಾಡಿದರೆ, ಶಕ್ತಿವಿಶಿಷ್ಟಾದ್ವೈತದರ್ಶನ ಜಾತಿ, ಮತ, ಕುಲಭೇದಗಳನ್ನು ಬದಿಗೊತ್ತಿ ತಮ್ಮ ಸ್ವಂತ ಅನುಭವದಿಂದ ಪರಮಾತ್ಮನ ಸಾಯುಜ್ಯವನ್ನು ಕಾಯಕದಿಂದ ಪಡೆದು ಧನ್ಯರಾಗಬೇಕೆಂದು ಪ್ರಪಂಚಕ್ಕೆ ಬೋಧಿಸಿದ ಶಿವಶರಣರಿಗೆ, ತುಂಬುಹೃದಯದಿಂದ ಎಲ್ಲಿಲ್ಲದ ಗೌರವ ಪ್ರಿತ್ಯಾದರಗಳನ್ನು ತೋರಿಸುತ್ತದೆ. ಜನರೆಲ್ಲರಲ್ಲೂ ಅಂತರ್ಯಾಮಿಯಾಗಿರುವ 'ಈಶ್ವರ'ನ ಕೃಪೆಗೆ ಪಾತ್ರರಾಗಿ ಜೀವನದ ಗುರಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬುದು ಈ ಎರಡೂ ದರ್ಶನಗಳಲ್ಲಿ ಸಮಾನವಾಗಿರುವ ಅಂಶ. ಈ ಎರಡೂ ದರ್ಶನಗಳು ಜನಸಾಮಾನ್ಯರಲ್ಲಿ ನವಜಾಗೃತಿಯನ್ನುಂಟುಮಾಡಿ, ಸಮಾಜದಲ್ಲಿ ಆಳವಾಗಿ ಬೇರೂರಿದ ವರ್ಣಧರ್ಮದ ಔಚಿತ್ಯವನ್ನು ಅತ್ಯಂತ ಪ್ರಬಲವಾಗಿ ಪ್ರಶ್ನಿಸಿದವು. ವರ್ಣಧರ್ಮದ ಪ್ರಭಾವ ದುರ್ಬಲವಾಗಲು ಈ ಎರಡೂ ದರ್ಶನಗಳು ಜನರ ಮೇಲೆ ಬೀರಿದ ಪ್ರಭಾವ ಹಿಂದೂಧರ್ಮದ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವಪೂರ್ಣವಾದುದು.

೨

ಈ ಎರಡೂ ದರ್ಶನಗಳ ತಾತ್ತ್ವಿಕ ಅಂಶಗಳನ್ನು ಈಗ ವಿಶದಪಡಿಸೋಣ.

ವಿಶಿಷ್ಟಾದ್ವೈತ ದರ್ಶನದ ಸಾರವನ್ನು ಹೀಗೆ ಸಂಗ್ರಹಿಸಬಹುದು: ಸತ್ಯ ಅಥವಾ 'ಬ್ರಹ್ಮ'ತತ್ತ್ವಕ್ಕೆ ಚಿತ್ ಮತ್ತು ಅಚಿತ್‌ಗಳೆಂಬ ವಿಶೇಷಣಗಳಿವೆ. ಅಂದರೆ ಅದು ಚಿತ್ ಮತ್ತು ಅಚಿತ್ ಅಂಶಗಳ ವಿಶಿಷ್ಟ. ಇಲ್ಲಿ ಬ್ರಹ್ಮ ಅಥವಾ ಸತ್ಯವನ್ನು ನಾರಾಯಣ ಎಂಬ ಹೆಸರಿನಿಂದ ಕರೆಯಲಾಗಿದೆ. ಚಿತ್‌ಗೆ ಇನ್ನೊಂದು ಹೆಸರೇ ಜೀವ. ಅಚಿತ್, ಜಡ ಪ್ರಪಂಚ. ಇಲ್ಲಿ ಜೀವ ಹಾಗೂ ಪ್ರಪಂಚಗಳು ನಾರಾಯಣನ ಇರುವಿಕೆಯಷ್ಟೇ ಸತ್ಯ; ಅದ್ವೈತ ದರ್ಶನ ಹೇಳುವಂತೆ ಅವು ಮಿಥ್ಯೆಯಲ್ಲ. ಜೀವ ಮತ್ತು ಪ್ರಪಂಚ—ಎರಡೂ ವಿಭಿನ್ನ ಸತ್ಯಗಳು. ಆದರೆ ಅವು ಬ್ರಹ್ಮ ತತ್ತ್ವದೊಡನೆ ಒಟ್ಟಿಗೆ ಸೇರಿಸಲ್ಪಟ್ಟಿವೆ. ನಾರಾಯಣ ಹಾಗೂ ಜೀವರ ನಡುವಿನ ಸಂಬಂಧ ಮತ್ತು ನಾರಾಯಣ ಹಾಗೂ ಪ್ರಪಂಚದ ನಡುವಿನ ಸಂಬಂಧ ಅತ್ಯಂತ ನಿಕಟವಾದುದು, ಬೇರ್ಪಡಿಸಲು ಅಸಾಧ್ಯವಾದುದು. ಈ ಬೇರ್ಪಡಿಸಲಾಗದ ಅತ್ಯಂತ ಆತ್ಮೀಯ

ಸಂಬಂಧವನ್ನು ವಿಶಿಷ್ಟಾದ್ವೈತ ದರ್ಶನ 'ಅಪೃಥಕ್ ಸಿದ್ಧಿ' ಎಂದು ಕರೆಯುತ್ತದೆ. ಹೀಗೆ ಈ ದರ್ಶನದಲ್ಲಿ ನಾರಾಯಣನೂ ಸತ್ಯ, ಜೀವವೂ ಸತ್ಯ, ಪ್ರಪಂಚವೂ ಸತ್ಯ. ಆದರೆ ಜೀವ ಮತ್ತು ಪ್ರಪಂಚಗಳು ನಾರಾಯಣನ ಅಧೀನರು. ನಾರಾಯಣ ಅವುಗಳನ್ನು ಒಳಗಿನಿಂದ ನಿಯಂತ್ರಿಸುತ್ತಾನೆ. ನಾರಾಯಣ ನಿಯಾಮಕ; ಜೀವ ಮತ್ತು ಪ್ರಪಂಚಗಳು ನಿಯಾಮ್ಯ. ನಾರಾಯಣ ಒಡೆಯ ಅಥವಾ 'ಶೇಷಿ'; ಜೀವ ಮತ್ತು ಪ್ರಪಂಚಗಳು ನಾರಾಯಣನ ದಾಸರು ಅಥವಾ 'ಶೇಷ'ರು. ಆದುದರಿಂದಲೇ ನಾರಾಯಣ ಹಾಗೂ ಜೀವ ಮತ್ತು ಪ್ರಪಂಚದ ನಡುವಿನ ಸಂಬಂಧವನ್ನು 'ಶೇಷಿ—ಶೇಷ' ಸಂಬಂಧ ಎಂದೂ ಕರೆಯುತ್ತಾರೆ. ಈ ದರ್ಶನದ ಸಾರ ಇನ್ನೂ ಚೆನ್ನಾಗಿ ಮನವರಿಕೆಯಾಗಲು ರಾಮಾನುಜರು 'ಶರೀರಿ—ಶರೀರ' ಭಾವವನ್ನು ಉಪಯೋಗಿಸಿಕೊಂಡಿದ್ದಾರೆ. ಶರೀರಿ ಅಥವಾ ಆತ್ಮ ಮತ್ತು ಜೀವಂತ ದೇಹಗಳ ನಡುವಿನ ಸಂಬಂಧ ಬೇರ್ಪಡಿಸಲಾಗದ್ದು; ಜೀವಂತ ದೇಹ ಆತ್ಮನ ಮುಖಾಂತರವೇ ಪ್ರಕಟಗೊಳ್ಳುತ್ತದೆ. ಈ ದರ್ಶನದಲ್ಲಿ ನಾರಾಯಣನೇ ಆತ್ಮನು. ಜೀವ ಮತ್ತು ಪ್ರಪಂಚಗಳು ಅವನ ದೇಹವು. ಹೀಗೆ ನಾರಾಯಣ ಮತ್ತು ಜೀವ ಹಾಗೂ ನಾರಾಯಣ ಮತ್ತು ಪ್ರಪಂಚ—ಇವುಗಳ ನಡುವೆ ಇರುವ ಸಂಬಂಧವು ಅತ್ಯಂತ ಆತ್ಮೀಯವೂ ನಿಕಟವೂ ಬೇರ್ಪಡಿಸಲು ಅಸಾಧ್ಯವಾದುದೂ ಆಗಿದೆ.

ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲಿ ಆತ್ಯಂತಿಕ ಸತ್ಯವನ್ನು ಪರಮಶಿವ ಎಂಬ ಹೆಸರಿನಿಂದ ಕರೆಯಲಾಗಿದೆ. ಪರಮಶಿವನನ್ನು 'ಲಿಂಗ' ಅಥವಾ 'ಸ್ಥಲ' ಎಂದೂ ಕರೆಯಲಾಗಿದೆ. ಪರಮಶಿವ ನಿರಂತರವೂ ಶಕ್ತಿಯೊಡಗೂಡಿರುತ್ತಾನೆ; ಶಕ್ತಿ ಅವನ ಅವಿಭಾಜ್ಯ ವಿಶೇಷಣ ಆದುದರಿಂದಲೇ ಈ ದರ್ಶನವನ್ನು 'ಶಕ್ತಿ ವಿಶಿಷ್ಟಾದ್ವೈತ' ಎಂದು ಕರೆಯಲಾಗಿದೆ.

ಪರಮಶಿವನಿಗೆ ಸ್ವಸ್ಥ ಅಥವಾ ಕೇವಲಾವಸ್ಥೆ ಮತ್ತು ಲೀಲಾವಸ್ಥೆ ಎಂಬ ಎರಡು ಅವಸ್ಥೆಗಳಿವೆ. ಸ್ವಸ್ಥಾವಸ್ಥೆಯಲ್ಲಿ ಪರಮಶಿವ ತನ್ನ ಅವಿಭಾಜ್ಯ ವಿಶೇಷಣವಾದ ಶಕ್ತಿಯೊಡಗೂಡಿ ವಿಚಲಿತನಾಗದೆ ನಿರ್ಲಿಪ್ತನಾಗಿ ನಿರಂತರ ಶಾಂತಿಯಿಂದ ಕೂಡಿರುತ್ತಾನೆ. ಶಕ್ತಿ ಇಲ್ಲಿ ಸಂಕುಚಿತವಾಗಿರುತ್ತದೆ. ಈ ಸ್ಥಿತಿಯನ್ನು 'ವಿಮರ್ಶ' ಎಂದೂ ಕರೆಯಲಾಗಿದೆ.

ಲೀಲಾವಸ್ಥೆಯಲ್ಲಿ ಪರಮಶಿವ ತನ್ನ ಸ್ವ-ಇಚ್ಛೆಯಿಂದ ತಾನೇ ಜೀವಿಯಾಗಿ, ಪ್ರಪಂಚನಾಗಿ, ಪೂಜ್ಯ—ಪೂಜಕ ಸಂಬಂಧವನ್ನು ಹೊಂದಲು ಅಪೇಕ್ಷಿಸುತ್ತಾನೆ. ಆಗ ಶಕ್ತಿಯೊಡಗೂಡಿದ ಪರಮಶಿವ ಕ್ಷುಭಿತಗೊಂಡು, ವಿಚಲಿತನಾಗಿ ಪ್ರಪಂಚದ 36 ತತ್ತ್ವಗಳಾಗಿ ರೂಪಾಂತರ ಹೊಂದುತ್ತಾನೆ. ಶಿವ, ಸದಾಶಿವ, ಈಶ್ವರ, ಶಕ್ತಿ, ಶುದ್ಧವಿದ್ಯಾ, ಮಾಯ, ಕಲಾ, ರಾಗ, ವಿದ್ಯಾ, ಕಾಲ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್, ಶ್ರೋತ್ರ, ತ್ವಕ್, ಚಕ್ಷುಸ್, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥವೀ—ಇವೇ ಆ ಮೂವತ್ತಾರು ತತ್ತ್ವಗಳು. ಲೀಲಾವಸ್ಥೆ, ಪರಮಶಿವ ತನ್ನ ಲೀಲಾ ವಿಲಾಸಕ್ಕಾಗಿ ಸ್ವೇಚ್ಛೆಯಿಂದ, ಮಾಡಿಕೊಂಡದ್ದೆಂಬುದು ಈ ದರ್ಶನದ ಬಹು ಮುಖ್ಯವಾದ ಅಂಶ.

ಈ ಮೂವತ್ತಾರು ತತ್ತ್ವಗಳಲ್ಲಿ ಶಿವ 'ಸ್ಥಿತಿ'ಯನ್ನು ಪಾಲಿಸುವವನು; ಜೀವಿಯ ಮೇಲೆ ಅನುಗ್ರಹವನ್ನು ದಯಪಾಲಿಸುವವನು. ಸದಾಶಿವ ಇಚ್ಛಾಬಲದ ಪ್ರತೀಕನಾಗಿದ್ದಾನೆ; ಅವನು 'ಲಯಕಾರ.' ಈಶ್ವರ ತತ್ತ್ವದಲ್ಲಿ ಜ್ಞಾನಶಕ್ತಿಯ ಪ್ರಾಬಲ್ಯ ಇದೆ. ಶುದ್ಧ ವಿದ್ಯಾ ತತ್ತ್ವದಲ್ಲಿ ಕ್ರಿಯಾಶಕ್ತಿಯ ಪ್ರಾಬಲ್ಯವಿದೆ. ಆದರ ಕ್ರಿಯೆ ಸೃಷ್ಟಿ. ಶಕ್ತಿ ಮಾಯಾ ರೂಪವಾಗಿ ಜೀವಿಯ ತಿರೋಧಾನ ಅಥವಾ ಆವರಣ ಕ್ರಿಯೆಯನ್ನು ಮಾಡುತ್ತದೆ. ಜೀವ ಸ್ವತಃ ಪರಮಶಿವನ ಅಂಶವಾದರೂ, ಮಾಯೆಯ ಪ್ರಭಾವದಿಂದ ಅದನ್ನು ಅರಿಯದೇ

ಇರುತ್ತಾನೆ. ಕಲಾ ತತ್ತ್ವವು ಜೀವನನ್ನು ಭಾಗಶಃ ಆವರಿಸಿರುವ ಮಲವನ್ನು ಅನಾವರಣ ಮಾಡಲು ಉಪಕ್ರಮಿಸುತ್ತದೆ. ಅದು ಮುಂದೆ ವಿದ್ಯಾ ತತ್ತ್ವವಾಗಿ ಪರಿಣಮಿಸುತ್ತದೆ. ಕಲಾ, ವಿದ್ಯಾ, ರಾಗ, ಕಾಲ, ನಿಯತಿ – ಈ ಐದು ತತ್ತ್ವಗಳನ್ನು 'ಪಂಚ ಕಂಚುಕಗಳು' ಎಂದು ಕರೆಯಲಾಗಿದೆ. ಇವು ಜೀವಿಗೆ ವ್ಯಕ್ತಿತ್ವವನ್ನು (individuality) ಒದಗಿಸುವ ತತ್ತ್ವಗಳಾಗಿವೆ. ಇನ್ನುಳಿದ ಇಪ್ಪತ್ತುನಾಲ್ಕು ತತ್ತ್ವಗಳು ಸಾಂಖ್ಯ ದರ್ಶನದಲ್ಲಿರುವಂತೆಯೇ ನಿರೂಪಿತವಾಗಿವೆ.

೪

ವಿಶಿಷ್ಟಾದ್ವೈತ ದರ್ಶನದ ನಾರಾಯಣ ಶಕ್ತಿವಿಶಿಷ್ಟಾದ್ವೈತ ದರ್ಶನದ ಪರಮಶಿವನನ್ನು ಒಂದು ವಿಧದಲ್ಲಿ ಹೋಲುತ್ತಾನೆಂದು ಹೇಳಬಹುದು. ಏಕೆಂದರೆ ಎರಡೂ ದರ್ಶನಗಳಲ್ಲಿ ಪರಬ್ರಹ್ಮ (ನಾರಾಯಣ ಅಥವಾ ಪರಮಶಿವ) ಸವಿಶೇಷ ಬ್ರಹ್ಮ. ವಿಶಿಷ್ಟಾದ್ವೈತ ದರ್ಶನದಲ್ಲಿ ಪರಬ್ರಹ್ಮಕ್ಕೆ ಜೀವ ಮತ್ತು ಜಗತ್ ಎಂಬ ಎರಡು ವಿಶೇಷಣಗಳಿದ್ದರೆ ಶಕ್ತಿವಿಶಿಷ್ಟಾದ್ವೈತದಲ್ಲಿ ಶಕ್ತಿ ಎಂಬ ಒಂದೇ ವಿಶೇಷಣವಿದೆ. ವಿಶಿಷ್ಟಾದ್ವೈತ ದರ್ಶನದ ನಾರಾಯಣ ನಿರ್ಗುಣನಲ್ಲ; ಅವನು ಸಗುಣೇಶ. ಅನಂತಕಲ್ಯಾಣಗುಣಪರಿಪೂರ್ಣ, ದಯಾಮಯ, ಸರ್ವಜ್ಞ, ಸರ್ವಶಕ್ತ, ಸರ್ವಾಂತರ್ಯಾಮಿ, ತ್ರಿಲೋಕಸುಂದರ, ಬಂಧು, ಕಾರುಣ್ಯಮೂರ್ತಿ. ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲೂ ಪರಮಶಿವ ಸಗುಣೇಶ, ಅವನು ಸರ್ವಜ್ಞ, ಸರ್ವಾಂತರ್ಯಾಮಿ ;ಸೃಷ್ಟಿ, ಸ್ಥಿತಿ ಲಯಗಳು ಅವನ ಶಕ್ತಿಗಳು. ವಿಶಿಷ್ಟಾದ್ವೈತದರ್ಶನದಲ್ಲಿರುವಂತೆ ಇಲ್ಲಿಯೂ ಸಹ ಶಿವ ಮತ್ತು ಶಕ್ತಿ — ಇವರ ಸಂಬಂಧ ಅತ್ಯಂತ ಆತ್ಮೀಯವಾದುದು, ಬೇರ್ಪಡಿಸಲು ಅಸಾಧ್ಯವಾದುದು. ಶಕ್ತಿಯೊಡಗೂಡದ ಪರಮಶಿವನನ್ನಾಗಲೀ, ಪರಮಶಿವನೊಡಗೂಡದ ಶಕ್ತಿಯನ್ನಾಗಲೀ ಊಹಿಸಲೂ ಈ ದರ್ಶನದಲ್ಲಿ ಅವಕಾಶವಿಲ್ಲ.

೫

ಆದರೆ ಜೀವಿಯ ಸ್ವರೂಪದ ವಿಷಯದಲ್ಲಿ ಕೆಲವು ವೈದೃಶ್ಯಗಳನ್ನು ಈ ದರ್ಶನಗಳಲ್ಲಿ ಕಾಣಬಹುದು. ಪರಮಶಿವನೇ ತನ್ನ ಸ್ವಾತಂತ್ರ್ಯದಿಂದ ತನ್ನ ಲೀಲಾವಿಲಾಸಕ್ಕೋಸ್ಕರ ಜೀವಿಯಾಗುತ್ತಾನೆ; ವಾಸ್ತವಿಕನಾದ ಪರಮಶಿವನ ಸ್ವಾಭಾವಿಕ ಅವಸ್ಥೆಯೇ ಜೀವ; ಜೀವ–ಬ್ರಹ್ಮಗಳ ಭೇದ ಸ್ವಾಭಾವಿಕ, ಅಭೇದ ವಾಸ್ತವಿಕ, ಎಂದು ಶಕ್ತಿ ವಿಶಿಷ್ಟಾದ್ವೈತ ಪ್ರತಿಪಾದಿಸುತ್ತದೆ. ಈ ಪ್ರತಿಪಾದನೆಯನ್ನು ವಿಶಿಷ್ಟಾದ್ವೈತ ದರ್ಶನ ಎಳ್ಳಷ್ಟೂ ಒಪ್ಪುವುದಿಲ್ಲ. ಜೀವಿಯ ಸ್ವರೂಪದ ಬಗ್ಗೆ ವಿಶಿಷ್ಟಾದ್ವೈತದರ್ಶನದ ನಿಲುವು ಶಕ್ತಿವಿಶಿಷ್ಟಾದ್ವೈತ ದರ್ಶನದಿಂದ ಭಿನ್ನವಾಗಿರುವುದಷ್ಟೇ ಅಲ್ಲದೆ ಆ ದರ್ಶನಕ್ಕೆ ವಿಶೇಷವಾದದ್ದೂ ಆಗಿದೆ. ವಿಶಿಷ್ಟಾದ್ವೈತ ದರ್ಶನವು ನಾರಾಯಣನೇ (ಪರಬ್ರಹ್ಮವೇ) ಜೀವನಾಗಿದ್ದಾನೆ ಅಥವಾ ಜೀವನಾಗಿ ರೂಪಾಂತರ ಹೊಂದಿದ್ದಾನೆ ಎಂಬುದನ್ನು ಪ್ರತಿಪಾದಿಸುವುದಿಲ್ಲ. ಜೀವ, ನಾರಾಯಣನಿಗಿಂತ ಭಿನ್ನನಾದ ಆದರೆ ನಾರಾಯಣನನ್ನು ಬಿಟ್ಟಿರಲಾರದ ಸೇವಕ ಹಾಗೂ ದಾಸ. ತನ್ನದೇ ಆದ ಅಸ್ತಿತ್ವವನ್ನು ಹೊಂದಿರುವ ಜೀವ ವಿಶಿಷ್ಟಾದ್ವೈತದರ್ಶನದಲ್ಲಿ ನಿತ್ಯವಾದುದಾಗಿದೆ. ಜೀವಿ ಸಂಖ್ಯೆಯಲ್ಲಿ ಅನೇಕ. ತಮ್ಮ ತಮ್ಮ ಕರ್ಮಫಲಕ್ಕನುಗುಣವಾಗಿ ಸಂಸಾರದಲ್ಲಿ ಸುಖದುಃಖ ಭೋಗಾದಿಗಳನ್ನು ಅನುಭವಿಸುತ್ತಾ ಇರುವ ಜೀವಿಗಳು ನಾರಾಯಣನಿಗಿಂತ ಭಿನ್ನರಾಗಿದ್ದು ಮೋಕ್ಷಕ್ಕಾಗಿ ಅವನ ಅನುಗ್ರಹವನ್ನೇ ಅವಲಂಬಿಸಿರುತ್ತಾರೆ.

ಎರಡೂ ದರ್ಶನಗಳಲ್ಲಿ ಜೀವಿ ಅಣುಸ್ವರೂಪನು. ವಿಶಿಷ್ಟಾದ್ವೈತದರ್ಶನದಲ್ಲಿ ಜೀವಿ ತನ್ನ ನಿರಂತರ ಗುಣವಿಶೇಷನಾದ ಧರ್ಮಭೂತ ಜ್ಞಾನದಿಂದ ಪ್ರಾಪಂಚಿಕ ಜ್ಞಾನವನ್ನು ಹೊಂದುತ್ತಾನೆ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಜೀವನನ್ನು 'ಅಂಗ'ನೆಂದು ಕರೆಯಲಾಗಿದೆ. ಅಂಗ, ಪರಮಶಿವ ಅಥವಾ ಲಿಂಗದ ಕೈಂಕರ್ಯವನ್ನು ಮಾಡಿಕೊಂಡು, ತನ್ನ ವಾಸ್ತವಿಕ ಸ್ವರೂಪವಾದ, ಅವರೆ ಅಂಗ ಸ್ಥಿತಿಯಲ್ಲಿ ಮಲತ್ರಯಗಳಿಂದ ಮುಚ್ಚಿ ಹೋಗಿರುವ ಸಚ್ಚಿದಾನಂದವನ್ನು ಪುನಃ ಪಡೆಯಲು ಕಾತುರನಾಗಿರುತ್ತಾನೆ.

೬

ಜಗತ್‌ಸ್ವರೂಪದ ಬಗ್ಗೆಯೂ ಎರಡೂ ದರ್ಶನಗಳಲ್ಲಿ ಸಾದೃಶ್ಯಗಳ ಜೊತೆಗೆ ವೈದೃಶ್ಯಗಳನ್ನೂ ಕಾಣಬಹುದು. ಎರಡೂ ದರ್ಶನಗಳು ಪ್ರಪಂಚದ ಸತ್ಯತೆಯನ್ನು ತೆರೆದಮನಸ್ಸಿನಿಂದ ಒಪ್ಪಿವೆ. ಅದ್ವೈತದರ್ಶನ ಹೇಳುವಂತೆ ಈ ಜಗತ್ತು ಮಾಯೆಯಲ್ಲ; ಅದು ನಾರಾಯಣನಷ್ಟೇ ಅಥವಾ ಪರಮಶಿವನಷ್ಟೇ ಸತ್ಯವಾದುದೆಂದು ಎರಡು ದರ್ಶನಗಳೂ ಸಾರುತ್ತವೆ. ಪರಮಶಿವನ ಪರಿಣಾಮವೇ ಜಗತ್ತಾದುದರಿಂದ ಅಲ್ಲಿಯೂ ಚಿದಂಶವಿದೆ, ಚಿತ್‌ಶಕ್ತಿ ಇದೆ ಎಂದು ಶಕ್ತಿವಿಶಿಷ್ಟಾದ್ವೈತ ದರ್ಶನ ಸಾರಿದರೆ, ವಿಶಿಷ್ಟಾದ್ವೈತ ದರ್ಶನ ಜಗತ್ತು ನಾರಾಯಣನ ಒಂದು ವಿಶೇಷಣವೆಂದೂ, ನಾರಾಯಣನ ರೂಪಾಂತರ ಅಲ್ಲವೆಂದೂ, ನಾರಾಯಣನಿಗಿಂತ ಭಿನ್ನವಾದ, ಅವರೆ ಅವನನ್ನು ಬಿಟ್ಟಿರಲಾರದ ಹಾಗೂ ಅವನ ನಿತ್ಯ ನಿಯಂತ್ರಣಕ್ಕೊಳಗಾದ ಸತ್ವರಜಸ್ ತಮೋಗುಣಗಳನ್ನು ಹೊಂದಿರುವಂಥಾದ್ದೆಂದೂ ಸಾರುತ್ತದೆ.

ಎರಡೂ ದರ್ಶನಗಳಲ್ಲಿ ನಾರಾಯಣ ಅಥವಾ ಪರಮಶಿವ ಜಗತ್ತಿನ ಉಪಾದಾನ ಹಾಗೂ ನಿಮಿತ್ತಕಾರಣರಾಗಿದ್ದಾರೆ. ಶಕ್ತಿವಿಶಿಷ್ಟಾದ್ವೈತ, ಈ ಜಗತ್ತು, ಶಕ್ತಿವಿಶಿಷ್ಟ ಪರಮಶಿವನ ಪರಿಣಾಮ ಎಂದೂ, ಪರಮಶಿವ ರೂಪಾಂತರ ಹೊಂದಿದರೂ ತನ್ನ ಸ್ವರೂಪದಲ್ಲಿ ಶುದ್ಧನೇ ಆಗಿರುತ್ತಾನೆ. ಕಳಂಕನಾಗುವುದಿಲ್ಲ ಎಂದೂ 'ಅವಿಕೃತಪರಿಣಾಮವಾದ'ವನ್ನು ಪ್ರತಿಪಾದಿಸಿದರೆ, ವಿಶಿಷ್ಟಾದ್ವೈತ ದರ್ಶನ ಪ್ರಕೃತಿಯ ವರದೇವತೆಯಾದ ಲಕ್ಷ್ಮೀದೇವಿಯ ಸಲಹೆಗಳ ಮೇರೆಗೆ ಪ್ರಕೃತಿ, ಪ್ರಪಂಚವಾಗಿ ಪರಿಣಾಮ ಹೊಂದುತ್ತದೆ ಎಂದು ಸಾರುತ್ತದೆ.

ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ — ಎರಡೂ ದರ್ಶನಗಳು ಮೂಲತಃ ದೇವಾಸ್ತಿಕ್ಯ (Theistic) ದರ್ಶನಗಳು. ಇವುಗಳಲ್ಲಿ ಪ್ರತಿಪಾದಿತವಾಗಿರುವ ಭಗವತ್ತತ್ತ್ವಗಳು ತಮ್ಮದೇ ಅ[illegible] ಲೋಕಗಳನ್ನು (ನಾರಾಯಣ ವೈಕುಂಠವನ್ನೂ, ಪರಮಶಿವ ಕೈಲಾಸವನ್ನೂ) ಹೊಂದಿವೆ. ಪ್ರಪಂಚದ ಸೃಷ್ಟಿ ಕಾರ್ಯದಲ್ಲಿ ನಾರಾಯಣನಿಗೆ ಲಕ್ಷ್ಮೀದೇವಿ ಸಹಕರಿಸಿದರೆ, ಪರಮಶಿವನಿಗೆ ಶಕ್ತಿ ಅಥವಾ ಉಮಾದೇವಿ ಸಹಕರಿಸುತ್ತಾಳೆ.

೭

ಈಗ ಮೋಕ್ಷ ಸ್ವರೂಪ, ಮೋಕ್ಷ ಸಾಧನಗಳ ಬಗ್ಗೆ ಎರಡೂ ದರ್ಶನಗಳ ನಿಲುವನ್ನು ಸ್ಪಷ್ಟಪಡಿಸೋಣ. ಮೋಕ್ಷ ಎಂದರೆ, ಸಂಸಾರದ ಜಂಜಾಟದಿಂದ, ಹುಟ್ಟುಸಾವುಗಳ ನಿರಂತರ ಚಕ್ರದಿಂದ ಹೊರಬಂದು ನಿತ್ಯಸುಖವನ್ನು ಅನುಭವಿಸುವುದು. ಇದು ಸಾಮಾನ್ಯವಾದ ಅರ್ಥ. ವಿಶಿಷ್ಟಾದ್ವೈತ ದರ್ಶನದಲ್ಲಿ ಮೋಕ್ಷ ಎಂದರೆ ನಾರಾಯಣನ ಲೋಕವಾದ ವೈಕುಂಠವನ್ನು ಒಳಹೊಕ್ಕು ನಾರಾಯಣನ ಕೈಂಕರ್ಯವನ್ನು ಮಾಡಿಕೊಂಡು, ಅವನ ದಾಸಾನುದಾಸನಾಗಿ, ಅವನ ಇಚ್ಛೆಗೆ ವಿರೋಧವಾಗಿ ನಡೆಯದಂತೆ ಎಚ್ಚರವಹಿಸಿ, ಅವನ ಸುಖ ಸಂತೋಷಗಳೇ ತನ್ನ ಸುಖ ಸಂತೋಷ ಎಂದು ತಿಳಿದು, ಸರ್ವಜ್ಞನೂ ಸರ್ವಶಕ್ತನೂ ಸರ್ವಾಂತ[illegible]ರ್ಯಾಮಿಯೂ

ಆದ ಅವನಲ್ಲಿ, ಅನನ್ಯ ಶರಣಾಗತನಾಗಿ, ನಿರಂತರವೂ ಅವನ ಪ್ರೇಮಮಯ ಕೃಪಾಕಟಾಕ್ಷಕ್ಕೊಳಗಾಗಿ ಅವನ ಆಜ್ಞೆಗಳನ್ನು ಶಿರಸಾವಹಿಸಲು ತುದಿಗಾಲಿನಲ್ಲಿ ನಿಂತು ನಿತ್ಯಾನಂದರೂಪವಾದ ಅನುಭವದಲ್ಲಿ ಮಗ್ನನಾಗುವುದು. ಅಂದರೆ, ಜೀವ, ಮೋಕ್ಷಸ್ಥಿತಿಯಲ್ಲಿ ಭಗವದನುಭವವನ್ನು ಹೊಂದಿ ಭಗವತ್ಪ್ರೀತಿಯಲ್ಲಿ ತಲ್ಲೀನನಾಗಿ ಭಗವದ್ ಕೈಂಕರ್ಯಕ್ಕೆ ತನ್ನನ್ನೇ ಮೀಸಲು ಮಾಡಿಕೊಳ್ಳುತ್ತಾನೆ. ವಿಶಿಷ್ಟಾದ್ವೈತದರ್ಶನದ ಪ್ರಕಾರ, ಮೋಕ್ಷಸ್ಥಿತಿಯಲ್ಲಿ ಜೀವ, ನಾರಾಯಣನೊಡನೆ ಐಕ್ಯನಾಗುವುದಿಲ್ಲ. ನಾರಾಯಣನಿಗೆ ಅತಿ ಸಮೀಪನಾಗಿ 'ತನ್ನತನ' ವನ್ನು ಉಳಿಸಿಕೊಂಡು, 'ನಾನು ಆನಂದವನ್ನು ಅನುಭವಿಸುತ್ತಿದ್ದೇನೆ', 'ನಾನು ನಾರಾಯಣನೇ ಅಲ್ಲ; ಅವನ ಚರಣದಾಸ, ಭೃತ್ಯ, ಪರಮಸೇವಕ' ಎಂಬ ತಿಳಿವನ್ನು ಹೊಂದಿರುತ್ತಾನೆ. ಹೀಗೆ ವ್ಯವಹಾರಾವಸ್ಥೆಯಲ್ಲಿರುವ ನಾರಾಯಣ–ಜೀವರ ಭೇದ ಮುಕ್ತಿ ಅವಸ್ಥೆಯಲ್ಲೂ ಮುಂದುವರಿಯುತ್ತದೆ. ದೇಹಪಾತವಾದಮೇಲೆ ಜೀವಿಗೆ ಮುಕ್ತಿ ಲಭಿಸುತ್ತದೆ ಎಂದು ಈ ದರ್ಶನ ಸಾರುತ್ತದೆ. ಇದನ್ನೇ ವಿದೇಹ ಮುಕ್ತಿ ಎನ್ನುವುದು.

ಆದರೆ ಶಕ್ತಿವಿಶಿಷ್ಟಾದ್ವೈತದರ್ಶನವು ಮೋಕ್ಷಸ್ಥಿತಿಯಲ್ಲಿ ಜೀವನು ಪರಮಶಿವನಲ್ಲಿ ಲೀನವಾಗುತ್ತಾನೆ ಎಂದು ಪ್ರತಿಪಾದಿಸುತ್ತದೆ: ಅಂದರೆ ಲಿಂಗ(ಪರಮಶಿವ)ನಿಗೂ ಅಂಗ (ಜೀವ)ನಿಗೂ ಪರಸ್ಪರ ಭೇದವಿರುವುದಿಲ್ಲ; ದ್ವಂದ್ವ ಇಲ್ಲವಾಗಿ ತಾದಾತ್ಮ್ಯ ಉಂಟಾಗುತ್ತದೆ. ಇದನ್ನೇ ಲಿಂಗಾಂಗಸಾಮರಸ್ಯ ಎಂದು ಈ ದರ್ಶನವು ಕರೆಯುತ್ತದೆ.

ವಿಶಿಷ್ಟಾದ್ವೈತದರ್ಶನದಲ್ಲಿ ಮೋಕ್ಷ ಎಂಬುದು ನಾರಾಯಣನು ಜೀವಿಗಳಿಗೆ ಅನುಗ್ರಹಿಸುವ ನಿರಂತರ ಆನಂದಾವಸ್ಥೆ. ಜೀವ ಮುಕ್ತಿಯನ್ನು ಪಡೆಯಲು ನಾರಾಯಣನ ಅನುಗ್ರಹ, ಪ್ರಸಾದ ಅತ್ಯಗತ್ಯ: ನಾರಾಯಣನ ಅನುಗ್ರಹವಿಲ್ಲದೆ ಜೀವ ಮುಕ್ತಿಯನ್ನು ಪಡೆಯಲಾರನೆಂದು ಈ ದರ್ಶನ ಖಡಾಖಂಡಿತವಾಗಿ ಸಾರುತ್ತದೆ. ನಾರಾಯಣನ ಅನುಗ್ರಹವನ್ನು ಸಂಪಾದಿಸಲು ಜೀವ ವಿಶಿಷ್ಟಾದ್ವೈತದರ್ಶನದಲ್ಲಿ ನಿಯಮಮಾಡಿರುವ ಮಾರ್ಗವನ್ನು ಅನುಸರಿಸಬೇಕು. ಕರ್ಮ–ಜ್ಞಾನ–ಭಕ್ತಿ ಮತ್ತು ಪ್ರಪತ್ತಿಯೇ ಆ ರಾಜಮಾರ್ಗ. ಶಾಸ್ತ್ರವಿಹಿತವಾದ ಕರ್ಮಗಳನ್ನು ಆಚರಿಸಿ, ನಿಷಿದ್ಧ ಕರ್ಮಗಳನ್ನು ನಿರ್ದಯವಾಗಿ ವರ್ಜಿಸುವುದು, ನಿತ್ಯನೈಮಿತ್ತಿಕ ಕರ್ಮಗಳನ್ನು ಚಾಚೂ ತಪ್ಪದೆ ಅನುಸರಿಸುವುದೇ ಕರ್ಮ. ಹೀಗೆ ಮಾಡುವುದರಿಂದ ದೇಹ ಮನಸ್ಸುಗಳು ಶುದ್ಧವಾಗಿ ಜ್ಞಾನವನ್ನು ಸಂಪಾದಿಸುವ ಜೀವಿಯ ಆಕಾಂಕ್ಷೆಯು ತ್ವರಿತಗೊಳ್ಳುವುದು. ಜೀವ ಪ್ರಪಂಚದಲ್ಲಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಯಾವ ಫಲಾಪೇಕ್ಷೆ ಇಲ್ಲದೆ ಭಗವತ್ ಸೇವೆ ಎಂಬ ಭಾವದಿಂದ ಮಾಡುವುದೇ ಕರ್ಮಯೋಗ. ಕರ್ಮಯೋಗದ ಮುಂದಿನ ಸೋಪಾನವೇ ಜ್ಞಾನಯೋಗ. ಇಲ್ಲಿ ಜೀವ ತನ್ನ ಸ್ವರೂಪವನ್ನು ಉಪನಿಷತ್ತುಗಳ ಅಧ್ಯಯನದಿಂದಲೂ ಗುರುವನ್ನು ಮೊರೆಹೋಗುವುದರಿಂದಲೂ ಅರಿಯುತ್ತಾನೆ. ಪರಮಾತ್ಮನ ಪ್ರೇಮಮಯ ವ್ಯಕ್ತಿತ್ವವನ್ನು ಕುರಿತು, ಅದನ್ನು ನೆನೆನೆದು 'ಧೃವಾನುಸ್ಮೃತಿ' ಪ್ರೇಮಾನಂದ ಸಾಗರದಲ್ಲಿ ಮುಳುಗುವುದೇ ಭಕ್ತಿ ಎನಿಸುವುದು. ವಿಶಿಷ್ಟಾದ್ವೈತ ದರ್ಶನದಲ್ಲಿ ಭಕ್ತಿಗೆ ಅತ್ಯುನ್ನತ ಸ್ಥಾನವನ್ನು ಕೊಡಲಾಗಿದೆ. ಭಕ್ತಿಯ ಅತ್ಯುನ್ನತ ಸ್ಥಿತಿಯೇ ಪ್ರಪತ್ತಿಯೆನಿಸುವುದು. ಯಾವ ಶಾಸ್ತ್ರಜ್ಞಾನವೂ ಇಲ್ಲದೆ ಸ್ವಾರ್ಥತ್ಯಾಗದ ಮೂಲಕ ಪರಮಾತ್ಮನಾದ ನಾರಾಯಣನಲ್ಲಿ ಜೀವ ಅನನ್ಯ ಶರಣುಹೋಗುತ್ತಾನೆ. ತನು, ಮನ, ಧನ ಎಲ್ಲವನ್ನೂ ಯಾವ ನಿಬಂಧನೆಯನ್ನೂ ಒಡ್ಡದೆ, ನಾರಾಯಣನಿಗೆ ಸಮರ್ಪಿಸುತ್ತಾನೆ. ನಾರಾಯಣನೇ ಗತಿ, ಅವನೇ ಪರ, ಅವನ ಆಜ್ಞೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸದು, ಅವನೇ ಮೋಕ್ಷದಾತ; ಅವನನ್ನು ಒಲಿಸಿಕೊಳ್ಳುವ ಒಂದೇ ಒಂದು ಮಾರ್ಗವೆಂದರೆ ಸರ್ವಕಾರ್ಯಗಳ ಫಲಗಳನ್ನೂ ಅವನಿಗೆ ಪ್ರೀತಿ

ಯಿಂದ, ಅನನ್ಯ ಭಕ್ತಿಯಿಂದ, ನಿಷ್ಕಾಮದಿಂದ ಸಮರ್ಪಿಸುವುದು ಪ್ರಪತ್ತಿಮಾರ್ಗವೆನಿಸಿಕೊಳ್ಳುವುದು. ಈ ದರ್ಶನದಲ್ಲಿ ಪ್ರಪತ್ತಿ ಮಾರ್ಗವನ್ನು ದೈವಸಾಕ್ಷಾತ್ಕಾರಕ್ಕೆ ಇರುವ ಸ್ವತಂತ್ರವಾದ ಮಾರ್ಗವೆಂದೇ ಪರಿಗಣಿಸಲಾಗಿದೆ. ಪ್ರಪತ್ತಿ ಮಾರ್ಗವನ್ನು ಅನುಸರಿಸಲು ಜಾತಿ, ಮತ, ಕುಲಗಳ ಕಟ್ಟುಪಾಡುಗಳಿಲ್ಲ ಎಂದು ಈ ದರ್ಶನ ಸಾರುತ್ತದೆ. ಪ್ರಪತ್ತಿ ತತ್ವದ ಈ ಪ್ರತಿಪಾದನೆ ಜನಸಾಮಾನ್ಯರ ಶ್ರೇಯೋಭಿವೃದ್ಧಿಗೆ ನಾಂದಿಯಾಯಿತು ಎಂದು ಬೇರೆ ಹೇಳಬೇಕಾಗಿಲ್ಲ.

೮

ಶಕ್ತಿವಿಶಿಷ್ಟಾದ್ವೈತ ದರ್ಶನದ ಪ್ರಕಾರ ಜೀವನು ಮೂಲತಃ ಪರಮಶಿವನ ಅಂಶನಾದರೂ, ಮಾಯಾ ಶಕ್ತಿಯ ಆವರಣದಿಂದ ತನ್ನ ಸತ್ಯಸ್ವರೂಪದ ಅರಿವಿಲ್ಲದೆ ಅಜ್ಞಾನದಿಂದ ಸಂಸಾರದಲ್ಲಿ ತೊಳಲಾಡುತ್ತಿರುತ್ತಾನೆ. ತನ್ನ ಸತ್ಯಸ್ವರೂಪವನ್ನು ಅರಿತು ಶಿವಾನಂದವನ್ನು ಅನುಭವಿಸುವುದೇ ಮುಕ್ತಿ ಅಥವಾ ಮೋಕ್ಷ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಜೀವನು ತನ್ನ ನೈಜಸ್ವರೂಪವನ್ನು (ಸಚ್ಚಿದಾನಂದ) ಸಾಕ್ಷಾತ್ಕರಿಸಿಕೊಳ್ಳುವುದೇ ಮೋಕ್ಷ. ಜೀವನು ಪರಮಶಿವನಾದ ಲಿಂಗನ ಅಂಗ. ಅಂಗ ತನ್ನ ಮೂಲವಾದ ಲಿಂಗನಲ್ಲಿ ಲೀನಗೊಳ್ಳುವುದೇ ಮೋಕ್ಷ. ಇದನ್ನೇ ಲಿಂಗಾಂಗಸಾಮರಸ್ಯ ಎಂದು ಕರೆಯುವುದು. ಈ ದರ್ಶನದ ಪ್ರಕಾರ ಮೋಕ್ಷವು ವ್ಯಕ್ತಿಯು ಬದುಕಿರುವಾಗಲೇ ಸಾಕ್ಷಾತ್ಕರಿಸಿಕೊಳ್ಳಬಹುದಾದ ಆದರ್ಶ. ಇಲ್ಲಿಯೇ ಮತ್ತು ಈಗಲೇ ಮುಕ್ತಿ ಸಾಧ್ಯ ಎಂಬುದು ಈ ದರ್ಶನದ ಮಹತ್ವಪೂರ್ಣ ಸಿದ್ಧಾಂತ. ಮಾಯಾ ಶಕ್ತಿಯಿಂದ ಆವೃತ್ತನಾಗಿರುವ ಜೀವನಿಗೆ ತನ್ನ ಸತ್ಯಸ್ವರೂಪವನ್ನು ಅರಿಯಲು ಅಂತರಾಳದಲ್ಲಿ ನೆಲಸಿರುವ ಈಶ್ವರನೇ ಪ್ರೇರಕ. ಈ ಪ್ರೇರಣೆಯಿಂದ ಜೀವನು ತನ್ನ ಅಹಂಭಾವವನ್ನು ಕ್ರಮೇಣ ಹೋಗಲಾಡಿಸಿಕೊಂಡು ಬುದ್ಧಿ, ಮನ ಮತ್ತು ದೇಹವೆಲ್ಲವೂ ಶಿವನೇ ಎಂಬ ಭಾವವನ್ನು ಬೆಳಸಿಕೊಳ್ಳುತ್ತಾನೆ. ಹೀಗೆ ಅವನಲ್ಲಿ ಶಿವಭಾವ ಮೂಡಿದಂತೆಲ್ಲಾ ಶಿವನ ಅನುಗ್ರಹವೂ ಹೆಚ್ಚಾಗುತ್ತದೆ. ತತ್ಪರಿಣಾಮವಾಗಿ, ಮಾಯಾಶಕ್ತಿಯ ಪ್ರಭಾವ ಕ್ಷೀಣಿಸುತ್ತದೆ. ಆದುದರಿಂದ ಈ ದರ್ಶನದಲ್ಲಿ ಶಿವನ ಅನುಗ್ರಹಕ್ಕೆ 'ಶಕ್ತಿಪಾತ' ಎಂದು ಕರೆಯುತ್ತಾರೆ. ಅದರಿಂದ ಜೀವನ ಮನ, ಬುದ್ಧಿ, ಹೃದಯಗಳು ಶುದ್ಧಿಗೊಂಡು ಅವನು ಶಿವನ ಉಪಾಸನೆಯಲ್ಲಿ ತೊಡಗುತ್ತಾನೆ. ಹೀಗೆ, ಶಕ್ತಿಯು ಜೀವನನ್ನು ಸಂಸಾರದ ಜಂಜಾಟಕ್ಕೆ ಸಿಲುಕಿಸಿದರೆ, ಭಕ್ತಿ ಅವನನ್ನು ಶಿವನ ಕಡೆಗೆ ಕೊಂಡೊಯ್ಯುತ್ತದೆ. ಶಕ್ತಿಯು ಪರಮಶಿವನಿಗೆ ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಸಾಧನವಾಗಿರುವಂತೆ, ಅದೇ ಶಕ್ತಿಯು ಅವನು ಜೀವಾವಸ್ಥೆಯಲ್ಲಿರುವಾಗ ಮೋಚಕವಾದ ಭಕ್ತಿಯಾಗುತ್ತದೆ. ಹೀಗೆ ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ದರ್ಶನಗಳೆರಡರಲ್ಲೂ ಭಗವಂತನ ಅನುಗ್ರಹ ಅಥವಾ ಪ್ರಸಾದಕ್ಕೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲಿ ಜ್ಞಾನಕ್ರಿಯೆಗಳೆರಡನ್ನು ಒಳಗೊಂಡಿರುವ ಭಕ್ತಿಯೇ ಮುಕ್ತಿಯ ಸಾಧನೆ ಎಂದು ಪ್ರತಿಪಾದಿಸಲಾಗಿದೆ. ಸತ್ಯ ಸ್ವರೂಪದ ಜ್ಞಾನವೂ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಸೂಕ್ತವಾದ ಕ್ರಿಯಾಚರಣೆಯೂ ಅತ್ಯಗತ್ಯವಾದ ಸಾಧನಮಾರ್ಗವಾಗಿದೆ. ಈ ಸಾಧನಮಾರ್ಗವನ್ನು 'ಷಟ್ಸ್ಥಲ ಸಿದ್ಧಾಂತ' ಎಂದು ಕರೆಯುತ್ತಾರೆ. ಇದು ಶಕ್ತಿವಿಶಿಷ್ಟಾದ್ವೈತ ದರ್ಶನದ ವಿಶಿಷ್ಟ ಕೊಡುಗೆಯಾಗಿದೆ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ—ಇವೇ ಆ ಆರು ಸ್ಥಲಗಳು. ಇವನ್ನು ಇಲ್ಲಿ ಸಂಕ್ಷೇಪವಾಗಿ ವಿಶ್ಲೇಷಿಸಬಹುದು.

ಪ್ರಾರಂಭದಲ್ಲಿ ಬಾಹ್ಯಪೂಜೆಯ ಮೂಲಕ ಪರಮಶಿವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಪ್ರಯತ್ನಿಸುವ ಭಕ್ತ ಭಕ್ತಸ್ಥಿತಿಯಲ್ಲಿ ಪರಮಶಿವನನ್ನು ತನ್ನ ಅಂತರಂಗದಲ್ಲಿಯೇ

ಅನುಸಂಧಾನ ಮಾಡುವ ಚಿತ್ತಸ್ಥಿತಿಗೆ ಏರಿರುತ್ತಾನೆ. ಇಲ್ಲಿ ಭಕ್ತಿಯು ಶ್ರದ್ಧಾಭಕ್ತಿ ಎನಿಸುವುದು. ಅಂದರೆ ಅಜ್ಞಾನದಿಂದ ಅಲ್ಪ ವಿಷಯಗಳ ಭೋಗದಲ್ಲಿ ತೊಡಗಿರುವ ಆಶೆಯನ್ನು ಮಹಾ ವಿಷಯನಾದ ಪರಮಶಿವನೆಡೆಗೆ ತಿರುಗಿಸುವುದೇ ಶ್ರದ್ಧಾಭಕ್ತಿ ಎನಿಸುವುದು. ಈ ಶ್ರದ್ಧಾಭಕ್ತಿಯು ಮಲತ್ರಯಗಳ ಪ್ರಭಾವವನ್ನು ನಿಯಂತ್ರಿಸಲು ಸಹಕಾರಿಯಾಗುತ್ತದೆ. ಒಟ್ಟಾರೆ ಭಕ್ತನು ತನ್ನದೆಂಬ ಅಭಿಮಾನವನ್ನು ರಾಗದ್ವೇಷಗಳನ್ನು ತೊರೆದು, ಎಲ್ಲವೂ ಪರಮಶಿವನೆಂದು ಭಾವಿಸಿ ಶಿವಾನುಭವವನ್ನು ಹೊಂದಲು ಈ ಸ್ಥಿತಿಯಲ್ಲಿ ಕಾತುರನಾಗಿರುತ್ತಾನೆ.

ಮಾಹೇಶ್ವರಸ್ಥಿತಿಯಲ್ಲಿ ಭಕ್ತನ ಶ್ರದ್ಧಾಭಕ್ತಿ ವಿಕಾಸಗೊಂಡು ಸ್ಥಿರಗೊಳ್ಳುವುದರ ಮೂಲಕ ನಿಷ್ಠಾಭಕ್ತಿ ಎನಿಸುವುದು. ಈ ಭಕ್ತಿಯ ದೆಸೆಯಿಂದ ಭಕ್ತನು ಮಾಹೇಶ್ವರನೆನಿಸುವನು. ಅಂದರೆ ಸರ್ವೇಶ್ವರನಾದ ಮಹೇಶ್ವರನಿಗೆ ಹತ್ತಿರದ ಬಂಧುವಾಗುವನು, ಅಚ್ಚುಮೆಚ್ಚಿನವನಾಗುವನು.

ಪ್ರಸಾದಿಸ್ಥಿತಿಯಲ್ಲಿ ಮನಸ್ಸು ನಿಷ್ಠಾಭಕ್ತಿಯಿಂದ ವಿಕಸಿತಗೊಂಡು ಶಿವಮಯವಾಗತೊಡಗಿ ಅವಧಾನ ಭಕ್ತಿ ಎನಿಸುವುದು. ಅವಧಾನವೆಂದರೆ ಎಚ್ಚರಿಕೆ. ಈ ಸ್ಥಿತಿಯಲ್ಲಿ ಭಕ್ತನು ಬಹಳ ಎಚ್ಚರಿಕೆಯಿಂದ ಇದ್ದು ಶಿವನಿಗೆ ಅರ್ಪಿಸಿದವುಗಳನ್ನೇ ಶಿವಪ್ರಸಾದವೆಂದು ಭಾವಿಸಿ ಭೋಗಿಸುವನು. ಆದುದರಿಂದ ಪ್ರಸಾದಿಗೆ 'ಲಿಂಗಭೋಗೋಪಭೋಗಿ' ಎಂದೂ ಕರೆಯುವರು.

ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಿತಿಗಳಲ್ಲಿ ಜೀವಿಯು (ಅಂಗ) ಪರಮಶಿವನ (ಲಿಂಗ) ನಿರಂತರ ಸೇವೆಯಲ್ಲಿ ನಿರತನಾಗಿದ್ದೂ ಕರ್ಮಯೋಗವನ್ನು ಭಕ್ತಿಯಿಂದ ಆಚರಿಸುವುದರಿಂದ ಸಾಕಷ್ಟು ಶುದ್ಧ ಹೃದಯವುಳ್ಳವನಾಗಿ ಪ್ರಾಣಲಿಂಗಿ ಎನಿಸಿ ತನ್ನ ಅಂತರ್ಯದಲ್ಲಿ ನಿರ್ಲಿಪ್ತನಾಗಿ ನೆಲಸಿರುವ ಚೈತನ್ಯ ಶಕ್ತಿಯ ಅನುಭವವನ್ನು ಪಡೆದು ಬಾಹ್ಯದಲ್ಲೂ ಅದನ್ನೇ ಅನುಭವಿಸಲಾರಂಭಿಸುವನು.

ಪ್ರಾಣಲಿಂಗಿಯು ಶಿವಪ್ರಕಾಶದ ಅನುಭವದಿಂದ ಭೇದವನ್ನು ಹೋಗಲಾಡಿಸಿಕೊಂಡಿರುವುದರಿಂದ ಶರಣ ಸ್ಥಿತಿಯಲ್ಲಿ ಆನಂದವನ್ನೂ ಅನುಭವಿಸುತ್ತಾನೆ. ಶರಣನು ಆನಂದಭಕ್ತಿಯಿಂದ ತನ್ನನ್ನು ಪರಮಶಿವನಿಗೆ ಸಮರ್ಪಿಸಿಕೊಂಡು ಶಿವಾನಂದವನ್ನು ಅನುಭವಿಸುತ್ತಾ ಅದರಲ್ಲೇ ಮಗ್ನನಾಗುತ್ತಾನೆ. ಶಕ್ತಿ ವಿಶಿಷ್ಟಾದ್ವೈತದರ್ಶನದ ಈ ಸ್ಥಿತಿ ವಿಶಿಷ್ಟಾದ್ವೈತದರ್ಶನದ ಪ್ರಪತ್ತಿ ಸ್ಥಿತಿಯನ್ನು ಬಹಳವಾಗಿ ಹೋಲುತ್ತದೆ ಎಂದು ಹೇಳಬಹುದು. ಶರಣನು ಈ ಸ್ಥಿತಿಯಲ್ಲಿ ಸತಿಪತಿ ಭಾವದಿಂದ ಶಿವಾನಂದವನ್ನು ಅನುಭವಿಸುವನು.

ಅಂಗನು ಹೊರಗಿನ ಪದಾರ್ಥಗಳೆಲ್ಲವನ್ನೂ ಲಿಂಗನಿಗೆ ಅರ್ಪಿಸಿ ಪ್ರಸಾದವಾಗಿಸಿಕೊಂಡು ಭೋಗಿಸುವುದರಿಂದ ಇನ್ನುಳಿದ ತನ್ನೊಳಗಿನದೇ ಆದ ತೃಪ್ತಿಯೆಂಬ ಪದಾರ್ಥವನ್ನು ಸಮರಸ ಭಕ್ತಿಯಿಂದ ತನ್ನ ಅಂತರ್ಯದಲ್ಲೇ ನೆಲಸಿರುವ ಮಹಾಲಿಂಗಕ್ಕೆ ಅರ್ಪಿಸಿ, ಆ ತೃಪ್ತಿ ಪ್ರಸಾದವನ್ನು ತಾನೂ ಭೋಗಿಸುತ್ತಾ ಮಹಾಲಿಂಗನಲ್ಲಿ ಏಕೀಭೂತನಾಗಿ ಐಕ್ಯನೆನಿಸುವನು. ಈ ಸ್ಥಿತಿಯಲ್ಲಿ ನೀನೆಂಬ ಶಿವಭಾವವೂ ನಾನೆಂಬ ಜೀವಭಾವವೂ ಐಕ್ಯನಾದನೆಂಬ ಹೇಳಿಕೆಯೂ ಪ್ರತ್ಯೇಕವಾಗಿರುವುದಿಲ್ಲ. ಈ ಸ್ಥಿತಿಯನ್ನೇ "ನೀನೆನ್ನೆ, ನಾನೆನ್ನೆ, ಲಿಂಗವೆನ್ನೆ. ಲಿಂಗೈಕ್ಯವೆನ್ನೆ" ಎಂದು ವಚನಕಾರರು ವಿವರಿಸಲು ಪ್ರಯತ್ನಿಸಿದ್ದಾರೆ. ಲಿಂಗನಲ್ಲಿ ಲೀನನಾದ ಅಂಗನು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವನು. ಹೀಗೆ ಸಮರಸ ಭಕ್ತಿಯಿಂದ ಅಂಗನು ಲಿಂಗನೊಡನೆ ಐಕ್ಯಹೊಂದುವುದಕ್ಕೆ ಲಿಂಗಾಂಗಸಾಮರಸ್ಯವೆಂದು ಹೆಸರು.

ಶಿವನು ತಾನು ದಾಸನೆಂದು ಭಾವಿಸಿ (ದಾಸೋಹಂಭಾವ) ಭಕ್ತಸ್ಥಲದಿಂದ ಶಿವಪಥವನ್ನು

ಆರಂಭಿಸಿ, ಶರಣಸ್ಥಲಕ್ಕೆ ಬರುವ ವೇಳೆಗೆ ದಾಸಭಾವವನ್ನು ಕ್ರಮೇಣ ಕಳೆದುಕೊಂಡು ಐಕ್ಯ ಸ್ಥಲದಲ್ಲಿ ಶಿವಭಾವದಲ್ಲಿ (ಶಿವೋಹಂಭಾವ) ಸಮರಸವಾಗಿ ಲೀನಗೊಂಡು ಶಿವನೇ ಆಗುತ್ತಾನೆ. ಭಕ್ತಿಪಂಥದ ಪ್ರಾರಂಭದಲ್ಲಿದ್ದ ಭೇದವು ಅಂತ್ಯದಲ್ಲಿ ಇಲ್ಲವಾಗುತ್ತದೆಂದರೆ ತಾರ್ಕಿಕವಾಗಿ ಅಸಮಂಜಸ ಹಾಗೂ ಅಸಂಬದ್ಧವೆನಿಸಿದರೂ, ನೈಸರ್ಗಿಕವಾಗಿ ಜಗದ್ವ್ಯಾಪಾರವಸ್ಥೆಯಲ್ಲಿ ವ್ಯವಹರಿಸಬೇಕಾದ ಜೀವನಿಗೆ ಅದು ಸಹಜ ಮತ್ತು ಸ್ವಾಭಾವಿಕವೆನಿಸುತ್ತದೆ ಎಂದು ಶಕ್ತಿವಿಶಿಷ್ಟಾದ್ವೈತದರ್ಶನ ಪ್ರತಿಪಾದಿಸುತ್ತದೆ, ಜೀವಿಗೆ 'ಜೀವತ್ವ' ಸಹಜ ಹಾಗೂ ಸ್ವಾಭಾವಿಕವಾದುದೆನ್ನುವ ಈ ದರ್ಶನ, ಸ್ವಾಭಾವಿಕವಾದುದಕ್ಕೆ ನಿವೃತ್ತಿ ಇಲ್ಲವೆಂಬ ಆಕ್ಷೇಪವನ್ನು ಒಪ್ಪದೆ 'ಜೀವ–ಬ್ರಹ್ಮ' (ಪರಮಶಿವ)ರ ಭೇದ ಸ್ವಾಭಾವಿಕ, ಅಭೇದ ವಾಸ್ತವಿಕ ಎಂದಷ್ಟೇ ಹೇಳುತ್ತದೆ. 'ಜೀವತ್ವ' ಕೇವಲ ಔಪಾಧಿಕ ; ಆದುದರಿಂದ ಮೋಕ್ಷಸ್ಥಿತಿಯಲ್ಲಿ ಅದರ ನಿವೃತ್ತಿ ಸಾಧ್ಯ ಎಂಬ ಅದ್ವೈತದರ್ಶನದ ಪ್ರತಿಪಾದನೆ ಈ ಸಂದರ್ಭದಲ್ಲಿ ತಾರ್ಕಿಕವಾಗಿ ಎಷ್ಟು ಸಮಂಜಸವಾದುದು ಎಂದು ಇಲ್ಲಿ ಗೋಚರಿಸದೆ ಇರದು. ತುಪ್ಪವು ಹಾಲಿನಲ್ಲಿದ್ದರೂ ನಾವು ಹಾಲನ್ನು ತುಪ್ಪವೆನ್ನುವುದಿಲ್ಲ. ಹಾಗೆಯೇ ಶಿವನು ಜೀವನದಲ್ಲಿದ್ದರೂ ಅವನನ್ನು ಶಿವನೆನ್ನಲಾಗುವುದಿಲ್ಲ. ಹಾಲಿನಿಂದ ತುಪ್ಪವನ್ನು ಹೊರತೆಗೆದಮೇಲೆ ಅದನ್ನು ತುಪ್ಪವೆಂದು ಹೇಳುವ ಹಾಗೆ, ಜೀವನು ತನ್ನ ಶಿವರೂಪವನ್ನು ಹೊಂದಿದ ಮೇಲೆ ಅವನೇ ಶಿವನಾಗುತ್ತಾನೆ. ಇದು ಶಕ್ತಿ ವಿಶಿಷ್ಟಾದ್ವೈತ ದರ್ಶನದ ಸ್ಪಷ್ಟ ನಿಲುವು.

ಅಂಗನ ಷಟ್ಸ್ಥಲೋಪಾಸನೆಗೆ ಅನೇಕ ಅಡಚಣೆಗಳು ಇರುತ್ತವೆ. ಅವನ್ನು ನಿವಾರಿಸಿ ಭಕ್ತಿಯಾಚರಣೆಯನ್ನು ಅಧಿಕಗೊಳಿಸಲು ಎಂಟು ಆವರಣಗಳು ಅವನಿಗೆ ರಕ್ಷಾಕವಚಗಳಾಗಿರುವುವು. ಇವುಗಳನ್ನು ಅಷ್ಟಾವರಣಗಳು ಎಂದು ಕರೆಯುತ್ತಾರೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ—ಇವೇ ಎಂಟು ಆಚರಣೆಗಳು. ಅಂಗನ ಷಟ್ಸ್ಥಲಾಚರಣೆಗೆ ಉಪಯುಕ್ತವಾಗುವಂತೆ ಐದು ಆಚಾರಗಳನ್ನು ಹೇಳಲಾಗಿದೆ. ಇವುಗಳನ್ನು ಪಂಚಾಚಾರಗಳು ಎಂದು ಕರೆಯುತ್ತಾರೆ. ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರ–ಇವೇ ಆ ಐದು ಆಚಾರಗಳು.

ಷಟ್ಸ್ಥಲಸಿದ್ಧಾಂತದ ಮೂಲ ಉದ್ದೇಶವು ಜೀವನಿಗೆ ತನ್ನ ಸ್ವರೂಪದ ಸಾಕ್ಷಾತ್ಕಾರವನ್ನುಂಟುಮಾಡುವುದೇ ಆಗಿದೆ. ಜೀವನು ಕ್ರಮೇಣವಾಗಿ ಬಾಹ್ಯ ಜಗತ್ತಿನ ಮತ್ತು ತನ್ನ ದೇಹದ ಬಂಧನದಿಂದ ಬಿಡಿಸಿಕೊಂಡು ಅಂತರ್ಮುಖನಾಗಿ ತನ್ನ ಸತ್ಯ ಸ್ವರೂಪವಾದ ಸಚ್ಚಿದಾನಂದವನ್ನು ಅನುಭವಿಸಲು ವಿವಿಧ ಸ್ಥಲಗಳು ಸೋಪಾನಗಳಾಗಿವೆ. ಷಟ್ಸ್ಥಲಸಿದ್ಧಾಂತವು ವರ್ಣಜಾತಿಗಳ ಭೇದವಿಲ್ಲದೆ ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುತ್ತದೆ. ಈ ಸಿದ್ಧಾಂತದ ಮತ್ತೊಂದು ವೈಶಿಷ್ಟ್ಯವೇನೆಂದರೆ, ಇದು ಕಾಯಕವನ್ನು ವಿಶೇಷವಾಗಿ ಒತ್ತಿ ಹೇಳುತ್ತದೆ. 'ಕಾಯಕ'ವೆಂದರೆ 'ಮೂಲತಃ ದೇಹಕ್ಕೆ ಸಂಬಂಧಿಸಿದ್ದು' ಎಂದು ಅರ್ಥ. ಪ್ರತಿಯೊಬ್ಬ ವ್ಯಕ್ತಿಯೂ ದೈಹಿಕ ಶ್ರಮವನ್ನು ಒಳಗೊಂಡಿರುವ ವೃತ್ತಿಯೊಂದನ್ನು ಅವಲಂಬಿಸಲೇ ಬೇಕು. ತಾನು ಶ್ರಮಪಡದೆ ಇತರರ ಶ್ರಮವನ್ನು ಅವಲಂಬಿಸಬಾರದು. ವೃತ್ತಿಗಳಲ್ಲಿ ಮೇಲು ಕೀಳು ಎಂಬ ಭೇದವಿಲ್ಲವೆಂದು ಸಾರಿದ ಕಾಯಕತತ್ತ್ವವು, ವೃತ್ತಿಗೌರವವನ್ನು ತನ್ಮೂಲಕ ವ್ಯಕ್ತಿಗೌರವವನ್ನು ಸ್ಥಾಪಿಸುವಲ್ಲಿ ಫಲಪ್ರದವಾಯಿತು. ವ್ಯಕ್ತಿ ತಾನು ಅನುಸರಿಸುವ ಯಾವುದೇ ವೃತ್ತಿಯನ್ನು ತನ್ನ ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ಒಂದು ಭಾಗವೆಂದು ಭಾವಿಸಬೇಕು. ಈ ದೃಷ್ಟಿಯಿಂದಲೇ ಬಸವಣ್ಣನವರು 'ಕಾಯಕವೇ ಕೈಲಾಸ' ಎಂದಿದ್ದಾರೆ. ವರ್ಣಧರ್ಮವು ವಿವಿಧ ವರ್ಣಗಳಿಗೆ ವೃತ್ತಿಯನ್ನು ಗೊತ್ತುಮಾಡಿ ಅದರಲ್ಲಿ ಮೇಲು, ಕೀಳು, ಉಚ್ಚ, ನೀಚ ಭಾವವನ್ನು ಬಿತ್ತಿ ಅಸಮಾನತೆಯನ್ನು ಉಂಟುಮಾಡಿತ್ತು. ಅಸ್ಪೃಶ್ಯತೆಯ ಆಚರಣೆಯು ಜೀವನ

ಕ್ರಮದ ಒಂದು ಭಾಗವೇ ಆಗಿತ್ತು. ಷಟ್ಸ್ಥಲಸಿದ್ಧಾಂತ ಮತ್ತು ಅದರಲ್ಲಿನ ಕಾಯಕತತ್ತ್ವಗಳು ವರ್ಣಧರ್ಮದ ಆಧಾರ ಮತ್ತು ಔಚಿತ್ಯವನ್ನು ಪ್ರಬಲವಾಗಿ ಪ್ರಶ್ನಿಸಿದವು. ಸಾಮಾಜಿಕ ಕೆಡುಕುಗಳನ್ನು ನಿರ್ಮೂಲನ ಮಾಡುವಲ್ಲಿ ಕಾಯಕತತ್ತ್ವ ಕ್ರಾಂತಿಕಾರಕವಾಗಿ ಪರಿಣಮಿಸಿತು.

ವಿಶಿಷ್ಟಾದ್ವೈತದರ್ಶನದ ಶ್ರೀವೈಷ್ಣವ ಪಂಥದಲ್ಲೂ, ಭಕ್ತಿ ಮತ್ತು ಪ್ರಪತ್ತಿಗಳ ಆಚರಣೆಯ ಮೂಲಕ ವರ್ಣವ್ಯವಸ್ಥೆಯ ಬಿಗಿಕಟ್ಟನ್ನು ಸಡಿಲಿಸಲು ಪ್ರಯತ್ನಿಸಿದ್ದರೂ, ಶಿವಶರಣರು ಈ ಮಾರ್ಗದಲ್ಲಿ ಸಾಧಿಸಿದ ಪ್ರಗತಿಯನ್ನು ಅದು ಮುಟ್ಟಲಿಲ್ಲ. ಮಾನವ ಸಮಾನತೆಯ ತೀವ್ರತೆ ಎರಡೂ ದರ್ಶನಗಳಲ್ಲಿ ಕಂಡುಬರುವ ಮಹತ್ವಪೂರ್ಣ ಅಂಶ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೦೬

ಮೈಸೂರು ವಿಶ್ವವಿದ್ಯಾನಿಲಯದ ಈಚಿನ ಪ್ರಕಟಣೆಗಳು

		ಬೆಲೆ
1.	ಕನ್ನಡ ಗ್ರಂಥಸೂಚಿ ಸಂಪುಟ 4 (ಗದ್ಯ ನಾಟಕ ಸಣ್ಣಕತೆ ಪ್ರಬಂಧ)	60-00
2.	ಕನ್ನಡ ಗ್ರಂಥಸೂಚಿ ಸಂಪುಟ 5 (ಕಾದಂಬರಿ)	50-00
3.	ಜೈಮಿನಿ ಭಾರತ ಸಂಗ್ರಹ	13-00
4.	ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು	9-00
5.	ವಿದ್ಯುತ್ಕಾಂತ ಸಿದ್ಧಾಂತ	21-00
6.	ಕನ್ನಡ ಒಡಪುಗಳು	3-50
7.	ಬಿಜಾಪುರ ಜಿಲ್ಲೆಯ ಲಾವಣಿಗಳು	7-00
8.	ಕೋಡಗದ ಮಾರಯ್ಯನ ವಚನಗಳು	5-00
9.	ಕಲೆಯ ನೆಲೆ	5-00
10.	ಬ್ರಿಟಿಷ್ ಪತ್ರಿಕೋದ್ಯಮ	3-00
11.	ಜೇನು ಸಾಕಣೆ	14-00
12.	ಜೇನ್ ಆಸ್ಟಿನ್	5-00
13.	ದ್ವಿತೀಯ ಭಾಷಾ ಬೋಧನೆ	9-00
14.	ವ್ಯವಸಾಯ ಪ್ರಗತಿ ಸಾಧನೆಯ ಸೂತ್ರಗಳು	5-00
15.	ಭಾರತೀಯ ನ್ಯಾಯ ಪದ್ಧತಿ	15-00
16.	ಮೌಲ್ಯ ಮತ್ತು ಬಂಡವಾಳ	25-00
17.	ಭೂಗೋಳ ವಿಜ್ಞಾನಕೋಶ	60-00
18.	ಸಂಪ್ರದಾಯದ ಹಾಡುಗಳು	20-00
19.	ಜಡವಸ್ತುವಿನ ಗುಣಧರ್ಮಗಳು	9-00
20.	ವಿಕಾಸ ಮನೋವಿಜ್ಞಾನ	40-00
21.	Current trends in folklore	20-00
22.	Poverty of intelutualism in India	6-00
23.	Archaeology of Karnataka	23-00
24.	Problams of rural industrialisation and reconstruction	6-00
25.	Trade unions and industrial peace in Karnataka	10-00

ಪ್ರತಿಗಳಿಗೆ ಹಾಗೂ ಉಚಿತ ಪಟ್ಟಿಗೆ ಬರೆಯಿರಿ :

ಡೈರೆಕ್ಟರ್, ಪ್ರಸಾರಾಂಗ, ಮೈಸೂರು-570 012.